ಭಾನುವಾರ, ನವೆಂಬರ್ 26, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 326 | ಪುಟ 20

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬದಲಾಗುತ್ತಿರುವ ರಿಯಾಲಿಟಿ ಶೋಗಳ ಸ್ವರೂಪದ ಮೇಲೆ ಬೆಳಕು ಚೆಲ್ಲುವ ಪ್ರತಿಕ್ರಿಯೆಗಳ ಗುಚ್ಛ

ಹೂಡಿಕೆಯತ್ತ ಮಹಿಳೆ ಒಲವು 8

ಅಗಲಿದ ವೀರ ಯೋಧನಿಗೆ ಅಂತಿಮ ನಮನ

'ಎರಡು ಕಡೆ ನಿಲ್ಲಿಸಿ ನನ್ನ ಜೀವ ತೆಗೆದರು' 5

ಹುತಾತ್ಮ ಕ್ಯಾಪ್ಟನ್ ಪ್ರಾಂಜಲ್‌ಗೆ ಕಣ್ಣೀರ ವಿದಾಯ 7

### ಸರ್ಕಾರಿ ವ್ಯವಸ್ಥೆಯಡಿ ರೋಗಿಗಳಿಗೆ ಸಮರ್ಪಕವಾಗಿ ಸಿಗದ ಸೂಪರ್ ಸ್ಪೆಷಾಲಿಟಿ ಸೇವೆ

# ಆಸ್ಪತ್ರೆಯಿದ್ದರೂ ತಜ್ಞರಿಲ್ಲ...

• ವರುಣ ಹೆಗಡೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡ ಚಿಕ್ಕಬಳ್ಳಾಪುರದ ಗೌರಿಬಿದನೂರಿನ 36 ವರ್ಷದ ವ್ಯಕ್ತಿಗೆ ತುರ್ತು ಚಿಕಿತ್ಸೆ ಕೊಡಿಸಲು ಕುಟುಂಬಸ್ಥರು ಜಿಲ್ಲೆಯಲ್ಲಿನ ಆಸ್ಪತ್ರೆಗಳಿಗೆ ಇಡೀ ದಿನ ಅಲೆದಾಟ ನಡೆಸಿದರು. ಅಲ್ಲಿನ ವೈದ್ಯರು ಕೈಚೆಲ್ಲಿದ್ದ-ರಿಂದ ಬೆಂಗಳೂರಿನ ಯಶವಂತಪುರದ ಖಾಸಗಿ ಆಸ್ಪತ್ರೆಗೆ ಕರೆತಂದರು. ಆದರೆ, 76 ಕಿ.ಮೀ. ದೂರ ಬರುವಷ್ಟರಲ್ಲಿ ಅವರ ಮಿದುಳು ನಿಷ್ಕ್ರಿಯವಾಗಿತ್ತು.

2022ರ ಡಿ.16ರಂದು ನಡೆದ ಈ ಪ್ರಕರಣ ಸರ್ಕಾರಿ ವೈದ್ಯಕೀಯ ವ್ಯವಸ್ಥೆಯ ವೈಫಲ್ಯಕ್ಕೆ ಉದಾಹರಣೆ. ಈಗಲೂ ಬೆಂಗಳೂರಿನ ಸುತ್ತಮುತ್ತ ಇರುವ ಜಿಲ್ಲೆಯ ಜನರು ಸಹ ಖಾಸಗಿ ಆಸ್ಪತ್ರೆಗಳನ್ನೇ ಅರಸಿ, ರಾಜಧಾನಿಯತ್ತ ಮುಖಮಾಡಬೇಕಾದ ಸ್ಥಿತಿಯಿದೆ. ಇನ್ನು ಉತ್ತರ ಕನ್ನಡದಂತಹ ಕರಾವಳಿ ಜಿಲ್ಲೆ ಮತ್ತು ಕೊಡಗು ಮತ್ತು ಚಿಕ್ಕಮಗಳೂರಿನಂತಹ ಮಲೆನಾಡಿನ ಜಿಲ್ಲೆಗಳಲ್ಲಿನ ಜನರಿಗೆ ತುರ್ತು ಚಿಕಿತ್ಸೆ ಹಾಗೂ ತೃತೀಯ ಹಂತದ ವೈದ್ಯಕೀಯ ಸೇವೆ ಪಡೆಯುವಿಕೆ ಸವಾಲಾಗಿದ್ದು, ನೂರಾರು ಕಿ.ಮೀ. ಸಾಗಬೇಕಾಗಿದೆ.

ರಾಜ್ಯದಲ್ಲಿ 2 ಸಾವಿರಕ್ಕೂ ಅಧಿಕ ಸರ್ಕಾರಿ ಆಸ್ಪತ್ರೆಗಳಿವೆ. ಆದರೆ, ಅಪಘಾತ, ಹೃದಯಾಘಾತದಂತಹ ತುರ್ತು ಸಂದರ್ಭದಲ್ಲಿ ಬಹುತೇಕ ಸಾಮಾನ್ಯ ಜನರು ಈಗಲೂ ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾದ ಸ್ಥಿತಿಯಿದೆ. ಜಿಲ್ಲಾ ಆಸ್ಪತ್ರೆಗಳು ವೈದ್ಯಕೀಯ ಕಾಲೇಜುಗಳಾಗಿ ಮಾರ್ಪಡುತ್ತಿದ್ದರೂ ಅಗತ್ಯ ಮೂಲಸೌಕರ್ಯ, ತಜ್ಞ ವೈದ್ಯರ ಕೊರತೆಯಿಂದಾಗಿ ತುರ್ತು ಸಂದರ್ಭದಲ್ಲಿ ಚಿಕಿತ್ಸೆಗಳು ದೊರೆಯದಂತಾಗಿದೆ.

ಹೃದಯ ಹಾಗೂ ಮೂತ್ರಪಿಂಡ ಸೇರಿ ನಿರ್ದಿಷ್ಟ ಅಂಗಾಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ, ಮಕ್ಕಳು ಹಾಗೂ ತಾಯಂದಿರ ಆರೋಗ್ಯ ವೃದ್ಧಿಗೆ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಮತ್ತು ತಜ್ಞರನ್ನು ಒಳಗೊಂಡಿರುವ 10ಕ್ಕೂ ಅಧಿಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸರ್ಕಾರಿ ವ್ಯವಸ್ಥೆಯಡಿ ರಾಜ್ಯದಲ್ಲಿವೆ. ಆದರೆ, ಬಹುತೇಕ ಎಲ್ಲ ಆಸ್ಪತ್ರೆಗಳು ಬೆಂಗಳೂರು ಕೇಂದ್ರೀಕೃತವಾಗಿದ್ದು, ರಾಜ್ಯದಾದ್ಯಂತ ಈ ಆಸ್ಪತ್ರೆಗಳ ಶಾಖೆ ವಿಸ್ತರಣೆ ಯಾಗಿಲ್ಲ. ಹೀಗಾಗಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ವಿವಿಧ ವೈದ್ಯಕೀಯ ಸಂಸ್ಥೆಗಳ ಆಸ್ಪತ್ರೆಗೆ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಹೊರರೋಗಿಗಳು ಬರುತ್ತಿದ್ದಾರೆ. ಆಸ್ಪತ್ರೆ ದಾಖಲಾತಿ, ಶಸ್ತ್ರಚಿಕಿತ್ಸೆಗೆ ತಿಂಗಳಾನುಗಟ್ಟಲೆ ಅಲೆದಾಟ ನಡೆಸಬೇಕಾಗಿದೆ.

ಹೃದ್ರೋಗ ಚಿಕಿತ್ಸೆಗೆ ಹೆಸರಾದ ಬೆಂಗಳೂರಿನಲ್ಲಿರುವ ಜಯದೇವ ಆಸ್ಪತ್ರೆಯು ಮೈಸೂರು ಹಾಗೂ ಕಲಬುರಗಿಯಲ್ಲಿ ಶಾಖೆಗಳನ್ನು ಹೊಂದಿದೆ. ಬೆಂಗಳೂರಿನ ರಾಜಾಜಿನಗರದ ಇಎಸ್ ಐಸಿ-ಎಂಎಚ್ ಆಸ್ಪತ್ರೆ, ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಘಟಕವನ್ನು ಹೊಂದಿದೆ. ಕ್ಯಾನ್ಸರ್ ಚಿಕಿತ್ಸೆಗೆ ಸ್ಥಾಪಿತವಾದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶಾಖೆ ಕಲಬುರಗಿಯಲ್ಲಿ ಮಾತ್ರ ಇದೆ. ಮಾನಸಿಕ ಕಾಯಿಲೆಗಳ ಚಿಕಿತ್ಸೆಗೆ ಪ್ರಸಿದ್ಧಿ ಪಡೆದಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಶಾಖೆ ಧಾರವಾಡದಲ್ಲಿ ಮಾತ್ರ ಕಾಣಬಹುದು. ಜಿಲ್ಲಾ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳಲ್ಲಿ ಹೃದಯ ವಿಜ್ಞಾನ, ಮಾನಸಿಕ ಆರೋಗ್ಯ ವಿಜ್ಞಾನ ಸೇರಿ ವಿವಿಧ ವಿಭಾಗಗಳಿದ್ದರೂ ತಜ್ಞ ವೈದ್ಯರ ತಂಡವಿಲ್ಲ.

6ನೇ ಪುಟ ನೋಡಿ

ಬೆಳಗಾವಿಯಲ್ಲಿ ವರ್ಷದ ಹಿಂದೆ ಆರಂಭವಾದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸಾರ್ವಜನಿಕರಿಗೆ ಇನ್ನೂ ಲಭ್ಯವಾಗಿಲ್ಲ

**ಒಳನೋಟ**

### ರಾಜ್ಯದಲ್ಲಿ ಮಂಜೂರಾಗಿರುವ ಹುದ್ದೆಗಳಲ್ಲಿ ಕೊರತೆ ಪ್ರಮಾಣ

| | |
|---|---|
| ಪ್ರಸೂತಿ ತಜ್ಞರು | 14% |
| ಶುಶ್ರೂಷಕರು | 33% |
| ಪ್ರಯೋಗಾಲಯ ತಂತ್ರಜ್ಞರು | 32% |
| ವೈದ್ಯಕೀಯ ಅಧಿಕಾರಿಗಳು | 17% |
| ತಜ್ಞ ವೈದ್ಯರು | 22% |
| ದಂತ ವೈದ್ಯರು | 22% |

(ಕೇಂದ್ರ ಆರೋಗ್ಯ ಸಚಿವಾಲಯದ ರಾಷ್ಟ್ರೀಯ ಆರೋಗ್ಯ ಸೇವಾ ಸಂಪನ್ಮೂಲ ಕೇಂದ್ರದ ಮಾನವ ಸಂಪನ್ಮೂಲ ವರದಿ)

### 'ವೈದ್ಯಕೀಯ ಸೇವೆ ಬಲವರ್ಧನೆ'

ಜಿಲ್ಲಾ ಮಟ್ಟದಲ್ಲಿಯೇ ಕ್ಯಾನ್ಸರ್ ಪತ್ತೆ, ಹೃದಯಾಘಾತಕ್ಕೆ ಚಿಕಿತ್ಸೆ ಸೇರಿ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಶ್ವಾಸಕೋಶದ ಕ್ಯಾನ್ಸರ್ ಪತ್ತೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ತಪಾಸಣೆ ವ್ಯವಸ್ಥೆ ಅಳವಡಿಕೆಗೆ ಅಸ್ಟ್ರಾ ಜೆನಕಾ ಸಂಸ್ಥೆ ಜತೆಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಹಠಾತ್ ಹೃದಯಾಘಾತಗಳಿಂದ ಸಂಭವಿಸುತ್ತಿರುವ ಸಾವು ತಡೆಯಲು ಪುನೀತ್ ರಾಜಕುಮಾರ್ ಹೃದಯ ಜ್ಯೋತಿ ಯೋಜನೆ ಸಹಕಾರಿಯಾಗಲಿದೆ. ಈ ಯೋಜನೆ ಮೂಲಕ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲೇ ಉಚಿತವಾಗಿ 'ಟೆನೆಕ್ಟ್ ಪ್ಲಸ್' ಚುಚ್ಚುಮದ್ದನ್ನು ಒದಗಿಸಲಾಗುವುದು. ಆಸ್ಪತ್ರೆಗಳಲ್ಲಿ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಅಳವಡಿಸಿ-ಕೊಳ್ಳಲಾಗುತ್ತಿದೆ.

**ದಿನೇಶ್ ಗುಂಡೂರಾವ್,**
ಆರೋಗ್ಯ ಸಚಿವ

## ಅರಣ್ಯ ಕಾಯ್ದೆ ಉಲ್ಲಂಘನೆ

# ₹10 ಲಕ್ಷದವರೆಗೆ ದಂಡ

### ರಾಜ್ಯ ಆಡಳಿತ ಸುಧಾರಣಾ ಆಯೋಗದ ಆರನೇ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಅರಣ್ಯ ಕಾಯ್ದೆ-1963ರ ಉಲ್ಲಂಘನೆ ಆರೋಪದಡಿ ದಂಡ ವಿಧಿಸಿ ಮುಕ್ತಾಯಗೊಳಿಸಬಹುದಾದ ಪ್ರಕರಣಗಳಲ್ಲಿ ದಂಡದ ಮೊತ್ತವನ್ನು ₹10 ಲಕ್ಷದವರೆಗೆ ಹೆಚ್ಚಳ ಮಾಡುವಂತೆ ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್ ನೇತೃತ್ವದ ಎರಡನೇ ಆಡಳಿತ ಸುಧಾರಣಾ ಆಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತನ್ನ ಆರನೇ ವರದಿಯನ್ನು ಶನಿವಾರ ಸಲ್ಲಿಸಿತು. ಹಲವು ಪ್ರಮುಖ ಇಲಾಖೆಗಳಿಗೆ ಸಂಬಂಧಿಸಿದಂತೆ ಶಿಫಾರಸುಗಳನ್ನು ವರದಿಯಲ್ಲಿ ನೀಡಲಾಗಿದೆ.

'ಕರ್ನಾಟಕ ಅರಣ್ಯ ಕಾಯ್ದೆ-1963 ಸೆಕ್ಷನ್ 72 ಮತ್ತು 73ರ ಉಲ್ಲಂಘನೆಯಡಿ ದಾಖಲಿಸಿದ ಒಂದು ಲಕ್ಷ ಪ್ರಕರಣಗಳು ಬಾಕಿ ಇವೆ. ಅವುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕಾಯ್ದೆಗೆ ತಿದ್ದುಪಡಿ ತಂದು, ಉಪ ವಲಯ ಅರಣ್ಯಾಧಿಕಾರಿಗಳಿಗೂ ದಂಡ ವಿಧಿಸುವ (ಕಾಂಪೌಂಡ್) ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಬೇಕು' ಎಂದು ಆಯೋಗ ಶಿಫಾರಸು ಮಾಡಿದೆ.

ಕಾಂಪೌಂಡ್ ಮಾಡಬಹುದಾದ ಪ್ರಕರಣಗಳಲ್ಲಿ ವಿಧಿಸುವ ದಂಡದ ಗರಿಷ್ಠ ಮಿತಿಯನ್ನು 1981ರಲ್ಲಿ ₹50,000 ಎಂದು ನಿಗದಿಪಡಿಸಲಾಗಿತ್ತು. ಪ್ರಸ್ತುತ ಸಂದರ್ಭದ ಹಣದುಬ್ಬರಕ್ಕೆ ಅನುಗುಣವಾಗಿ ದಂಡದ ಗರಿಷ್ಠ ಮೊತ್ತವನ್ನು 20 ಪಟ್ಟು ಅಂದರೆ, ₹10 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಶಿಫಾರಸಿನಲ್ಲಿ ತಿಳಿಸಿದೆ.

7ನೇ ಪುಟ ನೋಡಿ

### ಇತರ ಪ್ರಮುಖ ಶಿಫಾರಸುಗಳು

- ದೀರ್ಘ ಕಾಲದಿಂದ ನಿವೇಶನವನ್ನು ಖಾಲಿ ಇರಿಸಿಕೊಂಡ ಮಾಲೀಕರಿಗೆ ದಂಡ ವಿಧಿಸಬೇಕು
- ಕೇಂದ್ರದ ಮಾದರಿಯಲ್ಲಿ ರಾಜ್ಯದಲ್ಲೂ ಗಣಿ ಬ್ಯೂರೊ ಆರಂಭಿಸಬೇಕು
- ಸಕ್ಕರೆ ನಿರ್ದೇಶನಾಲಯದಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಬೇಕು
- ಸಕ್ರಿಯ ನೀರು ಬಳಕೆದಾರರ ಸಂಘಗಳಿಗೆ ವಾರ್ಷಿಕ ₹ 2 ಲಕ್ಷ ಅನುದಾನ ನಿಡಬೇಕು
- ಹಳೆಯ ಬೀದಿ ದೀಪಗಳನ್ನು ಬದಲಾಯಿಸುತ್ತಿರುವ ಮಾದರಿಯಲ್ಲಿ ಅಸಮರ್ಥ ಮೋಟಾರ್ ಮತ್ತು ಪಂಪ್‌ಗಳನ್ನು ಬದಲಿಸಬೇಕು

# 'ತೇಜಸ್'ನಲ್ಲಿ ಹಾರಾಡಿದ ಪ್ರಧಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಸ್ತಾನ್ ಏರೋನಾಟಿಕಲ್ ಲಿಮಿಟೆಡ್ (ಎಚ್‌ಎಎಲ್) ಸಂಪೂರ್ಣ ದೇಶೀಯವಾಗಿ ನಿರ್ಮಿಸಿರುವ ಲಘು ಯುದ್ಧ ವಿಮಾನ 'ತೇಜಸ್'ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ 30 ನಿಮಿಷ ಹಾರಾಟ ನಡೆಸಿದರು.

ನಗರದಲ್ಲಿರುವ 'ಏರ್‌ಕ್ರಾಫ್ಟ್ ಸಿಸ್ಟಮ್ಸ್ ಟೆಸ್ಟಿಂಗ್ ಸಂಸ್ಥೆ'ಯ ಆವರಣದಲ್ಲಿ ಅವಳಿ ಆಸನಗಳುಳ್ಳ ತೇಜಸ್ ತರಬೇತಿ ವಿಮಾನ ಏರಿದ ಪ್ರಧಾನಿ, ಅರ್ಧ ಗಂಟೆ ಹಾರಾಡಿದರು. ಈ ಅವಧಿಯಲ್ಲಿ ಎಚ್‌ಎಎಲ್‌ನ ಪೈಲಟ್ ತೇಜಸ್‌ನ ಸಾಮರ್ಥ್ಯವನ್ನು ಪ್ರಧಾನಿಗೆ ಪ್ರದರ್ಶಿಸಿದರು.

'ನರೇಂದ್ರ ಮೋದಿ ಅವರು ಯುದ್ಧ ವಿಮಾನವೊಂದರಲ್ಲಿ ಹಾರಾಟ ನಡೆಸಿದ ದೇಶದ ಮೊದಲ ಪ್ರಧಾನಿ' ಎಂದು ವಾಯುಪಡೆ ಅಧಿಕಾರಿಗಳು ಹೇಳಿದ್ದಾರೆ. 'ತೇಜಸ್‌ನಲ್ಲಿ ಹಾರಾಡಿದ ಅನುಭವ ಅವಿಸ್ಮರಣೀಯ' ಎಂಬುದಾಗಿ ಪ್ರಧಾನಿ ಬಣ್ಣಿಸಿದ್ದಾರೆ ಎಂದೂ ಮಾಹಿತಿ ಹಂಚಿಕೊಂಡಿದ್ದಾರೆ.

ಇದು ಭಾರತವು ದೇಶೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿ, ತಯಾರಿಸಿದ ಮೊದಲ ಅವಳಿ ಆಸನಗಳ ಯುದ್ಧ ವಿಮಾನವಾಗಿದೆ. ಒಂದು ಆಸನವುಳ್ಳ ತೇಜಸ್ ಅನ್ನು ಲಘು ಯುದ್ಧ ವಿಮಾನವಾಗಿ ಮತ್ತು ಎರಡು ಆಸನವುಳ್ಳ ಇದೇ ವಿಮಾನವನ್ನು ತರಬೇತಿ ಯುದ್ಧ ವಿಮಾನವನ್ನಾಗಿ ಬಳಸಿಕೊಳ್ಳುವ ಯೋಜನೆ ಭಾರತೀಯ ವಾಯುಪಡೆಯ ಮುಂದಿದೆ.

2016ರಲ್ಲಿ ಮೊದಲ ತೇಜಸ್ ಯುದ್ಧ ವಿಮಾನ ವಾಯುಪಡೆಯನ್ನು ಸೇರಿಕೊಂಡಿತ್ತು. ನಂತರ ವಿವಿಧ ಹಂತಗಳಲ್ಲಿ ಹಲವು ವಿಮಾನಗಳು ವಾಯುಪಡೆ ಸೇರಿವೆ. 83 ತೇಜಸ್ ಲಘು ಯುದ್ಧ ವಿಮಾನಗಳ ಪೂರೈಕೆಗೆ ವಾಯುಪಡೆಯು ಎಚ್‌ಎಎಲ್‌ಗೆ ಕಾರ್ಯಾದೇಶ ನೀಡಿದೆ. 2024ರ ಫೆಬ್ರುವರಿಯಿಂದ ಈ ವಿಮಾನಗಳ ಪೂರೈಕೆ ಆರಂಭವಾಗುವ ನಿರೀಕ್ಷೆ ಇದೆ.

ಈಗ ಎಚ್‌ಎಎಲ್ ಪ್ರತಿ ವರ್ಷಕ್ಕೆ ಎಂಟು ಲಘು ಯುದ್ಧ ವಿಮಾನಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ. 2025ರ ವೇಳೆಗೆ ಅದನ್ನು ಪ್ರತಿ ವರ್ಷಕ್ಕೆ 16 ಹಾಗೂ ನಂತರದ ಮೂರು ವರ್ಷಗಳಲ್ಲಿ ಪ್ರತಿ ವರ್ಷಕ್ಕೆ 24 ವಿಮಾನ ತಯಾರಿಗೆ ಹೆಚ್ಚಿಸುವ ಗುರಿ ಇದೆ ಎಂದು ವಾಯುಪಡೆ ತಿಳಿಸಿದೆ.

'ತೇಜಸ್' ಲಘು ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಾಯುಪಡೆಯ ಮುಖ್ಯಸ್ಥ ವಿ.ಆರ್. ಚೌಧರಿ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

## 900 ಹೆಣ್ಣು ಭ್ರೂಣ ಹತ್ಯೆ: ವೈದ್ಯ ಬಂಧನ

ಬೆಂಗಳೂರು: ಭ್ರೂಣ ಲಿಂಗ ಪತ್ತೆ ಹಾಗೂ ಗರ್ಭಪಾತ ಪ್ರಕರಣದ ತನಿಖೆ ಮುಂದುವರಿಸಿರುವ ಬೈಯಪ್ಪನಹಳ್ಳಿ ಠಾಣೆ ಪೊಲೀಸರು, ಮೈಸೂರಿನ ವೈದ್ಯ ಡಾ. ಚಂದನ್ ಬಲ್ಲಾಳ್ ಹಾಗೂ ಲ್ಯಾಬ್ ಟೆಕ್ನಿಷಿಯನ್ ನಿಸಾರ್ ಅವರನ್ನು ಬಂಧಿಸಿದ್ದಾರೆ. 5

ಪತ್ರಕರ್ತೆ ಸೌಮ್ಯ ಹಂತಕರಿಗೆ ಜೀವಾವಧಿ ಶಿಕ್ಷೆ 7

### ಡಿಕೆಶಿ ರಾಜೀನಾಮೆಗೆ ಹಿಂದುಳಿದ ಜಾತಿಗಳ ಒಕ್ಕೂಟ ಆಗ್ರಹ

# ಜಾತಿ ಗಣತಿ ವರದಿಗೆ 'ಅಹಿಂದ' ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿಯನ್ನು ಸ್ವೀಕರಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮತ್ತು ಹಿಂದುಳಿದ ಜಾತಿಗಳ ಒಕ್ಕೂಟ ಒಕ್ಕೊರಲಿನ ನಿರ್ಣಯ ಕೈಗೊಂಡಿದೆ.

ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ. ರಾಮಚಂದ್ರಪ್ಪ ನೇತೃತ್ವದಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ), ಹಿಂದುಳಿದ, ಅಲ್ಪಸಂಖ್ಯಾತರ ಸಮುದಾಯದ ಸಂಘಟನೆಗಳ ಮುಖಂಡರ ಸಭೆ ಶಾಸಕರ ಭವನದಲ್ಲಿ ಶನಿವಾರ ನಡೆಯಿತು.

7ನೇ ಪುಟ ನೋಡಿ

### 'ಮೊದಲೇ ವಿರೋಧಿಸುವುದು ಸಮಂಜಸವಲ್ಲ'

'ಎಲ್ಲರೂ ನೋಡಿದ ಬಳಿಕ ಸರಿ ಇಲ್ಲ ಎಂದಾದರೆ ಜಾತಿ ಜನಗಣತಿ ವರದಿ ತಿರಸ್ಕಾರ ಆಗುತ್ತದೆ. ವರದಿಯಲ್ಲಿ ಏನಿದೆ ಎಂದು ನೋಡುವ ಮೊದಲೇ ವಿರೋಧಿಸುವುದು ಸಮಂಜಸವಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಗೊಳಿ ಹೇಳಿದರು. ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಜಾತಿ, ಧರ್ಮ, ಭಾಷೆ ವಿಷಯ ಬಂದಾಗ ಹಲವು ವರದಿಗಳು ಮೂಲೆ ಸೇರಿವೆ. ಸುಮಾರು 40 ವರದಿಗಳು ಹಾಗೇ ಇವೆ. ಕಾಂತರಾಜ ಅವರ ವರದಿ 41ನೇಯದ್ದು ಆಗಿರಬಹುದು. ದೇವರಾಜ ಅರಸು ಕಾಲದಿಂದಲೂ ಕೆಲವು ವರದಿಗಳು ಹಾಗೇ ಇವೆ' ಎಂದರು.

# ಟೆಕ್ ಫೆಸ್ಟ್ ವೇಳೆ ಕಾಲ್ತುಳಿತ ನಾಲ್ವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕೊಚ್ಚಿಯಲ್ಲಿ ಇರುವ ಮಾಹಿತಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಶನಿವಾರ ರಾತ್ರಿ ಹಮ್ಮಿಕೊಂಡಿದ್ದ 'ಟೆಕ್ ಫೆಸ್ಟ್'ನಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ನಾಲ್ವರು ವಿದ್ಯಾರ್ಥಿಗಳು ಮೃತಪಟ್ಟಿದ್ದು, 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಟೆಕ್ ಫೆಸ್ಟ್' ಅಂಗವಾಗಿ 1000-1500 ಆಸನ ಸಾಮರ್ಥ್ಯದ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಭಾಂಗಣ ಭಾಗಶಃ ತುಂಬಿತ್ತು. ಆದರೆ ಈ ವೇಳೆ ಹಠಾತ್ತನೆ ಮಳೆ ಸುರಿದಿದ್ದರಿಂದ ನೆರೆದಿದ್ದ ವಿದ್ಯಾರ್ಥಿಗಳು ಆಶ್ರಯ ಅರಸಿ ಸಭಾಂಗಣದತ್ತ ಓಡಲಾರಂಭಿಸಿದರು. ಇದರಿಂದಾಗಿ ದುರಂತ ಸಂಭವಿಸಿತು' ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಎಂ.ಆರ್ ಅಜಿತ್ ಕುಮಾರ್ ತಿಳಿಸಿದರು.

3ನೇ ಪುಟ ನೋಡಿ

# ಲೈನ್‌ಮನ್ ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ (ಬೆಂಗಳೂರು): ಕಾಡುಗೋಡಿಯಲ್ಲಿ ವಿದ್ಯುತ್ ತಂತಿ ತುಳಿದು ತಾಯಿ-ಮಗು ಮೃತಪಟ್ಟ ಕೆಲವೇ ದಿನಗಳಲ್ಲಿ ಮತ್ತೊಂದು ಆಘಾತದಲ್ಲಿ ಲೈನ್‌ಮನ್ ಒಬ್ಬರು ಮೃತಪಟ್ಟಿದ್ದಾರೆ.

ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಚೀಮಸಂದ್ರದ ಅಪ್ಪಾಜಪ್ಪ ಲೇಔಟ್‌ನಲ್ಲಿ ಶನಿವಾರ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಲೈನ್‌ಮನ್ ಸಿದ್ದರಾಜು (40) ಸಾವಿಗೀಡಾದರು.

'ಬೆಸ್ಕಾಂ ಸಿಬ್ಬಂದಿ ನಿರ್ಲಕ್ಷ್ಯದಿಂದ ಈ ದುರಂತ ಸಂಭವಿಸಿದೆ' ಎಂದು ಕುಟುಂಬಸ್ಥರು, ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

4ನೇ ಪುಟ ನೋಡಿ

### ಚಿನಕುರಳಿ

ಪ್ರಕಾಶ್ ಶೆಟ್ಟಿ




### ಒಳ ಪುಟಗಳು

ಗಾಜಾಪಟ್ಟಿ: ಎರಡನೇ ಹಂತದಲ್ಲಿ ಒತ್ತೆಯಾಳುಗಳ ಬಿಡುಗಡೆ 9

ಮಹುವಾ ವಿರುದ್ಧ ತನಿಖೆಗೆ ಪ್ರಕರಣ ದಾಖಲಿಸಿದ ಸಿಬಿಐ 7

ಪ್ರಜಾವಾಣಿ

# ‘ಬೆಂಗಳೂರು ಕಂಬಳ ನಮ್ಮ ಕಂಬಳ’

ರಿಷಬ್ ಶೆಟ್ಟಿಗೆ ‘ಕೋಚಿಂಗ್’ ನೀಡಿದ್ದ ಮಹೇಶ್ ಪೂಜಾರಿ • ‘ಕಾಂತಾರ’ದ ಕೋಣಗಳ ಆರೈಕೆ ಬಾಲೆ ಕೈಗೆ

# ಗಮನ ಸೆಳೆದ ಬೋಳಾರದ ಕೋಣಗಳು

ಕಂಬಳ ಅಕಾಡೆಮಿಯಲ್ಲಿ 15 ದಿನಗಳ ತರಬೇತಿ ಪಡೆದು ಕಂಬಳ ಓಟಗಾರನಾದೆ. ಕಂಬಳ ಇಲ್ಲದ ಸಮಯದಲ್ಲಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಯಾವಾಗಲೂ ಊರಿನಲ್ಲಿ ಕಂಬಳಗಳು ನಡೆಯುತ್ತಿರುತ್ತದೆ. ಈ ಬಾರಿ ಬೆಂಗಳೂರಿಗೆ ಬಂದಿರುವುದು ಖುಷಿ ತಂದಿದೆ.

**ಅಭಿಲಾಷ್ ಹಳೆಯಂಗಡಿ,** ಕೋಣ ಓಡಿಸುವವರು

## ಕೋಣ ತಿವಿದು ಗಾಯ

ಬೆಂಗಳೂರು ಕಂಬಳದಲ್ಲಿ ಕೋಣವೊಂದು ಪೊಲೀಸರೊಬ್ಬರಿಗೆ ತಿವಿದು, ಗಾಯಗೊಳಿಸಿದೆ. ಕಂಬಳದ ಬಂದೋಬಸ್ತ್‌ಗೆ ಬಂದಿದ್ದ ಪೊಲೀಸರು, ಕುತೂಹಲದಿಂದ ಕೋಣದ ಬಳಿ ಹೋಗಿದ್ದಾಗ, ಅದು ತಿವಿದಿದೆ. ಕಣ್ಣಿನ ಭಾಗದಲ್ಲಿ ಗಾಯಗೊಂಡ ಒಬ್ಬರನ್ನು ಆಸ್ಪತ್ರೆ ಸೇರಿಸಲಾಗಿದೆ.

## ಮಲೆಕುಡಿಯರ ಜೋಡಿ ಕೋಣ ಭಾಗಿ

• ಅಬ್ದುಲ್ ರಹಿಮಾನ್

ಬೆಂಗಳೂರು: ಬೆಂಗಳೂರು ಕಂಬಳದಲ್ಲಿ ದಕ್ಷಿಣ ಕನ್ನಡದ ಕಾಡಂಚಿನ ನಿವಾಸಿಗಳಾದ ಮಲೆಕುಡಿಯ ಜನಾಂಗ ಹಾಗೂ ಬ್ಯಾರಿ ಸಮುದಾಯದವರ ಕೋಣಗಳು ಶನಿವಾರ ಗಮನಸೆಳೆದವು. ಅಂದಾಜು 15-17 ಸಾವಿರಷ್ಟು ಜನಸಂಖ್ಯೆ ಇರುವ ಮಲೆಕುಡಿಯ ಜನಾಂಗದ ಏಕೈಕ ಕೋಣಗಳ ಜೋಡಿ ‘ಗುಂಡ’ ಹಾಗೂ ‘ದಾಸ’ ಭಾಗವಹಿಸಿವೆ.

ಕೋಣಗಳ ಜತೆ ಅದರ ನಿಯಂತ್ರಣ, ಆರೈಕೆಗೆ ಸುಮಾರು 20 ಮಂದಿ ಆಗಮಿಸಿದ್ದಾರೆ.

ವಕೀಲ ದಿನೇಶ್ ಹೆಗ್ಡೆ ಉಳೆಪಾಡಿ ಅವರು ಈ ಕೋಣಗಳ ಪ್ರಾಯೋಜಕತ್ವ ವಹಿಸಿದ್ದು, ಮಲೆಕುಡಿಯರ ಹೆಸರಿನಲ್ಲೇ ಕೋಣಗಳು ಓಡುತ್ತಿರುವುದು ಇದೇ ಮೊದಲ ಬಾರಿ. ಇದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಡಿಡುಪೆ ಗ್ರಾಮದ ಕಾಡಂಚಿನ ಪ್ರದೇಶ ಬಿಳಿಯೂರು ಎಂಬಲ್ಲಿನ ನಾರಾಯಣ ಮಲೆಕುಡಿಯ ಈ ಕೋಣದ ಮಾಲೀಕರು.

ಈ ಹಿಂದೆ ಹಲವು ಕಂಬಳಗಲ್ಲಿ ಭಾಗವಹಿಸಿದ ಅನುಭವ ಈ ಕೋಣಗಳಿಗೆ ಇವೆ. ಆರ್ಥಿಕವಾಗಿ ಹಿಂದುಳಿದವರಾಗಿದ್ದರಿಂದ ಊರಿನ ಸಮೀಪ ನಡೆಯುತ್ತಿದ್ದ ಕಂಬಳಕ್ಕೆ ಮಾತ್ರ ಕೋಣಗಳನ್ನು ಕರೆದುಕೊಂಡು ಹೋಗಲಾಗುತ್ತಿತ್ತು. ನೇಗಿಲು ಹಿರಿಯ ವಿಭಾಗದಲ್ಲಿ ಇಲ್ಲಿನ ಕಂಬಳದಲ್ಲಿ ಸ್ಪರ್ಧೆ ಮಾಡುತ್ತಿವೆ. ಇವರ ತಂಡದಲ್ಲಿ ಮಲೆಕುಡಿಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಬೇರೆ ಸಮುದಾಯದವರೂ ಕೂಡ ಇದ್ದಾರೆ.

‘ಕೆಲ ದಿನಗಳ ಹಿಂದೆ ಪ್ರವಾಸಕ್ಕೆಂದು ದಿಡುಪೆಗೆ ಹೋಗಿದ್ದಾಗ ಈ ಕೋಣಗಳನ್ನು ನೋಡಿದ್ದೆ. ಕಂಬಳದಲ್ಲಿ ಭಾಗಿಯಾಗಲು ಯಜಮಾನರಿಗೆ ಆರ್ಥಿಕ ಸಮಸ್ಯೆ ಇರುವುದನ್ನು ಮನಗಂಡು ನಾನೇ ಪ್ರಾಯೋಜಕತ್ವ ವಹಿಸಿಕೊಂಡೆ’ ಎನ್ನುತ್ತಾರೆ ದಿನೇಶ್ ಹೆಗ್ಡೆ.

ಬೆಂಗಳೂರು: ಮಂಗಳೂರಿನ ಬೋಳಾರದ ತ್ರಿಶಲ್ ಕೆ.ಪೂಜಾರಿ ಅವರು ಯಜಮಾನರಾಗಿರುವ ಎರಡು ಜೋಡಿ ಕೋಣಗಳು ವಿವಿಧ ಕಾರಣಗಳಿಂದ ‘ಬೆಂಗಳೂರು ಕಂಬಳ’ದ ಆಕರ್ಷಣೆಯಾಗಿದ್ದವು. ಬಂಟ್ವಾಳ ತಾಲ್ಲೂಕಿನ ಕಕ್ಯಪದವಿನಲ್ಲಿ ನಡೆದ ಸತ್ಯ-ಧರ್ಮ ಜೋಡುಕರೆ ಕಂಬಳದಲ್ಲಿ ಅಡ್ಡಹಲಗೆ ವಿಭಾಗದಲ್ಲಿ ಮೊದಲ ಸ್ಥಾನವನ್ನು ಕಾಟಿ-ರಾಜ ಹೆಸರಿನ ಕೋಣಗಳು ಗೆದ್ದಿದ್ದವು.

ಕನೆಹಲಗೆ ವಿಭಾಗದಲ್ಲಿ ಓಡುವ ಇವರದೇ ಮಾಲೀಕತ್ವದ ಕಾಳ-ಕುಟ್ಟಿ ಹೆಸರಿನ ಕೋಣಗಳನ್ನು ಓಡಿಸುವ ಬೈಂದೂರು ಮಹೇಶ ಪೂಜಾರಿ ಅವರೂ ಆಕರ್ಷಣೆಯ ಬಿಂದು. ಕನ್ನಡದ ಸೂಪರ್ ಹಿಟ್ ಚಿತ್ರ ‘ಕಾಂತಾರ’ದ ನಿರ್ದೇಶಕ ರಿಷಬ್ ಶೆಟ್ಟಿ ಅವರಿಗೆ ಕೋಣಗಳನ್ನು ಓಡಿಸುವ ತರಬೇತಿ ನೀಡಿದವರು ಈ ಕಂಬಳದ ‘ಜಾಕಿ’.

‘ರಿಷಬಣ್ಣನ ಸ್ನೇಹಿತ ರಾಘು ಶೆಟ್ಟಿ ನನ್ನನ್ನು ಭೇಟಿಯಾಗಿದ್ದರು. ಕೋಣ ಓಡಿಸುವ ತರಬೇತಿಯಲ್ಲಿ ರಿಷಬ್ ಶೆಟ್ಟಿ ಆಸಕ್ತಿ ಹೊಂದಿರುವುದಾಗಿ ತಿಳಿಸಿದರು. ನಂತರ ರಿಷಬ್ ಶೆಟ್ಟಿ ಬೋಳಾರಕ್ಕೆ ಬಂದು ಕೋಣಗಳನ್ನು ನೋಡಿದರು. ಕೋಣ ಓಡಿಸುವುದನ್ನು ಕಲಿಯಬೇಕೆಂಬ ಅಪೇಕ್ಷೆಯನ್ನು ತಿಳಿಸಿದರು. ನಾವು ‘ಕುದಿ’ (ರೇಸ್‌ಗೆ ಮುನ್ನ ಅಭ್ಯಾಸ) ನಡೆಸುವ ಸಮಯದಲ್ಲಿ ಬಂದಿದ್ದರು. ಪ್ರಯತ್ನಿಸಿದರೆ ಓಡಿಸಲು ಆಗುತ್ತದೆ ಎಂದಿದ್ದೆ’.

‘ಆರಂಭದಲ್ಲಿ ಎರಡು ಸಲ ಬಿದ್ದು ಗಾಯಗೊಂಡಿದ್ದು ಇದೆ. ಹೀಗೆ ಸುಮಾರು ಒಂದೂವರೆ ತಿಂಗಳ ಕಾಲ ಅವರಿಗೆ ತರಬೇತಿ ನಡೆದಿತ್ತು. ಅವರು ಒಬ್ಬ ಸ್ಟಾರ್ ಆದ ಕಾರಣ ನಮಗೆ ಭಯವಿತ್ತು. ಆದರೆ ಅವರು ಕಲಿಯಲು ಧೈರ್ಯ ತೋರಿಸಿದ್ದ ಕಾರಣ ನಮಗೆ ಒತ್ತಡವೆನಿಸಲಿಲ್ಲ’ ಎಂದು ವಿವರಿಸಿದರು. ನಂತರ ನೀವೇ ಸಿನಿಮಾ ನೋಡಿದ್ದೀರಲ್ಲ ಎಂದು ಮುಗುಳ್ನಕ್ಕರು. ಈ ಕಾಳ-ಕುಟ್ಟ ಕೋಣಗಳು ಸಿಕ್ಕಾಬಟ್ಟೆ ಆಕ್ರಮಣದ ಸ್ವಭಾವದವು. ಕಾಳನಿಗೆ 10–12 ವರ್ಷ ವಯಸ್ಸು. ಕುಟ್ಟನಿಗೆ 16 ವರ್ಷ.

ಅಡ್ಡಹಲಗೆ ವಿಭಾಗದಲ್ಲಿ ಕಾಟಿ-ರಾಜ ಹೆಸರಿನ ಕೋಣಗಳನ್ನು ಓಡಿಸುವ ಸಾವ್ಯ ಗಂಗಯ್ಯ ಪೂಜಾರಿ ‘ಬೆಂಗಳೂರಿನ ಕಂಬಳ’ದ ಅತಿ ಹಿರಿಯ ಜಾಕಿ. ಅವರಿಗೆ 35 ವರ್ಷಗಳ ಅನುಭವವಿದೆ. ಕೆಲವರಿಗೆ ಅವರು ತರಬೇತಿಯನ್ನೂ ನೀಡಿದ್ದಾರೆ. 17 ವರ್ಷ ಇರುವಾಗಲೇ ಮೊದಲ ಬಾರಿ ಕೋಣಗಳನ್ನು ಓಡಿಸಿದ್ದ ಸಾಹಸಿ. ಕಾಟಿ– ರಾಜ ಕೋಣಗಳು ಕಂಬಳದ ಅತಿ ದೊಡ್ಡ ಕೋಣಗಳು.

ಯಜಮಾನ ತ್ರಿಶಲ್ ಕೆ.ಪೂಜಾರಿ ಅವರ ಮನೆಯಿರುವುದು ಮಂಗಳಾದೇವಿ ದೇವಸ್ಥಾನದ ಹಿಂದುಗಡೆ. 18 ವರ್ಷವಿರುವಾಗಲೇ ಕಂಬಳದ ಕೋಣಗಳನ್ನು ಹೊಂದಿದ್ದ ಅವರು ಅತಿ ಕಿರಿಯ ಯಜಮಾನ ಎನಿಸಿದ್ದಾರೆ.

‘ಕೋಣಗಳನ್ನು ಸಾಕಲು ವರ್ಷಕ್ಕೆ ₹20 ರಿಂದ 25 ಲಕ್ಷ ಖರ್ಚು ತಗಲುತ್ತದೆ. ಆಹಾರ, ಆರೋಗ್ಯದ ಕಾಳಜಿ ಜೊತೆಗೆ, ನಿತ್ಯ ಶುದ್ಧ ತೆಂಗಿನೆಣ್ಣೆಯ ಮಸಾಜು ಬೇಕಾಗುತ್ತದೆ’ ಎನ್ನುತ್ತಾರೆ ಬೋಳಾರ ಶ್ರವಣ ಪೂಜಾರಿ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ಆರಂಭಗೊಂಡ ‘ಬೆಂಗಳೂರು ಕಂಬಳ ನಮ್ಮ ಕಂಬಳ’ದ ಕನೆಹಲಗೆ ವಿಭಾಗದಲ್ಲಿ ಬೋಳಾರದ ತ್ರಿಶಲ್ ಕೆ. ಪೂಜಾರಿ ಮಾಲೀಕತ್ವದ ಕೋಣಗಳನ್ನು ಬೈಂದೂರು ಮಹೇಶ್ ಪೂಜಾರಿ ಓಡಿಸಿದರು.

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

## ಕಂಬಳ ನೋಡುವ ಆಸೆ ಈಡೇರಿತು

ನಾವು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದವರು. ಕಂಬಳದ ಬಗ್ಗೆ ಕೇಳಿ ಗೊತ್ತಿತ್ತು. ಕಾಂತಾರ ಸಿನಿಮಾ ನೋಡಿದ ಮೇಲೆ ಕಂಬಳ ನೋಡಬೇಕು ಎಂಬ ಆಸಕ್ತಿ ಉಂಟಾಗಿತ್ತು. ಬೆಂಗಳೂರಿನಲ್ಲಿ ನಾವು ಕೆಲಸ ಮಾಡುತ್ತಿರುವುದರಿಂದ ಉಡುಪಿ, ಮಂಗಳೂರಿಗೆ ಹೋಗಿ ಕಂಬಳ ನೋಡಲು ಆಗುತ್ತಿರಲಿಲ್ಲ. ಬೆಂಗಳೂರಿನಲ್ಲಿಯೇ ಕಂಬಳ ಮಾಡಿರುವುದು ಖುಷಿ ನೀಡಿದೆ.

**ಶ್ರುತಿ ಹೆಗಡೆ, ಭವ್ಯಾ**
ಖಾಸಗಿ ಕಂಪನಿ ಉದ್ಯೋಗಿಗಳು

## ಕಂಬಳಕ್ಕಾಗಿಯೇ ಬೆಂಗಳೂರಿಗೆ ಬಂದೆ

ಪ್ರವಾಸಕ್ಕೆಂದು ಭಾರತಕ್ಕೆ ಬಂದಿದ್ದೆವು. ಎರಡು ವಾರದಗಳ ಹಿಂದೆ ಗೋವಾದಲ್ಲಿ ಇದ್ದಾಗ ಬೆಂಗಳೂರಿನಲ್ಲಿ ಕಂಬಳ ಇದೆಯೊಂದು ಗೊತ್ತಾಯಿತು. ಹೀಗಾಗಿ ಬೆಂಗಳೂರಿಗೆ ಬಂದೆವು. ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ವಿಡಿಯೊ ನೋಡಿದ್ದೆವು. ನಮ್ಮ ದೇಶದಲ್ಲಿ ಕುದುರೆಗಳ ಓಟ ಇದ್ದರೂ, ಅದು ಇಷ್ಟು ದೊಡ್ಡ ಪ್ರಮಾಣದಲ್ಲಿ, ಇಷ್ಟು ಅದ್ದೂರಿಯಾಗಿ ನಡೆಯುವುದಿಲ್ಲ. ಕೋಣಗಳು ವೇಗವಾಗಿ ಓಡುವುದನ್ನು ನೋಡಿ ರೋಮಾಂಚನವಾಗುತ್ತದೆ. ಇಲ್ಲಿನ ಜನರಿಂದ ನಮಗೆ ವಿಶೇಷ ಆತಿಥ್ಯ ಸಿಕ್ಕಿತು.

**ಲಿಯೋನಿ,** ಯುಕೆ ಪ್ರಜೆ

## ಆರನೇ ವಯಸ್ಸಿಗೆ ಆರೈಕೆ...

ಕಾಂತಾರ ಸಿನಿಮಾದಲ್ಲಿ ನಟ ರಿಷಭ್ ಶೆಟ್ಟಿ ಓಡಿಸಿರುವ ಕೋಣಗಳನ್ನು ಈಗ 13 ವರ್ಷದ ಬಾಲಕಿ ಆರೈಕೆ ಮಾಡುತ್ತಿರುವುದು ವಿಶೇಷ. ಬೈಂದೂರಿನ ಬೋಳಂಬಳ್ಳಿ ಪರಮೇಶ್ವರ್ ಭಟ್ ಎನ್ನುವರ ಕೋಣವನ್ನು ಕಾಂತಾರ ಸಿನಿಮಾದಲ್ಲಿ ತೋರಿಸಲಾಗಿದೆ. ಈಗ ಪರಮೇಶ್ವರ ಭಟ್ಟರ ಪುತ್ರಿ 13 ವರ್ಷದ ಶ್ರೀರಾಮ್ ಚೈತ್ರಾ ಆರೈಕೆ ಮಾಡುತ್ತಿದ್ದಾರೆ. ಬಾಲ್ಯದಿಂದಲೇ ಕೋಣಗಳನ್ನು ನೋಡಿಕೊಂಡೇ ಬೆಳೆದ ನನಗೆ ಅವುಗಳ ಜತೆ ವಿಶೇಷ ಕಾಳಜಿ ಇತ್ತು. ಆರನೇ ವಯಸ್ಸಿನಲ್ಲೇ ಅವುಗಳ ಆರೈಕೆಯಲ್ಲಿ ತೊಡಗಿಸಿಕೊಂಡೆ. ಕಳೆದ ಎರಡು ವರ್ಷಗಳಿಂದ ಕಂಬಳಗಳಿಗೆ ಹೋಗುತ್ತಿದ್ದೇನೆ. ಕಂಬಳಗಳು ವಾರಾಂತ್ಯದಲ್ಲಿ ನಡೆಯುವುದರಿಂದ ಕಲಿಕೆಗೇನೂ ತೊಂದೆಯಾಗದು ಎಂದು ಚೈತ್ರಾ ‘ಪ್ರಜಾವಾಣಿ’ಯೊಂದಿಗೆ ತಮ್ಮ ಅನುಭವ ಹಂಚಿಕೊಂಡರು.

## ಕೋಣ ಜೊತೆಗಾರರ ಮಾತುಗಳು

ನನ್ನ ಅಜ್ಜನ ಕಾಲದಿಂದಲೂ ಕೃಷಿಗಾಗಿ ಕೋಣ ಸಾಕುತ್ತಾ, ಉಳುಮೆಯ ಕೊನೇ ದಿನ ಕೋಣ ಓಡಿಸುತ್ತಾ ಬಂದಿದ್ದೆವು. ನಾನು 15 ವರ್ಷಗಳ ಹಿಂದೆ ಕಂಬಳದಲ್ಲಿ ಬೇರೆಯವರ ಕೋಣವನ್ನು ಓಡಿಸಿದ್ದೆ. 12 ವರ್ಷಗಳ ಹಿಂದೆ ಸ್ವಂತಕೋಣಗಳನ್ನು ಕಟ್ಟಿದೆ. ಹಗ್ಗ ಮತ್ತು ನೇಗಿಲು ಕಿರಿಯ ವಿಭಾಗಗಳಲ್ಲಿ ಸ್ಪರ್ಧಿಸಿರುವ ನಮ್ಮ ಕೋಣಗಳು 12 ಮೆಡಲ್‌ಗಳನ್ನು ಗೆದ್ದಿವೆ

**ನಿಟ್ಟೆ ಪರಪ್ಪಾಡಿ ಸುರೇಶ್ ಕೋಟ್ಯಾನ್,** ಕೋಣಗಳ ಮಾಲೀಕ

9 ವರ್ಷಗಳಿಂದ ಕೋಣ ಓಡಿಸುತ್ತಿದ್ದೇನೆ. ಕಂಬಳ ಇಲ್ಲದ ಸಮಯದಲ್ಲಿ ನಿತ್ಯ ವ್ಯಾಯಾಮ ಮಾಡುತ್ತೇನೆ. ಬೆಳಿಗ್ಗೆ 1 ಗಂಟೆ, ನಡಿಗೆ, ಓಟಗಳನ್ನು ಮನೆ ಸುತ್ತಮುತ್ತ ಮಾಡುತ್ತೇನೆ. ಇದರಿಂದ ದೇಹದ ದೃಢತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಮೂರು ತಿಂಗಳು ಕಂಬಳ ಇರುತ್ತದೆ. ಉಳಿದ ಸಮಯದಲ್ಲಿ ಕೂಡ ಕೋಣಗಳನ್ನು ಅದೇ ರೀತಿ ನೋಡಿಕೊಳ್ಳಬೇಕಾಗುತ್ತದೆ

**ಸುಧೀರ್ ಸಾಲ್ಯಾನ್,** ಕೋಣ ಓಡಿಸುವವರು

ಒಂದು ಜೊತೆ ಕೋಣಗಳಿಗೆ ದಿನಕ್ಕೆ ₹ 2000 ಖರ್ಚು ಮಾಡಿ ಸಾಕಿದ್ದೇವೆ. ಹುಲ್ಲು, ಹುರುಳಿ ತಿನ್ನಿಸಿ, ಮೈಗೆ ಎಣ್ಣೆ ಹಚ್ಚಿ ಮಸಾಜ್ ಮಾಡುತ್ತೇವೆ. ವರ್ಷಕ್ಕೆ 20ಕ್ಕೂ ಅಧಿಕ ಕಂಬಳಗಳಲ್ಲಿ ಭಾಗವಹಿಸುತ್ತಿದ್ದೇವೆ

**ಎಸ್. ಕೃಷ್ಣ ಪೂಜಾರಿ,** ಹಳೆಯಂಗಡಿ ಕೊಪ್ಪಳ ನಂದಗೋಕುಲ ಕೋಣಗಳ ಮಾಲೀಕ




PVR - INOX CINEMAS {DIRECTORS CUT, FORUM REX WALK | NEXUS FORUM MALL, KORMANGALA | ORION MALL, YESHWANTPUR | VAISHNAVI SAPPHIRE MALL, TUMKUR ROAD | VEGA CITY MALL | MSR REGALIA | PHOENIX MARKET CITY, K.R. PURAM | BHARTIYA CITY | GT WORLD MALL | AURA PARK SQUARE, WHITEFIELD ROAD | SPIRIT MALL | VR MALL, WHITEFIELD ROAD | UPTOWN OMR MALL | SUPERPLEX FALCON CITY | MANTRI MALL | CENTRAL MALL, J.P.NAGAR | GARUDA MALL | SWAGATH MALL | BROOKFIELD MALL | LIDO | VALUE MALL, WHITEFIELD ROAD | GALLERIA MALL, RMZ YELAHANKA, | GARUDA, YELAHANKA | SBR HORIZON, SEEGEHALLI} | CINEPOLIS CINEMAS {ROYAL MEENAKSHI MALL | ETA MALL, BINNY MILL | EAST ORION MALL | SHANTINIKETAN | SJR SPECTRUM MALL | LULU MALL (TRD) | LULU MALL (VIP)} | GOPALAN CINEMAS {ARCADE MALL | LEGACY MALL | GRAND MALL | SIGNATURE MALL | INNOVATION MALL} | INNOVATIVE {MARATHHALLI} | CINEPHILE {HSR LAYOUT} | ROCKLINE CINEMA MALL {JALAHALLI CROSS} | MOVIE TIME {DAVANGERE | BELLARY} | ABHINAY {K.G.ROAD} | CAUVERY THEATRE {SANKEY ROAD} | SWAGATH SHANKARNAG {M.G.RAOD} | VAIBHAV {SANJAYNAGAR} | BALAJI {TAVAREKERE} | VAIBHAVI VAISHNAVI {UTTARAHALLI} | PVR - INOX CINEMAS {FIZA MALL, MANGALORE | GLOBAL MALL, MYSORE ROAD | FORUM MALL, MYSORE | GARUDA MALL, MYSORE | CENTRAL, MANIPAL | SATYAM MALL, MYSORE | SS MALL, TUMKUR | CENTRO MALL MYSORE} | CINEPOLIS {CITY CENTRE MALL, MANGALORE} | BHARATH CINEMAS {MANGALORE | MANIPAL | SHIMOGA} | DRC CINEMAS {MYSORE} | JAIBHARATH {TUMKUR} | VASANTA {DAVANGERE} | SANGAM {MYSORE}.

FARNAZ

ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು

## ‘ನಾಡು–ನುಡಿ ಅಭಿಮಾನ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದಿನ ಯುವ ಮನಸ್ಸುಗಳಿಗೆ ಕನ್ನಡ ನಾಡು–ನುಡಿಯ ಬಗ್ಗೆ ಅಭಿಮಾನ ಹೆಚ್ಚಾಗುವಂತೆ ಜಾಗೃತಿ ಮೂಡಿಸುವ ಕೆಲಸವಾಗಬೇಕಿದೆ’ ಎಂದು ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಹೇಳಿದರು.

ಶೇಷಾದ್ರಿಪುರ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯದ ಮೇಲೆ ಅಭಿಮಾನ ಮೂಡಲು ದಿನಪತ್ರಿಕೆ, ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಾಹಿತಿಗಳು, ಗಾಯಕರು, ಕನ್ನಡ ಸಂಘಟನೆಗಳ ಜವಾಬ್ದಾರಿ ಇಂದು ಹೆಚ್ಚು ಪ್ರಸ್ತುತವಾಗಿದೆ ಎಂದು ತಿಳಿಸಿದರು.

ಕವಯಿತ್ರಿ ಕೆ. ಷರೀಫಾ, ‘ಕನ್ನಡ ಎನ್ನುವುದು ಕೇವಲ ಒಂದು ಭಾಷೆ ಅಲ್ಲ, ಅದು ಅನ್ನ, ಅಕ್ಷರ, ಬದುಕನ್ನು ಬದಲಿಸುವ ಮತ್ತು ನಮ್ಮ ಮನಸ್ಸಿನ ಭಾವನೆಗಳನ್ನು ಸಂವಹನದ ಮೂಲಕ ಒಂದುಗೂಡಿಸುತ್ತದೆ. ಈ ನೆಲದಲ್ಲಿ ಹುಟ್ಟಿ ಬೆಳೆದ ಯಾವ ಜಾತಿ, ಧರ್ಮದವರೂ ಕನ್ನಡವನ್ನು ಮತ್ತು ಕನ್ನಡತನವನ್ನು ಮರೆಯಬಾರದು, ನಮ್ಮ ಮನೆಮಾತು ಯಾವುದೇ ಇರಲಿ ಹೊರಗಡೆ ವ್ಯಾಪಾರ, ವ್ಯವಹಾರ , ಸಂಭಾಷಣೆ ಕನ್ನಡ ಆಗಿರಲಿ ಎಂದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಸಹಾಯಕ ಕಾರ್ಯದರ್ಶಿ ಎಂ.ಎಸ್. ನಟರಾಜ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಆರ್. ವಿ. ಮಂಜುನಾಥ್, ಕನ್ನಡ ವಿಭಾಗದ ಮುಖ್ಯಸ್ಥ ರಾಮಲಿಂಗೇಶ್ವರ, ರೆಡ್ ಕ್ರಾಸ್ ಸಂಸ್ಥೆಯ ರಾಜು ಚಂದ್ರಶೇಖರ್, ಉಪನ್ಯಾಸಕರಾದ ಎಚ್. ಕಾವ್ಯಶ್ರೀ, ಬಿ.ಎನ್. ಮಧು, ಎಂ.ಎಸ್. ಬಬಿತಾ, ಬಿ.ಎಂ.ಮಹಾಂತೇಶ್, ಎಸ್. ಸಹನಾ, ಕಾರ್ತಿಕ್.ಎ ಇದ್ದರು.

ಕವಯಿತ್ರಿ ಕೆ. ಷರೀಫಾ ಮತ್ತು ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅವರನ್ನು ಸನ್ಮಾನಿಸಲಾಯಿತು. ಎಂ.ಎಸ್‌.ನಟರಾಜ್‌, ಆರ್‌.ವಿ.ಮಂಜುನಾಥ್‌, ರಾಜು ಚಂದ್ರಶೇಖರ್‌, ಸಿಸಿರಾ, ಎಚ್‌. ಕಾವ್ಯಶ್ರೀ, ಮಧು. ಬಿ.ಎನ್‌, ಎಂ.ಎಸ್‌. ಬಬಿತಾ, ಸಹನಾ.ಎಸ್‌, ಮಹಾಂತೇಶ್‌, ಕಾರ್ತಿಕ್ ಎ. ಇದ್ದಾರೆ

## ಕಂಬಳ: ಭಾರಿ ವಾಹನಗಳ ಸಂಚಾರ ನಿಷೇಧ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಕಂಬಳ ಆಯೋಜಿಸಲಾಗಿದ್ದು, ಭಾನುವಾರ (ನ. 26) ವಾಹನಗಳ ದಟ್ಟಣೆ ಉಂಟಾಗದಂತೆ ತಡೆಯಲು ಸಂಚಾರ ಮಾರ್ಗದಲ್ಲಿ ಪೊಲೀಸರು ಬದಲಾವಣೆ ಮಾಡಿದ್ದಾರೆ.

'ಬಿಎಚ್‌ಇಎಲ್ ವೃತ್ತ/ ಐಐಎಸ್ಸಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣವರೆಗೆ, ಹೆಬ್ಬಾಳ ಜಂಕ್ಷನ್ ಹಾಗೂ ಕಾವೇರಿ ಸಿನಿಮಂದಿರದಿಂದ ಬಸವೇಶ್ವರ ವೃತ್ತದವರೆಗೆ (ಚಾಲುಕ್ಯ ವೃತ್ತ) ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನ 12 ಗಂಟೆ ಹಾಗೂ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಭಾರಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ‘ಪ್ರಜಾವಾಣಿ’ಗೆ ತಿಳಿಸಿದರು.

## ಚಿತ್ರಾವಳಿ

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕರುನಾಡು ವಿಜಯಸೇನೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕನ್ನಡಪರ ಹೋರಾಟಗಾರರಾದ ಆರ್‌. ಚಂದ್ರಪ್ಪ, ಎನ್‌. ರಾಮಚಂದ್ರಯ್ಯ, ಕೆ.ವಿ. ರವಿದಾಸ್‌, ರಘುನಾರಾಯಣಗೌಡ, ಆಂಜನಪ್ಪ ದಾಪಿ, ರಮೇಶಗೌಡ, ದೀಪಕ್‌, ಕೃಷ್ಣೇಗೌಡ, ಕನ್ನಡದ ಕೃಷ್ಣ, ಸಾರಿಕಾ ಶೋಭಾ, ವಿನಾಯಕ್ ಅವರಿಗೆ ‘ಕದಂಬ ಕನ್ನಡಿಗ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಐಎಎಸ್ ಅಧಿಕಾರಿ ಸಿ. ಸೋಮಶೇಖರ್‌, ಬಹುಭಾಷಾ ವಿದ್ವಾಸ ಮಲ್ಲೇಪುರಂ ಜಿ. ವೆಂಕಟೇಶ್‌, ನೆ.ಲ. ರಾಮಪ್ರಸಾದಗೌಡ, ಎಸ್‌.ಆರ್‌. ಮಹೇಶ್‌, ಶಿವಪುತ್ರ ಗಾಣದಾಳ, ಸಚ್ಚಿದಾನಂದ ಕೆ.ಆರ್‌. ಇದ್ದಾರೆ.

ಆರ್‌.ಟಿ. ನಗರದ ಶಿವರಾಮ ಕಾರಂತ ವೇದಿಕೆ ಶನಿವಾರ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ 'ಕನ್ನಡ ತೇರು' ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಾಹಿತಿ ಕೆ. ಷರೀಫಾ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಮಲಯಾಳ ಭಾಷಾ ಅನುವಾದಕ ಸುಧಾಕರನ್ ರಾಮಂತಳಿ, ವಿಮರ್ಶಕ ಎಸ್‌. ಆರ್‌. ವಿಜಯಶಂಕರ ಮತ್ತು ವೇದಿಕೆಯ ಅಧ್ಯಕ್ಷೆ ದೀಪಾ ಫಡ್ಕೆ ಉಪಸ್ಥಿತರಿದ್ದರು

## ಡಿ.2ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಕರ್ನಾಟಕ ರಾಜ್ಯೋತ್ಸವ 50ರ ಸುವರ್ಣ ಸಂಭ್ರಮದ ಪ್ರಯುಕ್ತ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಡಿ.2ರಂದು ಆಯೋಜಿಸಿದೆ.

ಈ ಸ್ಪರ್ಧೆಯು 16 ವರ್ಷದೊಳಗಿನ ಮಕ್ಕಳಿಗೆ ಮೂರು ವರ್ಗದಲ್ಲಿ ನಡೆಯಲಿದೆ. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಬಹುಮಾನ ಹಾಗೂ ಪ್ರಮಾಣಪತ್ರ, ವಿಜೇತರಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುತ್ತದೆ. ಆಸಕ್ತರು ನೋಂದಾಯಿಸಿಕೊಳ್ಳಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ತಿಳಿಸಿದ್ದಾರೆ.

ಸಮಾಜದ ಅಸಾಮಾನ್ಯ ಕಲಾವಿದರನ್ನು/ ಬಾಲಪ್ರತಿಭೆಗಳನ್ನು ಗುರುತಿಸಿ 50 ಕಲಾ ದರ್ಪಣ ವಾರ್ಷಿಕ ಪ್ರಶಸ್ತಿಗಳನ್ನು ಕೂಡ ಕೊಡಲಾಗುತ್ತಿದೆ. ಕಲಾ ಸಾಧಕರಿಗೆ ವಾರ್ಷಿಕ ಪ್ರಶಸ್ತಿಯಿದೆ. ಸಂಸ್ಥೆಯ ಅಧ್ಯಕ್ಷೆ ಹೇಮಾ ವಿನಾಯಕ ಪಾಟೀಲ್ ಅವರು ‘ಕಾವ್ಯ-ಕುಂಚ-ಚಿತ್ರ’ ಪ್ರದರ್ಶಿಸುತ್ತಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ 93806 71947.

## ನಿಧನವಾರ್ತೆ

## ಎ.ಡಿ. ಕಾಳೇಗೌಡ

ಬೆಂಗಳೂರು: ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ ಅವರ ಪತ್ನಿ ಚೆನ್ನಮ್ಮ ಅವರ ಸೋದರ ಎ.ಡಿ. ಕಾಳೇಗೌಡ (81) ನಿಧನರಾದರು.

ಅವರಿಗೆ ಪತ್ನಿ ಕಮಲಾ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಹಾಸನ ಬಳಿಯ ಮುತ್ತಿಗೆ ಹಿರೇಹಳ್ಳಿಯಲ್ಲಿ ಶುಕ್ರವಾರ ನಡೆಯಿತು. ಚೆನ್ನಮ್ಮ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಇದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಳೇಗೌಡ

## 'ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಡಿ. 2ರಂದು'

ಬೆಂಗಳೂರು: 'ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಗೌರವ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ ಅವರ ಜನ್ಮಶತಮಾನೋತ್ಸವವನ್ನು ಡಿ. 2ರಂದು ಭಾಲ್ಕಿ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಅಭಿನಂದನಾ ಗ್ರಂಥ 'ಲೋಕನಾಯಕ' ಲೋಕಾರ್ಪಣೆ ಮಾಡಲಾಗುವುದು' ಎಂದು ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, 'ಬಿಕೆಐಟಿ ಎಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಅಂದು ಬೆಳಿಗ್ಗೆ 11.30ಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಾರ್ಯಕ್ರಮ ಉದ್ಘಾಟಿಸುವರು. ಅಭಿನಂದನಾ ಗ್ರಂಥವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ' ಎಂದರು.

ನಕಲಿಯನ್ನು ತೆಗೆದುಕೊಳ್ಳಬೇಡಿ, ನಿಜವನ್ನು ಮಾತ್ರ ಆರಿಸಿ

Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Deepak Pharma Agency, Mysore : 988672264
For Product information contact :
Bhargavi Bhatt : 6363477044


ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್

# 'ದುರ್ಬಲ ಸಮುದಾಯಗಳ ರಕ್ಷಣೆಗೆ ಆದ್ಯತೆ ಇರಲಿ'

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- 36ನೇ ಲಾ ಏಷ್ಯಾ ಸಮ್ಮೇಳನ
- ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಭಾಗಿ
- ಸಮಕಾಲೀನ ವಿಷಯಗಳ ಗಹನ ಚಿಂತನೆ

**ಲಾ ಏಷ್ಯಾದ 36ನೇ ಅಂತರ ರಾಷ್ಟ್ರೀಯ ವಾರ್ಷಿಕ ಸಮ್ಮೇಳನವು ಪ್ರಸ್ತುತ ದಿನಮಾನಗಳನ್ನು ಗಮನ ದಲ್ಲಿರಿಸಿಕೊಂಡು ಚಿಂತನ-ಮಂಥನ ನಡೆಸಲಿದೆ.**

**ಎಸ್.ಎಸ್.ನಾಗಾನಂದ**
ಹೈಕೋರ್ಟ್‌ನ ಹಿರಿಯ ವಕೀಲರು

ಬೆಂಗಳೂರು: 'ಜಾತಿ, ಲಿಂಗಾಧಾರಿತ ಅಸಮಾನತೆಗಳ ಜೊತೆಜೊತೆಗೇ ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯ ಎದುರಿಸುತ್ತಿರುವ ದುರ್ಬಲ ಸಮುದಾಯಗಳ ರಕ್ಷಣೆಗೆ ಆಡಳಿತ ವ್ಯವಸ್ಥೆ ಕಟಿಬದ್ಧವಾಗಬೇಕಾದ ಅವಶ್ಯಕತೆ ಇದೆ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಒತ್ತಿ ಹೇಳಿದರು.

ನಗರದಲ್ಲಿ ನಡೆಯುತ್ತಿರುವ ನಾಲ್ಕು ದಿನಗಳ ಅಂತರರಾಷ್ಟ್ರೀಯ 'ಲಾ ಏಷ್ಯಾ ಸಮ್ಮೇಳನ-2023'ರ ಎರಡನೇ ದಿನವಾದ ಶನಿವಾರ, ವಿವಿಧ ಗೋಷ್ಠಿಗಳ ಆರಂಭಕ್ಕೂ ಮುನ್ನ, 'ಸ್ವಾತಂತ್ರ್ಯದ ಹೊಸ ಹಾದಿಯಲ್ಲಿ ವ್ಯಕ್ತಿ ಮತ್ತು ರಾಜ್ಯಗಳ ಗುರುತು' ಎಂಬ ವಿಷಯವನ್ನು ಕೇಂದ್ರವಾಗಿಸಿಕೊಂಡು ಅವರು ದಿಕ್ಸೂಚಿ ನುಡಿಗಳನ್ನಾಡಿದರು.

'ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ನೀಡಲಾಗಿರುವ ಸಾಂವಿಧಾನಿಕ ರಕ್ಷಣೆಯನ್ನು ಕಾಪಾಡುವ ದಿಸೆಯಲ್ಲಿ ರಾಜ್ಯಗಳು ಹೆಚ್ಚಿನ ಆದ್ಯತೆ ನೀಡಬೇಕಿದೆ. ಸಾಂಪ್ರದಾಯಿಕ ಸ್ವಾತಂತ್ರ್ಯದ ಮನಃಸ್ಥಿತಿಯಿಂದ ಸಮಕಾಲೀನ ಸ್ವಾತಂತ್ರ್ಯದ ಕಡೆಗೆ ನಾವು ದೃಷ್ಟಿ ಹಾಯಿಸಬೇಕಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

'ಭಾರತದ ನ್ಯಾಯಾಂಗ ವ್ಯವಸ್ಥೆ ಇಂದು ಡಿಜಟಲೀಕರಣ ಮತ್ತು ಕೃತಕ ಬುದ್ಧಿಮತ್ತೆಯ ಆಧುನಿಕ ತಂತ್ರಜ್ಞಾನಗಳ ಮಧ್ಯೆ ನಾಗಾಲೋಟದಲ್ಲಿ ಸಾಗುತ್ತಿದ್ದು ಈ ದಿಸೆಯಲ್ಲಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಅವಶ್ಯಕತೆ ಇದೆ' ಎಂದರು.

ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, 'ಕೊರೊನಾ ಅವಧಿಯ ನಂತರದ ಬೆಳವಣಿಗೆಗಳಲ್ಲಿ ಕರ್ನಾಟಕ ಹೈಕೋರ್ಟ್ ತಂತ್ರಜ್ಞಾನ ಆಧಾರಿತ ಕಲಾಪಗಳಿಗೆ ಹೆಚ್ಚಿನ ಒತ್ತು ನೀಡಿದ್ದು ಸಾಕಷ್ಟು ಯಶಸ್ಸು ಸಾಧಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ' ಎಂದರು.

**ಗೋಷ್ಠಿಗಳು:** ಡಿಜಿಟಲ್ ಯುಗದಲ್ಲಿನ ನ್ಯಾಯಾಂಗ ನಡೆ, ವಿವಾಹ: ಒಂದು ಮಾನವ ಹಕ್ಕೇ?, ಅಂತರ್ಜಾಲ ಯುಗದಲ್ಲಿನ ಮಾನವ ಹಕ್ಕುಗಳು ಹಾಗೂ ಆನ್‌ಲೈನ್ ಮೂಲಕ ಎಸಗುವ ದೌರ್ಜನ್ಯ, ವಿದೇಶಿ ವಕೀಲರಿಗೆ ಭಾರತದ ನೆಲದಲ್ಲಿ ವಕೀಲಿಕೆಗೆ ಅವಕಾಶ, ಕ್ವೀರ್ ಕುಟುಂಬಗಳು ಎದುರಿಸಬೇಕಿರುವ ಕಾನೂನು ಸಮಸ್ಯೆಗಳು, ನ್ಯಾಯಾಂಗ ನಿಂದನೆ, ಉದ್ಯೋಗ ಕಾನೂನು, ಮಕ್ಕಳ ಹಕ್ಕುಗಳು, ಸಾಮಾಜಿಕ ಮಾಧ್ಯಮಗಳಲ್ಲಿನ ರೀಲಿಂಗ್ ಮತ್ತು ಅದರಲ್ಲಿ ಅಂಶಗಳ ನಿಯಂತ್ರಣ, ರಿಯಲ್ ಎಸ್ಟೇಟ್ ಮತ್ತು ಕೊಡುಕೊಳ್ಳುವಿಕೆಯ ವ್ಯವಹಾರ, ರಿಯಲ್ ಎಸ್ಟೇಟ್‌ನಲ್ಲಿ ಕ್ರಿಪ್ಟೊಕರೆನ್ಸಿ ಪಾತ್ರ, ಸ್ವತಂತ್ರ ನ್ಯಾಯಾಂಗದ ಬಲವರ್ಧನೆ, ಬ್ಯಾಂಕಿಂಗ್, ಆರ್ಥಿಕತೆ, ಅಂಗವಿಕಲರ ಹಕ್ಕುಗಳು ಮತ್ತು ಅವರ ಕುಟುಂಬಗಳು, ಸ್ಥಳೀಯ ಜನರ ಹಕ್ಕುಗಳು ಮತ್ತು ಸಾಂವಿಧಾನಿಕತೆ... ಹೀಗೆ 15 ವಿವಿಧ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಹಿರಿಯ ವಕೀಲೆ ಜಯ್ನಾ ಕೊಠಾರಿ, ಅಕ್ಕೈ ಪದ್ಮಸಾಲಿ ಗೋಷ್ಠಿಗಳಲ್ಲಿ ವಿಷಯ ಮಂಡಿಸಿದರು.

ಇವುಗಳಲ್ಲಿ ಕೆಲವು ಮುಖ್ಯ ಗೋಷ್ಠಿಗಳನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ, ಬಿ.ವಿ.ನಾಗರತ್ನ, ಅರವಿಂದ ಕುಮಾರ್, ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ನಡೆಸಿಕೊಟ್ಟರು.

ಲಾ ಏಷ್ಯಾ ಸಮ್ಮೇಳನದಲ್ಲಿ ಪಾಲ್ಗೊಂಡ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ(ಎಡದಿಂದ ಮೂರನೆಯವರು) ಅವರ ಜತೆ ಲಾ ಏಷ್ಯಾದ ಸಹಾಧ್ಯಕ್ಷ ಎಸ್.ಎಸ್. ನಾಗಾನಂದ, ಅಧ್ಯಕ್ಷೆ ಮೆಲಿಸ್ಸಾ ಕೆ ಪಾಂಗ್, ಬಾಂಗ್ಲಾದೇಶದ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ನಯೀಮಾ ಹೈದರ್

### ಸಹೃದಯಿ ವರಾಳೆ

'ಕಂಚಿನಕಂಠದ ದೃಢನುಡಿಗಳ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅತ್ಯಂತ ಸಹೃದಯಿ ಮತ್ತು ಮಗುವಿನ ಮನಸ್ಸುಳ್ಳವರು' ಎಂದು ಹಿರಿಯ ವಕೀಲ ಎಸ್.ಎಸ್.ನಾಗಾನಂದ ಕೊಂಡಾಡಿದರು.

ಸಮ್ಮೇಳನ ಆರಂಭಕ್ಕೂ ಮುನ್ನ ಅತಿಥಿಗಳ ಪರಿಚಯದ ವೇಳೆ ನಾಗಾನಂದ ಅವರು, 'ವರಾಳೆಯವರು ಕರ್ನಾಟಕದ ಅಳಿಯ ಎಂಬುದು ನಮ್ಮ ಹೆಗ್ಗಳಿಕೆ' ಎಂದರಲ್ಲದೆ, 'ತೆರೆದ ನ್ಯಾಯಾಲಯದಲ್ಲಿನ ಕಲಾಪಗಳಲ್ಲಿ ವರಾಳೆ ಅವರು ಕಿರಿಯ ವಕೀಲರಿಗೆ ನೀಡುವ ಅವಕಾಶ ಮಾದರಿಯಾಗಿದೆ. ಅತ್ಯಂತ ವ್ಯವಧಾನದಿಂದ ಕಲಾಪಗಳನ್ನು ನಡೆಸುವ ಅವರ ನಡೆಯಿಂದ ಕಿರಿಯ ವಕೀಲರ ಆತ್ಮವಿಶ್ವಾಸ ವೃದ್ಧಿಸುತ್ತದೆ' ಎಂದರು.

## ಶಿವಮೂರ್ತಿ ಶರಣರಿಗೆ ಶಿಕ್ಷೆಯಾಗಲಿ: ಎಚ್. ವಿಶ್ವನಾಥ್



ಬೆಂಗಳೂರು: 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿಯಾಗಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಶರಣರಿಗೆ ಶಿಕ್ಷೆಯಾಗಬೇಕಿತ್ತು' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶುರಾಂ ಅವರೊಂದಿಗೆ ಶನಿವಾರ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, 'ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣೆಗೆ ಪೋಕ್ಸೊ ಕಾಯ್ದೆ ಇದೆ. ಆದರೆ, ಶಿವಮೂರ್ತಿ ಶರಣರಂತಹವರ ಪ್ರಕರಣಗಳಲ್ಲಿ ಕರ್ನಾಟಕದಲ್ಲಿ ಪೋಕ್ಸೊ ಕಾಯ್ದೆ ದುರ್ಬಲವಾದಂತಿದೆ' ಎಂದರು.

'ಪೋಕ್ಸೊ (ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಆರೋಪಿಗಳಿಗೆ ಸುಲಭವಾಗಿ ಜಾಮೀನು ಮಂಜೂರಾಗುವುದಿಲ್ಲ. ಆಸಾರಾಂ ಬಾಪು ಹಲವು ವರ್ಷಗಳಿಂದ ಜೈಲಿನಲ್ಲಿದ್ದಾರೆ. ಆದರೆ, ಶಿವಮೂರ್ತಿ ಶರಣರು ಜೈಲಿನಿಂದ ಹೊರಗೆ ಬಂದಿದ್ದಾರೆ' ಎಂದರು.

'ರಾಘವೇಶ್ವರ ಶ್ರೀಗಳ ಪ್ರಕರಣ, ಸೌಜನ್ಯ ಪ್ರಕರಣ ಎಲ್ಲ ಏನಾದವು? ಶಿವಮೂರ್ತಿ ಶರಣರ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಧೀಶರು ಮಹಿಳೆ. ಅಕ್ಷಮ್ಯ ಅಪರಾಧ ಮಾಡಿದ ಶರಣರು ಹೇಗೆ ಹೊರಬಂದರು' ಎಂದು ವಿಶ್ವನಾಥ್ ಪ್ರಶ್ನಿಸಿದರು.

**ಕೃಷ್ಣ ಮೃಗಗಳು ಎಲ್ಲಿ?:** 'ಹುಲಿ ಉಗುರನ್ನು ಕೊರಳಿನಲ್ಲಿ ಹಾಕಿಕೊಂಡವರನ್ನು ಜೈಲಿಗೆ ಹಾಕಿದ್ದಾರೆ. ಮುರುಘಾ ಮಠದಲ್ಲಿ 25 ಕೃಷ್ಣ ಮೃಗಗಳು ಇದ್ದವು. ಅವು ಈಗ ಎಲ್ಲಿ ಹೋದವು? ಅರಣ್ಯ ಇಲಾಖೆ ಈ ಕುರಿತು ಗಮನಹರಿಸಬೇಕು' ಎಂದು ಒತ್ತಾಯಿಸಿದರು.

RAMRAJ COTTON SHOWROOMS
BANGALORE : KG Road • Shivaji Nagar • Ulsoor • Gandhi Bazar • Malleshwaram • Jayanagar : 30th Cross Road SS Plaza,10th B Main Road • Koramangala • Rajaji Nagar • R.T. Nagar • Vijayanagar • Banashankari • Yeshwanthpur Yelachenahalli • Uttarahalli • HSR Layout • Ramamurthy Nagar • J.P. Nagar • RR Nagar • Marathahalli • KR Puram Kengeri • Hesaragatta • Yelhanka • Nelamangala • Devanahalli • Chintamani • Kanakapura • Ramnagara • Tumkur
Available at Ramraj Cotton Showrooms and All Leading Textile Shops | shop online @ www.ramrajcotton.in


## ಟೆಕ್ ಫೆಸ್ಟ್ ವೇಳೆ ಕಾಲ್ತುಳಿತ ನಾಲ್ವರು ವಿದ್ಯಾರ್ಥಿಗಳ ಸಾವು

ಒಂದನೇ ಪುಟದಿಂದ...

'ಗಾಯಗೊಂಡಿರುವ ವಿದ್ಯಾರ್ಥಿಗಳನ್ನು ಕಲಮಶ್ಶೇರಿಯ ಸರ್ಕಾರಿ ವೈದ್ಯಕೀಯ ಕಾಲೇಜು ಸೇರಿದಂತೆ ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ' ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

'ಟಿಕೆಟ್ ಪಡೆದವರಿಗೆ ಮಾತ್ರವೇ ಸಭಾಂಗಣದೊಳಗೆ ಪ್ರವೇಶ ಇತ್ತು. ಆದರೆ ಸಭಾಂಗಣದ ಹೊರಗೆ ಸ್ಥಳೀಯರೂ ಇದ್ದರು' ಎಂದು ಪ್ರತ್ಯಕ್ಷ ದರ್ಶಿಯೊಬ್ಬರು ತಿಳಿಸಿದ್ದಾರೆ.

ಈ ಮಧ್ಯೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತುರ್ತು ಸಭೆ ಕರೆದು ದುರಂತದ ಬಗ್ಗೆ ಮಾಹಿತಿ ಪಡೆದು, ತನಿಖೆಗೆ ಆದೇಶಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿ ಹಲವರು ದುರಂತಕ್ಕೆ ಕಂಬನಿ ಮಿಡಿದು, ಸಂತಾಪ ಸೂಚಿಸಿದ್ದಾರೆ.

## ಮುಂಬೈ ರೇಸ್

### ಕ್ರಿಸ್ಟೋಫಲ್ ಗೆಲ್ಲುವ ನಿರೀಕ್ಷೆ

ಎ.ಕ್ಯಾಂಪ್ಬೆಲ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ರಿಸ್ಟೋಫಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗೋಲ್ಡಿವ 2, ಲಾರ್ಡ್ ಮರ್ಫಿ 3, ಲಿಯೋ ದಿ ಲಯನ್ 5
2ನೇ ರೇಸ್: ಬುಗ್ಗಟ್ಟಿ 2, ಡಾಯನ್ನೆ 4, ಬಿಗ್ ರೆಡ್ 3
3ನೇ ರೇಸ್: ಕ್ರಿಸ್ಟೋಫಲ್ 10, ಪ್ರೈಡ್ಸ್ ಏಂಜೆಲ್ 3, ಎಂಪರರ್ ರೋಡಿರಿಕ್ 4
4ನೇ ರೇಸ್: ಡ್ರೀಮ್ ಅಲೈಯನ್ಸ್ 3, ಜೂಲಿಯಸ್ 2, ವೈಕಿಕಿ 4
5ನೇ ರೇಸ್: ಲಿಟ್ಟೋರಿಯೊ 9, ಅಜ್ರಿನಾಝ್ 3, ಕನ್ಯಾರಾಶಿ 2
6ನೇ ರೇಸ್: ನೊಬಿಲಿಟಿ 1, ಷಾಂಪೇನ್ ಸ್ಟೈಲ್ 3, ಲೇಡಿ ಡಿ 4
7ನೇ ರೇಸ್: ಕಿಂಗ್ಸ್ ರಿಟ್ರೀಟ್ 3, ಓವರ್ ದಿ ಲೈನ್ 4, ಬಬ್ಲಿ ಬಾಯ್ 1

**ಉತ್ತಮ ಬೆಟ್: ಬುಗ್ಗಟ್ಟಿ**

ಜಾಕ್‌ಪಾಟ್ 3,4,5,6,7 | ಟ್ರಿಬಲ್ 4,5,6

## ಜಿಗಣಿವರೆಗೆ ಮೆಟ್ರೊ ವಿಸ್ತರಣೆಗೆ ಮನವಿ

ಆನೇಕಲ್: ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಜಿಗಣಿ ಕೈಗಾರಿಕೆ ಪ್ರದೇಶದವರೆಗೂ ಮೆಟ್ರೊ ರೈಲು ಸಂಚಾರ ಮಾರ್ಗ ವಿಸ್ತರಣೆಗೆ ಮನವಿ ಸಲ್ಲಿಸಲಾಗುವುದು ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

ಆನೇಕಲ್ ತಾಲ್ಲೂಕು ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವುದರಿಂದ ಇಲ್ಲಿಯೂ ಅಭಿವೃದ್ಧಿಯ ವೇಗ ಹೆಚ್ಚಿಸಬೇಕಾಗಿದೆ. ಅದಕ್ಕಾಗಿ ಜಿಗಣಿ ಕೈಗಾರಿಕೆ ಪ್ರದೇಶದವರೆಗೂ ಮೆಟ್ರೊ ರೈಲು ಮಾರ್ಗ ವಿಸ್ತರಣೆ ಅಗತ್ಯ ಎಂದು ಅವರು ಪ್ರತಿಪಾದಿಸಿದರು.


ಸಂವಿಧಾನ ದಿನಾಚರಣೆ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ


ಭಾರತದ ಸಂವಿಧಾನ
ಪ್ರಸ್ತಾವನೆ
ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಂವಿಧಾನ ದಿನಾಚರಣೆ ಪ್ರಯುಕ್ತ ಭಾರತರತ್ನ
ಡಾ. ಬಿ.ಆರ್. ಅಂಬೇಡ್ಕರ್ ರವರ ಪ್ರತಿಮೆಗೆ ಪುಷ್ಪಾರ್ಚನೆ
ದಿನಾಂಕ: 26.11.2023, ಭಾನುವಾರ ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ವಿಧಾನಸೌಧದ ಮುಂಭಾಗ, ಬೆಂಗಳೂರು

ಸರ್ಕಾರದ ಸಾಧನೆಗಳ ವಿವರ - ಸಮಾಜ ಕಲ್ಯಾಣ ಇಲಾಖೆ

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ
ರೂ. 34,293.69 ಕೋಟಿಗಳನ್ನು ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ

ಎಸ್.ಸಿ/ಎಸ್.ಟಿ ಗುತ್ತಿಗೆದಾರರಿಗೆ ರೂ. 1 ಕೋಟಿಯವರೆಗಿನ ಕಾಮಗಾರಿಗಳಲ್ಲಿ 24.10% ಮೀಸಲಾತಿ

ಪ್ರೋತ್ಸಾಹಧನ ವಿತರಣೆ
ರೂ. 124.52 ಕೋಟಿಗಳನ್ನು 65,420 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ

ಕ್ರೈಸ್ ವಸತಿ ಶಾಲೆ
ಒಟ್ಟು 2,06,240 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ

ಸ್ವಾವಲಂಬಿ ಸಾರಥಿ
ಯೋಜನೆಯಡಿ ಪ. ಜಾತಿ/ಪ. ಪಂಗಡದ ನಿರುದ್ಯೋಗಿಗಳಿಗೆ ನಾಲ್ಕು ಚಕ್ರಗಳ ವಾಹನಗಳಿಗೆ 75% ರಷ್ಟು ಗರಿಷ್ಠ ರೂ. 4.00 ಲಕ್ಷ ಸಹಾಯಧನ

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ವಿತರಣೆ
ರೂ.82.67 ಕೋಟಿಗಳ ಮೊತ್ತವನ್ನು 6,74,162 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆ 2013ರ ಸೆಕ್ಷನ್ 7(ಡಿ) ಕೈಬಿಡಲು ಕ್ರಮ

PTCL ಕಾಯ್ದೆಗೆ ತಿದ್ದುಪಡಿ
ಪ. ಜಾತಿ /ಪ. ಪಂಗಡದವರಿಗೆ ಸರ್ಕಾರದಿಂದ ಮಂಜೂರಾದ ಜಮೀನುಗಳು ಅನಧಿಕೃತವಾಗಿ ಪರಭಾರೆ ಆಗಿದ್ದಲ್ಲಿ, ಸಕ್ಷಮ ಪ್ರಾಧಿಕಾರಗಳಿಗೆ ದೂರು ಸಲ್ಲಿಸಲು ಯಾವುದೇ ಕಾಲಮಿತಿ ಇರುವುದಿಲ್ಲ

ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳು ಮತ್ತು ಕ್ರೈಸ್ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ರೂ.900 ಕೋಟಿ ಒದಗಿಸಲಾಗಿದೆ

ಪ.ಜಾತಿ/ಪ.ಪಂಗಡದ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಕೆ.ಎಸ್.ಎಫ್.ಸಿ.ಯಿಂದ ಪಡೆಯುವ ಸಾಲಕ್ಕೆ ನೀಡುತ್ತಿರುವ ಸಮಾನಾಂತರ ಖಾತ್ರಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯುತ್ತಿರುವ ಸಾಲಕ್ಕೂ ವಿಸ್ತರಣೆ

ಒಟ್ಟು 1,88,284 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಲಾಗಿದೆ

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು ವಿದ್ಯಾರ್ಥಿಗಳೊಂದಿಗೆ ಚರ್ಚಿಸುತ್ತಿರುವುದು.

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು; - ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

‘ಲೋಕಸಭೆ ಚುನಾವಣೆಗೆ ಮೈತ್ರಿ ಇಲ್ಲ; 2ರಿಂದ 6 ಕ್ಷೇತ್ರದಲ್ಲಿ ಸ್ಪರ್ಧೆ’

# ಜನಾರ್ದನ ರೆಡ್ಡಿ ಕೆಆರ್‌ಪಿಪಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ನೂತನ ರಾಜ್ಯ ಅಧ್ಯಕ್ಷರಾಗಿ ಗಂಗಾವತಿ ಕ್ಷೇತ್ರದ ಶಾಸಕ ಜಿ.ಜನಾರ್ದನ ರೆಡ್ಡಿ ಅವರು ನಗರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.

ಹಿಂದಿನ ಅಧ್ಯಕ್ಷ ಜೆ.ರಾಮಣ್ಣ ಅವರಿಂದ ಪಕ್ಷದ ಬಾವುಟ ಸ್ವೀಕರಿಸಿದ ರೆಡ್ಡಿ, ‘ಪ್ರಾದೇಶಿಕ ಪಕ್ಷದಲ್ಲಿ ಹೊಸ ಶಕೆ ಆರಂಭ’ವಾಗಿದೆ ಎಂದು ಘೋಷಿಸಿದರು. ಹಲವು ಜಿಲ್ಲೆಗಳಿಂದ ಬಂದಿದ್ದ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಸಾಕ್ಷಿಯಾದರು. ಇದೇ ವೇಳೆ ರಾಜ್ಯ ಹಾಗೂ ಜಿಲ್ಲಾಮಟ್ಟದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ಹಸ್ತಾಂತರಿಸಿದರು.

ನಂತರ ಮಾತನಾಡಿದ ಜನಾರ್ದನ ರೆಡ್ಡಿ, ‘ಮುಂದಿನ ಲೋಕಸಭೆ ಚುನಾವಣೆಯಲ್ಲಿ ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ. ಚಿತ್ರದುರ್ಗ, ಕೋಲಾರ, ಬಾಗಲಕೋಟೆ, ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ನಡೆಸಿ, ಕ್ಷೇತ್ರದಲ್ಲಿನ ವಾತಾವರಣ ಅವಲೋಕಿಸುತ್ತೇನೆ. ಪೂರಕ ವಾತಾವರಣವಿರುವ ಎರಡರಿಂದ ಆರು ಕ್ಷೇತ್ರಗಳಲ್ಲಿ ಕೆಆರ್‌ಪಿಪಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ’ ಎಂದು ಹೇಳಿದರು.

‘ಕಳೆದ ವಿಧಾನಸಭೆ ಚುನಾವಣೆಯಲ್ಲಿ ಎಂಟು ಕ್ಷೇತ್ರಗಳಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸವಾಲೊಡ್ಡಿದ್ದೇವೆ. 2028ರ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಆರಂಭಿಸಿದ್ದು 113 ಕ್ಷೇತ್ರದಲ್ಲಿ ಗೆಲ್ಲುವ ಪ್ರಯತ್ನ ಮಾಡುತ್ತೇವೆ. ಬಿಜೆಪಿ ಸಹ ಆರಂಭಿಕ ದಿನಗಳಲ್ಲಿ ಒಂದು ಸ್ಥಾನ ಮಾತ್ರ ಗೆದ್ದಿತ್ತು. ನಂತರ, ಅಧಿಕಾರಕ್ಕೇರಿತ್ತು’ ಎಂದು ಹೇಳಿದರು.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷ(ಕೆಆರ್‌ಪಿಪಿ)ದ ರಾಜ್ಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಜನಾರ್ದನ ರೆಡ್ಡಿ ಅವರನ್ನು ಪಕ್ಷದ ಮುಖಂಡರು ಸನ್ಮಾನಿಸಿದರು

‘ಕಾಂಗ್ರೆಸ್‌ಗೆ ಅಧಿಕಾರದ ದಾಹ. ಬಿಜೆಪಿ ಬಗ್ಗೆಯೂ ಜನರಿಗೆ ಅಸಮಾಧಾನವಿದೆ. ಜಾತಿಗಣತಿ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರವು ಗೊಂದಲ ಮೂಡಿಸುತ್ತಿದೆ’ ಎಂದು ಆಪಾದಿಸಿದರು.

ಇದೇ ವೇಳೆ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಮನೋಹರಗೌಡ, ವೆಂಕಟರಮಣ, ಮುನ್ನಬಾಯಿ, ಶ್ರೀಕಾಂತ್, ಕೆ.ಎಸ್. ದಿವಾಕರ್, ಯುವ ಘಟಕದ ರಾಜ್ಯ ಅಧ್ಯಕ್ಷರಾದ ಭೀಮಾಶಂಕರ್ ಪಾಟೀಲ, ಮಹಿಳಾ ಘಟಕದ ಅಧ್ಯಕ್ಷೆ ಹೇಮಲತಾ, ಎಸ್‌.ಸಿ ಘಟಕದ ಅಧ್ಯಕ್ಷ ದೊರೆಪ್ಪನಾಯಕ ಸೇರಿದಂತೆ ಹಲವರಿಗೆ ನೇಮಕಾತಿ ಪತ್ರ ಹಸ್ತಾಂತರಿಸಲಾಯಿತು.

## ‘ಸಂವಿಧಾನ ರಕ್ಷಣೆಗೆ ಜಾಗೃತಿ ಸಮಾವೇಶ ಇಂದಿನಿಂದ’

ಬೆಂಗಳೂರು: ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಸಂವಿಧಾನದ ರಕ್ಷಣೆ, ಪ್ರಜಾಪ್ರಭುತ್ವದ ಉಳಿವಿಗಾಗಿ ರಾಜ್ಯದಾದ್ಯಂತ ಜಿಲ್ಲಾಮಟ್ಟದ ಜಾಗೃತಿ ಸಮಾವೇಶಗಳನ್ನು ಇದೇ 26ರಿಂದ ಡಿ. 31ರವರೆಗೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ‘ಡಾ. ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚಿಸಿದ್ದಾರೆ ಎಂಬ ಕಾರಣಕ್ಕೆ ಅದನ್ನು ಸಂಘ ಪರಿವಾರ ಮತ್ತು ಬಿಜೆಪಿ ವಿರೋಧಿಸುತ್ತಿವೆ. ಆದ್ದರಿಂದ ಸಂವಿಧಾನ ವಿರೋಧಿ ಶಕ್ತಿಗಳನ್ನು ನಿಯಂತ್ರಿಸಲು ದಲಿತ, ದಮನಿತ, ಶೋಷಿತ ಸಮುದಾಯಗಳ ಹಕ್ಕುಗಳನ್ನು ರಕ್ಷಿಸಲು ರಾಜ್ಯದಾದ್ಯಂತ ಸಮಾವೇಶಗಳನ್ನು ಆಯೋಜಿಸಿ ನಿರ್ಣಯಗಳನ್ನು ಕೈಗೊಳ್ಳಲಾಗುವುದು’ ಎಂದರು.

‘ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ಸರ್ಕಾರ ಸ್ವೀಕರಿಸಿ ಕೂಡಲೇ ಬಿಡುಗಡೆಗೊಳಿಸಬೇಕು. ಜನಗಣತಿ ನಡೆಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಮಹಿಳಾ ಮೀಸಲಾತಿಯಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಕಡ್ಡಾಯವಾಗಿ ರಾಜಕೀಯ ಮೀಸಲಾತಿ ನೀಡಬೇಕು’ ಎಂದು ಒತ್ತಾಯಿಸಿದರು.

# ಬಿಟಿಎಸ್: 30 ರಾಷ್ಟ್ರಗಳು ಭಾಗಿ

## 29ರಿಂದ ಮೂರು ದಿನ ಸಮ್ಮೇಳನ– ಸಚಿವ ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ 29ರಿಂದ ಡಿಸೆಂಬರ್ 1ರವರೆಗೆ ನಗರದ ಅರಮನೆ ಮೈದಾನದಲ್ಲಿ ನಡೆಯಲಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2023ರಲ್ಲಿ 30 ರಾಷ್ಟ್ರಗಳ ತಂತ್ರಜ್ಞಾನ ಕ್ಷೇತ್ರದ ಪ್ರಮುಖರು, ನವೋದ್ಯಮಗಳ ಪ್ರತಿನಿಧಿಗಳು ಮತ್ತು ಹೂಡಿಕೆದಾರರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ನ.29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶೃಂಗಸಭೆಯನ್ನು ಉದ್ಘಾಟಿಸುವರು. ರಾಜ್ಯದ ಹಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು’ ಎಂದರು.

ಈ ಬಾರಿಯ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯು ‘ಬ್ರೇಕಿಂಗ್ ಬೌಂಡರೀಸ್– ಇನ್ನೋವೇಷನ್ ಫ್ರಂ ಇಂಡಿಯಾ ಇಂಪ್ಯಾಕ್ಟ್ ಫಾರ್ ವರ್ಲ್ಡ್’ ಎಂಬ ಧ್ಯೇಯವಾಕ್ಯದ ಅಡಿಯಲ್ಲಿ ನಡೆಯಲಿದೆ. ಕಝಕಿಸ್ತಾನದ ಸಚಿವ ಬಗ್ದತ್ ಮುಸ್ಸಿನ್ ಹಾಗೂ ಇವಿಪಿ ಆ್ಯಂಡ್ ಸಿಟಿಒ ಕಂಪನಿಯ ವ್ಯವಸ್ಥಾಪಕ ಮಾರ್ಕ್ ಪೇಪರ್‌ಮಾಸ್ಟರ್ ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದ ಗಣ್ಯರೂ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಿಪ್ರೊ ಕಾರ್ಯನಿರ್ವಾಹಕ ಅಧ್ಯಕ್ಷ ರಿಶಾದ್ ಪ್ರೇಮ್‌ಜಿ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಸೇರಿದಂತೆ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಹಲವು ಪ್ರಮುಖರು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳುವರು ಎಂದರು.

**ವೈವಿಧ್ಯಮಯದ ಕಾರ್ಯಕ್ರಮ:** ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ಸಂವಾದ, ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗಿರುವ ಆವಿಷ್ಕಾರಗಳಿಗೆ ಸಂಬಂಧಿಸಿದ ಪ್ರದರ್ಶನ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಸಚಿವರು ಹೇಳಿದರು.

ಕೃತಕ ಬುದ್ಧಿಮತ್ತೆ, ಸೈಬರ್ ಭದ್ರತೆ, ಸೈಬರ್ ಯುದ್ಧ, 5–ಜಿ ತಂತ್ರಜ್ಞಾನದ ಅಳವಡಿಕೆ ಸೇರಿ ಭವಿಷ್ಯದ ಮುನ್ನೋಟ ಒದಗಿಸಬಲ್ಲ ಹಲವು ವಿಷಯಗಳು ಈ ಶೃಂಗಸಭೆಯ ಭಾಗವಾಗಿವೆ. ಸಮ್ಮೇಳನದ ಅಂಗವಾಗಿ ಎಸ್‌ಟಿಪಿಐ–ಐ.ಟಿ ರಫ್ತು ಪ್ರಶಸ್ತಿ, ಸ್ಮಾರ್ಟ್ ಬಯೋ ಪ್ರಶಸ್ತಿ, ಎಟಿಎಫ್ ಪ್ರಶಸ್ತಿ, ಗ್ರಾಮೀಣ ಐ.ಟಿ ರಸಪ್ರಶ್ನೆ ಸೇರಿದಂತೆ ಹಲವು ಪ್ರಶಸ್ತಿ, ಬಹುಮಾನಗಳ ಪ್ರದಾನ ನಡೆಯಲಿದೆ ಎಂದರು.

### ಚಂದ್ರಯಾನದ ಮಾದರಿ ಪ್ರದರ್ಶನ

‘ಚಂದ್ರಯಾನ–3ರ ಲ್ಯಾಂಡರ್‌ನ ಮಾದರಿಯನ್ನು ತಂತ್ರಜ್ಞಾನ ಶೃಂಗಸಭೆಯಲ್ಲಿ ಪ್ರದರ್ಶಿಸಲಾಗುವುದು. ಚಂದ್ರಯಾನದ ಹಿಂದಿನ ತಯಾರಿಯನ್ನು ಪ್ರತಿಬಿಂಬಿಸುವ ಪ್ರದರ್ಶನವೂ ನಡೆಯಲಿದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

### ಪ್ರಮುಖಾಂಶಗಳು

- 75 ಗೋಷ್ಠಿಗಳು
- 400ಕ್ಕೂ ಹೆಚ್ಚು ಭಾಷಣಕಾರರು
- 350ಕ್ಕೂ ಗೆಚ್ಚು ನವೋದ್ಯಮಗಳು
- 600ಕ್ಕೂ ಹೆಚ್ಚು ಪ್ರದರ್ಶಕರು
- 15,000 ಮಂದಿ ಈವರೆಗೆ ನೋಂದಣಿ

---

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## REAL ESTATE BUYING

### General

#### General

WANTED 1 to 10 Acres or more Land for Investment with Road, Water facility,Level Land without Encumbrance from Silk Board to Hosur side. Interested Land Owners Call 9789055144

### Sites

#### Banashankari

WANTED SITE BDA and KHB approved in Chandapura Surya City,Sarjapur Road, Banashankari 6th Stage. Contact: 9900640887

#### Kanakapura Road

KANAKAPURA ROAD Wanted Site 30x40,40x60 Narayana Nagar, BCMC Layout Gubblala Anjanapura. Contact: 9380647082. Agents Excuse.

"WANTED 30X40,30X50 BMRDA approved site at Kaglipura Harohalli KHB alloted site at Raysandra. 9845178335"

#### Magadi Road

REQUIRED SITE/ Independent House in and around surrounding Magadi Road, Kadabagere, Machohalli, Bedrahalli, Anjananagar 20x30 OR 30x40 Owner or agent. Contact: 9353617093.

#### Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

#### Nagarabhavi

WANTED HOUSE, Sites, Flats Surrounding Nagarbhavi, Mallathahallli Vishveshwaraiah Layout 20x30, 30x40, 40x60. ABHILASHA CONSULTANT. 9480565758

#### Vishweshwariah Layout

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

#### Mysore

WANTED MUDA Allotted Sites Measuring 20/30, 30/40, 40/60 and 50/80 Genuine Owners contact: 9845495879, 9902066606

## RENTAL PROPERTIES

### Accommodation Available

#### Commercial

3800 SQFT of Prime Commercial Office Space Available RENT on Queens Road in Central Business District of Bangalore. 9742383604.

RENT, PEENYA, NH-4, Commercial, East facing, ground+4, each floor 1300 sqft with lift, parking. Suitable for MNC/ Bank/ Corporate. Call: 9886325259

COMMERCIAL SPACE FOR RENT 5100`Sqft. Near Vijaya`Bank Layout RTO on 60 Feet`Road, Lift, Basement Parking, Ground,First, Second. 8095055449.

#### Industrial And Factory

FOR RENT: 13000 sq ft Newly constructed 1st, 2nd floor with 50HP power each, 3rd fabricated closed structure with Lift 1500 kg capacity at Peenya 1st stage, near TVS Cross. Call: 9448398678, 9886577211

AT TUMKUR, Industrial Shed for Rent 12000 sqft with/ without large open area, with power, water, ready to occupy at Antharasanahalli Industrial Area. Contact: 9663374086, 080-28360561 Email: purchase@vetrilindia.in

3000 SQFT, 6300 sqft, 8000 sqft (HT) with power at Peenya 4th phase. Call: 9535477360, 080-28360561 purchase@vetrilindia.in

#### Godown

TOTAL 10000 Sqft Area, 3000 Sqft Shed Built up for Rent at Tumkur Industrial Area. Suitable for Godown. Call: 9880201335

DH DECCAN HERALD Classifieds More value, more impact
ಪ್ರಜಾವಾಣಿ REAL ESTATE
The 1st thing to do when Selling/Buying your Property
#1 PLACE YOUR AD HERE
REAL ESTATE
www.dhclassifieds.com BOOK NOW
Book your ad with us now!
For more details contact:
+91 9731810277 | +91 9900428036 |
+91 9845114560 | +91 9886213331 |
+91 9901641752 | 080- 45557163/164

## BUILDERS ESSENTIAL

### Water Proofing

*WE FIX* LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## EDUCATIONAL

### Diploma Courses

JNANA JYOTHI YOGA STUDY CENTRE Mahalakshmi Layout (Affiliated to Karnataka Sanskrit University) Admission Open-Courses- Certificate/ Diploma/ PG Diploma in Yoga Online/ Offline. Last Date 27-11-2023, with fine 30.11.2023. 9663663637/ 9008557979/ 7019356168

## JOB OPPORTUNITIES

### Engg/ Production Technical

WANTED ELECTRICAL engineer @ bijapur experienced in solar /wind power project apply hr@klenepaks.com

### Security & Detectives

ALL TIME ALERT SECURITY SERVICES, Required FIELD OFFICER, 3 Years Experience, Working Area: Bangalore City and Whitefield, Office: Basavanagudi, Bangalore-560004. 9739530301, 9964072624, 080-41632211

### Teachers/ Professors

**New Millennium School**
Horamavu Agara, Bangalore-560043
[Affiliated to CISCE New Delhi]
Invites application for the following positions from suitably qualified and experienced full time Teachers.
Music, Sanskrit, Basketball Coach, Physics / Maths (Middle and Senior School)
Office Staff with good Computer skills in Excel.
Send your CV to: newmillenniumschool@gmail.com
Walk in interview between 8 am to 12.30 pm on a working day.
Contact: 8660541421 7892839366
Visit: www.newmillenniumschool.com

**ST. FRANCIS COLLEGE**
Affiliated to Bengaluru City University
Approved by AICTE
P.B.No. 3417, 3rd Block, 8th Main, Koramangala, Bengaluru-560034. Tel: 080-25531037/38
Cell Ph: 8792265704, Website: www.stfranciscollege.edu.in

**FACULTY RECRUITMENT**

Applications are invited for the post of Professors/Associate/Assistant Professors, in the following Departments.

Management BBA / MBA | Computer Science BCA / MCA

| | |
|---|---|
| Qualification | PG with NET/SET/Ph.D with minimum of 55% marks is required at PG level |
| Experience | Above 5 years |
| Job Location | Koramangala, Bengaluru |

Interested and Eligible Candidates may send their resume along with recent passport size photograph, copies of qualification and experience certificate to the Email-ID:
admin@stfranciscollege.edu.in
director@stfranciscollege.edu.in
by mentioning the post and department applying for in the subject line within 15 days.

**V.E.T.B.V.L. POLYTECHNIC**
14th Main, 2nd Phase, J.P.Nagar, Bangalore-560078.Ph : 080-26586808/26584760

**Requires Principal**

Qualification : M.Tech./Ph.D
Experience : 10 Years experience with adequate Admnistrative experience
Age : 40-50 Years, relaxable in case of deserving Candidates.
Salary : As per the Institution norms
Preference will be given to dynamic professionals with polytechnic or engineering background and excellent communication skills. Applications may be forwarded to vetinst@rediffmail.com / parvathi3838@gmail.com within 10 days.

**BHAVAN BANGALORE PRESS SCHOOL**
a joint venture of BHARATIYA VIDYA BHAVAN & THE BANGALORE PRESS
#89 Mysore Road Chamarajpet Bangalore-560018
Affiliated to CBSE
Invites application for the post of
PRINCIPAL
VICE PRINCIPAL
Qualifications: Post-graduate with BEd or MEd Should have 2-3 years relevant experience in CBSE school.
Age not more than 50 years
Apply within 15 days.
jobsbbps@gmail.com

### General

SHREE VEMANA Souharda Credit Co-Operative Society Ltd, No.127/34 7thCross 4thMain WilsonGarden (Near PoliceStation) Bangalore-27 Phone:080-22483757 REQUIRED: ACCOUNTANTS: B.Com Graduates with 2years experience Computer Diploma To Read Write&Speak Kannada is essential OFFICE ASSISTANTS: SSLC Pass To Read Write&Speak Kannada Candidates below 30 years need Apply within 10 days

FRANK PUBLIC SCHOOL, JP-Nagar 6th Phase, MARKETING EXECUTIVES, ADMISSION COUNCILLORS, FRONT OFFICE EXECUTIVES. 7019301626 rumysud@gmail.com

WANTED: ASSISTANT ACCOUNTANT, COMPUTER OPERATOR, RECEPTIONIST, TYPIST. Qualification: B.Com with Typing & Computer knowledge. Experienced persons will preferred. The S.S.K. Co-operative Society Limited, 43, G.K. Temple Street, Chickpet Cross, Bengaluru- 560053. Phone: 080-41222054, 40940546 E-mail: sskcooperative.ho@gmail.com

REQUIRED STAFF for Store and Clerical work for Office at Sudamanagar, Ladies/Gents PUC/BCom. 9945775913

MORE Classifieds IN SUPPLEMENT

WANTED EXPERIENCED Tally ACCOUNTANT, Marketing Purchase DME Executives, Car Driver For Mini Cement Plant at Tumkur District and Peenya, Bangalore. Contact: 9448288666, 7975591621 Email: siddaganga.sgc@gmail.com

## BUSINESS

### Business to Business

#### Consultants

WE ARE a group of Retired Bank Executives with Experience in closure of CreditCard Loans, NPA Loans, DRT cases, Closure and Settlement of Loans. If you need our service Call Arun 9945699789.

#### Finance

NEED 10.00 lakhs urgently to meet Marriage expenses. Two clear titled 30x40 adjoining sites on the main Road at hindupur Provided as Collateral. For 6 months duration, Honest transaction promised Call: 9980419950

### Business Offers

#### Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

#### General

CAREER/ BUSINESS Opportunity- Flexible work. Unlimited earnings. Zero investment with Banking/ Finance. Age above 25. M.G. Road- 9845520530

#### Machinery & Tools

FOR SALE: Steel Fabrication/ Tower Manufacturing Machines as Power Press,Angle Cutting &_Straightening Machine, Drilling Machine, Welding_Sets, Crane with Hoist, Galvanizing Plant & Machinery,Oil Tanks and various other machineries. Available near Hoodi Metro. Interested parties Contact: 9845039680.

## PUBLIC NOTICE

**KARNATAKA REDDYJANA SANGHA**
No.1, Mahayogi Vemana Road, 3rd Block, Koramangala, Bengaluru-560 034.
**TENDER NOTICE**
Quotations are invited from reputed Vendors for supply of 15 Nos TCL Smart TV's Model No.TCL 65" 65P635 to Vemana Institute of Technology.
Last date for submitting sealed quotations: 30/11/2023 at 5.00pm.
For more details, Visit our website www.reddyjanasangha.org or Contact: 9972885413
President General Secretary

**PUBLIC NOTICE**

NATIONAL CONSUMER DISPUTES REDRESSAL COMMISSION
Under the Consumer Protection Act, 2019
Upbhokta Nyay Bhawan, 'F' Block, General Pool Office Complex, INA, NEW DELHI — 110 023, Telephone No. 24608760, Fax No. 24651519
Website: http://ncdrc.nic.in

CONSUMER COMPLAINT NO. 85 OF 2021

Ganesh Kumar Kodavuru & Ors. ...Complainants Versus M/s. Prestige Estates Projects Ltd. & Anr. ...Opp. Party THE PURCHASERS/ALLOTTEES OF THE RESIDENTIAL VILLAS IN THE PROJECT NAMELY "PRESTIGE AUGUSTA GOLF VILLAGE" Located in Survey No. (s) 27 to 42 and 56, Situated near Vaderahalli Village, Bidarhalli Hobli, Bangalore East Taluk, Bangalore District, Karnataka.

**Whereas** the above Complainants have, through **Mr. Abhimanyu Verma, Advocate,** having address at: C-47, Nizamuddin East, Delhi-110013. Mob.9910904298 filed the captioned Consumer Complaint before the Hon'ble National Consumer Disputes Redressal Commission, New Delhi on behalf and/or for the benefit of all the,consumers (Home buyers) who have either booked or have been allotted Villas, in the housing project namely **"PRESTIGE AUGUSTA GOLF VILLAGE"** Located in Survey No. (s) 27 to 42 and 56, Situated near Vaderahalli Village, Bidarhalli Hobli, Bangalore East Taluk, Bangalore District, Karnataka., being developed by the Opposite Party No.1 i. e. M/s. Prestige Estates Projects Ltd., through its Chairman and Managing Director: Mr. Irfan Razack, Having address at: Prestige Falcon Towers, 19, Brunton Road, Bengaluru-560025, Karnataka., and Opposite Party No. 2 i. e. Mr. Aleemulla Khan Alias Mushtaq Pasha, R/o No. 19, Khan Villa, Leonard Lane, Richmond Town, Bengaluru-560025, Karnataka., for Redressal of their common grievances, and seeking the following reliefs: *i) Direct the Respondents to Compensate the Complainants with punitive damages assessed at 25% of the total cost/ price paid by each of the Complainants to the Respondent Company for their dishonestly and fraudulently misrepresenting and suppressing the true nature of the Project as approved by the competent authority, resulting in the Complainants investing their hard earned money in what was actually a 'non-residential' Project which is prima facie contrary to the public and advertisements, communications that the Project was in fact a residential Project and for depriving them of the ownership of the common assets and amenities like the golf course and golf club and other common area facilities. This compensation is also sought in lieu of depriving the Complainants of the benefits of a residential property, i.e. lower stamp duty for registration, Income Tax capital gains exemptions, lower property tax, GST implications upon lease, normal resale (as would be possible for residential units) etc., and ii) Direct the Respondents to compensate Complainants for the inordinate delay in completing the construction and handing over possession of their respective Villas @ 12% p.a. simple interest as 600 aro delay compensation from the agreed date of delivery of possession including 6 months grace period i.e. from 30.09.2017 as per Clause 5(a) of the Construction Agreement till the actual date of handover of possession of the Villas to each of the Complainants in the present complaint; and iii) Direct the Respondents to refund the maintenance charges as well as the common area electricity charges collected from the Complainants with interest calculated at 18% p.a. from the date of payment by each of the Complainants since the Golf Club and Golf Course are under the ownership of Respondent No. 1 and the Project is not a Residential Development and the Guest house Owners, are merely members of the Golf Club; and iv) Direct the Respondents to ensure that the common areas and facilities are continued to be maintained by the Respondent No. 1 till the possession of the allotted Villas are handed over as required by law; and v) Pass such other and further orders which this Hon'ble Commission may think fit proper, in the facts and circumstances of the present case in favour of the Complainants and against the Respondent.*

**And whereas** the Hon'ble Commission vide its order dated 20.10.2023 is pleased to direct issue of notice of the institution of the above captioned complaint to all the consumers having same interest in the matter. Accordingly all allottees of the above referred Project having the same grievance against the Opposite Party, may appear before the Commission in-person or through an Advocate/Authorized Representative on **28.02.2024 at 10:30 a.m.** They can inspect the file of the aforementioned complaint in the office of the Counsel for the Complainant (s) and apply for being impleaded as a party to the complaint. They may also note that the decision of the Commission in the captioned complaint will be binding on all the consumers on whose behalf and/or for whose benefit the complaint is instituted. Given under my hand and the seal of this Commission on this 8th day of November, 2023.

By Order **Rajesh Nath**, Assistant Registrar

**ಭಾರತೀಯ ರೆಡ್ ಕ್ರಾಸ್ ಸಂಸ್ಥೆ**
ಕರ್ನಾಟಕ ರಾಜ್ಯ ಶಾಖೆ
ನಂ. 26, ರೆಡ್‌ಕ್ರಾಸ್ ಭವನ, ಮೊದಲನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001
ಸಂಖ್ಯೆ: ಐಆರ್‌ಸಿಎಸ್/ಎಜಿಎಮ್/1085–1209/2023–24 ದಿ: 24/11/2023

**ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ**

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ 2020–21 & 2021–2022ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 19ನೇ ಡಿಸೆಂಬರ್ 2023 ಮಂಗಳವಾರದಂದು ಬೆಳಗ್ಗೆ 11.00 ಘಂಟೆಯಿಂದ ಗಾಜಿನ ಮನೆ, ರಾಜಭವನ, ಬೆಂಗಳೂರು – 560 001 ರಲ್ಲಿ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಥಾವರ್ ಚಂದ್ ಗೆಹ್ಲೋಟ್ ರವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಅಧಿಕೃತ ಪ್ರತಿನಿಧಿಗಳು ಮಾತ್ರ ಈ ಸಭೆಯಲ್ಲಿ ಭಾಗವಹಿಸಲು ಕೋರಿದೆ.

**ಕಾರ್ಯಕ್ರಮದ ವಿವರಗಳು**

1) 2019–20ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಯನ್ನು ಧೃಡೀಕರಿಸುವುದು.
2) 2020–21ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಧೃಡೀಕರಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಒಪ್ಪಿಸುವುದು ಹಾಗೂ ಧೃಢೀಕರಿಸುವುದು.
3) 2021–22ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಧೃಡೀಕರಿಸಲ್ಪಟ್ಟ ಲೆಕ್ಕ ಪತ್ರಗಳನ್ನು ಒಪ್ಪಿಸುವುದು ಹಾಗೂ ಧೃಢೀಕರಿಸುವುದು.
4) 2022–23ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ಅನುಮೋದನೆ.
5) 2023–24ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ಮಂಡನೆ ಮತ್ತು ಅನುಮೋದನೆ.
6) 2023–2024ನೇ ಸಾಲಿನ ಲೆಕ್ಕಪತ್ರ ಪರಿಶೀಲಿಸಲು ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳುವ ಬಗ್ಗೆ ತೀರ್ಮಾನಿಸುವುದು.
7) 2020–21 ನೇ ಸಾಲಿನ ವಾರ್ಷಿಕ ವರದಿಗಳನ್ನು ಒಪ್ಪಿಸುವುದು, ಚರ್ಚಿಸುವುದು ಹಾಗೂ ಧೃಢೀಕರಿಸುವುದು.
8) 2021–22ನೇ ಸಾಲಿನ ವಾರ್ಷಿಕ ವರದಿಗಳನ್ನು ಒಪ್ಪಿಸುವುದು, ಚರ್ಚಿಸುವುದು ಹಾಗೂ ಧೃಢೀಕರಿಸುವುದು.
9) 2020–2021 & 2021–2022ನೇ ಸಾಲಿನ ಉತ್ತಮ ಜಿಲ್ಲಾ / ತಾಲ್ಲೂಕು ಶಾಖೆಗಳಿಗೆ ಪ್ರಶಸ್ತಿ ಪ್ರಧಾನ
10) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು.
11) ಅಧ್ಯಕ್ಷರ ಭಾಷಣ.

ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್ ಸೈಟ್ ಅನ್ನು ಸಂಪರ್ಕಿಸಿ: www.redcrosskarnataka.org

ಹೆಚ್.ಎಸ್. ಬಾಲಸುಬ್ರಮಣ್ಯ, ಪ್ರಧಾನ ಕಾರ್ಯದರ್ಶಿ

## PERSONAL

### Change of Name

I, ARCHANA Saini, R/at No. 207, Victoria 2, 314/8 Patel Rama Reddy Road, Domlur Layout, Bangalore- 560071, after my marriage i have changed my sir name to ARCHANA CHOWDHARY vide affidavit dated 21.03.2023 before notary Mamatha. N.K, Bangalore.

I, ADITYA SHASHIDHAR KENCHI resident of No.410, Ganji Pete, Gajendragad, Gadag-582114 have changed my name to ADITYA KENCHI vide affidavit dated 23/11/2023 sworn before notary S.R.Ravikumar, Bangalore

. I, SELVI, spouse of No.JC219485M Ex-Sub DEVARAJAN C resident of H-No:002, Indus Aspire,No:3, 3rd Main Road Central Excise Layout, Bhoopasandra Bengaluru- 560094 have`changed my name`from SELVI to DEVARAJAN SELVI and my DOB is:02.03.1963 vide`Affidavit dated:23.11.2023 before`the Court of the VIIth Addl.Chief Metropolitan Magistrate at Bengaluru.

I, SIVASHANKAR KOLKONDIKAR S/o.Devendrappa R/a.Sy#97 Plot#16 Kanakapua Main Road Kaggalipura Bengaluru (Ramanagara District) have`changed my name to SIVASHANKAR vide`affidavit dated:24.11.2023 before`notary Chethana.S.V Bangalore

I, AKSHAYA S/o.Sivashankar R/a.Sy#97 Plot#16 (DSR Layout) Kanakapua Main Road, Kaggalipura Bengaluru560082 have`changed my name to AKSHAY SHANKAR vide`affidavit dated;24.11.2023 before`notary Chethana.S.V Bangalore

## MATRIMONIAL

### Brides Wanted

#### Hindu

**BRIDE WANTED**
Hindu Adi-Dravida (Tamil) Boy. Born on 1997, BE- Mechanical Engineer, (working in MNC), Age 26 Years Looking Suitable Match (Hindu Caste/ Language No Bar) Contact: 9341279367

#### Muslim

MUSLIM BOY 1996 Born 5'10 Engineer (Working in USA) Moderate and Liberal family is looking for a suitable match (080-69144008)

MUSLIM BOY 1997 born From a Well Off Family (Only Son) Businessman is looking for a beautiful (Non Working Girl) (080-69072053)

MUSLIM HANDSOME Boy 1988 Born /5'11/ Doctor/ Abroad based (Affluent Family) is looking for a match (080-69144008)

### Grooms Wanted

#### Muslim

MUSLIM BEAUTIFUL Girl 2000 born from Bangalore (Non Working) is looking for a match for early marriage (080-69072053)

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ" CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ

ಆಯುಷ್ಮಾನ್ ಕಾರ್ಡ್ ಮಾಡಿಸಿಕೊಳ್ಳಲು ಯಾವುದೇ ಸಿಎಸ್‌ಸಿ ಅಥವಾ ಪಟ್ಟಿಗೆ ಸೇರಿದ ಆಸ್ಪತ್ರೆಗೆ ಭೇಟಿ ಕೊಡಿ. | ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ pmjay.gov.in | ನಮ್ಮನ್ನು ಅನುಸರಿಸಿ @AyushmanNHA

## ಲೈನ್‌ಮನ್ ಸಾವು

ಒಂದನೇ ಪುಟದಿಂದ...

ಸಿದ್ದರಾಜು

'ಶನಿವಾರ ಮಧ್ಯಾಹ್ನ ಗ್ರಾಹಕರೊಬ್ಬರು ಕರೆ ಮಾಡಿ, ಎಫ್‌–7 ಫೀಡರ್‌ನಲ್ಲಿ ಟ್ರಿಪ್ ಆಗುತ್ತಿರುವ ಬಗ್ಗೆ ಮಾಹಿತಿ ನೀಡಿದ್ದರು. ಸಿದ್ದರಾಜು ಅವರು ದುರಸ್ತಿಗೆ ತೆರಳಿದ್ದರು. ದುರಸ್ತಿ ಪಡಿಸುವ ಮಾರ್ಗದಲ್ಲಿ ವಿದ್ಯುತ್ ಕಡಿತಗೊಳಿಸುವಂತೆ ಆ ವ್ಯಾಪ್ತಿಯ ಬೆಸ್ಕಾಂ ಉಪ ಕೇಂದ್ರದ ಸಿಬ್ಬಂದಿಗೆ ತಿಳಿಸಿದ್ದರು ಎನ್ನಲಾಗಿದೆ. ಆದರೆ, ಅಲ್ಲಿನ ಸಿಬ್ಬಂದಿ, ದುರಸ್ತಿಪಡಿಸುತ್ತಿದ್ದ ಮಾರ್ಗದ ಬದಲಾಗಿ ಬೇರೊಂದು ಮಾರ್ಗದ ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದರು. ವಿದ್ಯುತ್ ಪರಿವರ್ತಕದಲ್ಲಿ ಫ್ಯೂಸ್ ಅಳವಡಿಕೆ ಕಾರ್ಯದಲ್ಲಿದ್ದ ಸಿದ್ದರಾಜುಗೆ ವಿದ್ಯುತ್ ಹರಿದು ದುರಂತ ನಡೆದಿದೆ' ಎಂದು ಕುಟುಂಬಸ್ಥರು ಆಪಾದಿಸಿದರು.

'ಸಿದ್ದರಾಜು ಅವರು ಬೆಸ್ಕಾಂನಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದರು. 6 ತಿಂಗಳ ಹಿಂದೆ ಹೊಸಕೋಟೆ ವಿಭಾಗದಿಂದ ಆವಲಹಳ್ಳಿ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ಅವರಿಗೆ 15 ದಿನದ ಹಿಂದಷ್ಟೇ ಜನಿಸಿದ ಹೆಣ್ಣು ಮಗು, 10 ವರ್ಷದ ಪುತ್ರ ಇದ್ದಾನೆ. ಪಿತೃತ್ವ ರಜೆಯಲ್ಲಿದ್ದರೂ ಕೆಲಸಕ್ಕೆ ಬರುವಂತೆ ಅಧಿಕಾರಿಗಳು ಒತ್ತಾಯಿಸಿದ್ದರು. ಬೆಳಿಗ್ಗೆ ಒಬ್ಬರನ್ನೇ ಕೆಲಸಕ್ಕೆ ಕಳುಹಿಸಿದ್ದಾರೆ. ಘಟನೆ ನಡೆದ ಸ್ಥಳದಲ್ಲಿ ಬೆಸ್ಕಾಂನ ಯಾರೂ ಇರಲಿಲ್ಲ' ಎಂದು ಕುಟುಂಬದ ಚೈತ್ರಾ ಆರೋಪಿಸಿದರು.

'ಘಟನೆ ಕುರಿತು ವರದಿ ನೀಡುವಂತೆ ಅಲ್ಲಿನ ಎಂಜಿನಿಯರ್ ಗಳಿಗೆ ಸೂಚಿಸಲಾಗಿದೆ' ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

# ಕೇಬಲ್ ಸಂಕಷ್ಟ

**ಚಿತ್ರ ಕಳುಹಿಸಿ:** ನಗರದ ಹಲವೆಡೆ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳನ್ನು ಸುತ್ತಲಾಗಿದೆ. ಪಾದಚಾರಿ ಮಾರ್ಗದಲ್ಲಿ ನಾಗರಿಕರಿಗೆ ಇವು ಸಂಕಷ್ಟ ಉಂಟು ಮಾಡಿವೆ. ಅಂತಹ ಅಪಾಯಕಾರಿ ಸ್ಥಳಗಳ ಚಿತ್ರಗಳನ್ನು ವಿಳಾಸದೊಂದಿಗೆ ವಾಟ್ಸ್‌ಆ್ಯಪ್ ಮಾಡಿ...

**96060 38256**




ಅರಮನೆ ರಸ್ತೆಯಲ್ಲಿರುವ ಶ್ಯಾಂಗ್ರಿ–ಲಾ ಹೋಟೆಲ್ ಮುಂಭಾಗದಲ್ಲಿನ ವೃತ್ತದ ಸಮೀಪ ಟ್ರಾನ್ಸ್‌ಫಾರ್ಮರ್‌ಗಳ ತಂತಿಗಳು ಅಪಾಯಕಾರಿ ಮಟ್ಟದಲ್ಲಿವೆ ಚಿತ್ರ ಕಳುಹಿಸಿದವರು– ನಂದಕುಮಾರ್

ಎನ್‌. ನಾಗನಹಳ್ಳಿಯ ಎಂ.ಸಿ.ಎಸ್‌ ಕನ್ವೆನ್ಷನ್ ಹಾಲ್ ಹಿಂಭಾಗದ ಕೆಂಪೇಗೌಡ ಬಡಾವಣೆಯಲ್ಲಿ ವಿದ್ಯುತ್ ವೈರ್‌ಗಳು ಕೈಗೆಟುಕುವ ಮಟ್ಟದಲ್ಲಿವೆ
ಚಿತ್ರ ಕಳುಹಿಸಿದವರು– ಷಂಶುದ್ದೀನ್

ಚಾಮರಾಜಪೇಟೆಯ ವೇಲುಮುರುಗಪುರ, ಭಕ್ಷಿಗಾರ್ಡನ್‌ಗಳಲ್ಲಿ ಅಪಾಯಕಾರಿ ವಿದ್ಯುತ್ ತಂತಿಗಳು ನೇತಾಡುತ್ತಿವೆ. ಮಕ್ಕಳು ಆಟವಾಡುವಾಗ ಅನಾಹುತ ಸಂಭವಿಸುವ ಸಾಧ್ಯತೆ ಇದೆ. ಬೆಸ್ಕಾಂ ಅಧಿಕಾರಿಗಳು ಈ ದುಃಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಬೇಕು
ಚಿತ್ರ ಕಳುಹಿಸಿದವರು– ಎಸ್‌. ಪ್ರಭಾಕರ

**ವರದಿ ಪರಿಣಾಮ**

ರೇಸ್‌ಕೋರ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ವೈರ್‌ಗಳು ಕಾಲಿಗೆ ತಾಗದಂತೆ ಬೆಸ್ಕಾಂ ಸಿಬ್ಬಂದಿ ರಿಪೇರಿ ಮಾಡಿದ್ದಾರೆ

ಸೇಂಟ್ ಜೋಸೆಫ್ಸ್ ಪಿಯು ಕಾಲೇಜಿನ ಸಮೀಪದ ರೆಸಿಡೆನ್ಸಿ ರಸ್ತೆಯ ಪಾದಚಾರಿ ಮಾರ್ಗದ ಮೇಲಿದ್ದ ಕೇಬಲ್‌ಗಳನ್ನು ಬೆಸ್ಕಾಂ ತೆರವು ಮಾಡಿದೆ

## ಸುದ್ದಿ 2 ನಿಮಿಷ

### ₹75 ಲಕ್ಷ ದೋಚಲು ಸುಳ್ಳು ಪ್ರಕರಣ: ಸಿಸಿಬಿ ತನಿಖೆ

**ಬೆಂಗಳೂರು:** ಕಳ್ಳತನವಾಗಿದ್ದ ₹ 75 ಲಕ್ಷ ದೋಚಲು ಸುಳ್ಳು ಪ್ರಕರಣ ಸೃಷ್ಟಿಸಿದ್ದ ಆರೋಪದಡಿ ಬಿಡದಿ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಕೆ. ಶಂಕರ್ ನಾಯಕ್ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ಬ್ಯಾಟರಾಯನಪುರ ಉಪ ವಿಭಾಗದ ಎಸಿಪಿ ಭರತ್ ರೆಡ್ಡಿ ಅವರು ನೀಡಿರುವ ದೂರು ಆಧರಿಸಿ ಶಂಕರ್ ನಾಯಕ್ ಹಾಗೂ ಮಧ್ಯವರ್ತಿ ಲೋಕನಾಥ್ ಸಿಂಗ್ ವಿರುದ್ಧ ಪ್ರಕರಣ ದಾಖಲಾಗಿದೆ.

'ಬ್ಯಾಟರಾಯನಪುರ ಠಾಣೆಯ ಇನ್‌ಸ್ಪೆಕ್ಟರ್ ಆಗಿದ್ದ ಸಂದರ್ಭದಲ್ಲಿ ಶಂಕರ್ ನಾಯಕ್, ತನ್ನ ವ್ಯಾಪ್ತಿಗೆ ಸೇರದ ಸ್ಥಳದಲ್ಲಿ ನಡೆದಿದ್ದ ಕಳ್ಳತನದ ಸಂಬಂಧ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದರು. ಆರೋಪಿಯನ್ನು ಬಂಧಿಸಿ ₹ 72 ಲಕ್ಷ ಜಪ್ತಿ ಮಾಡಿದ್ದರು. ಇದಾದ ನಂತರ, ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದರು. ಜೊತೆಗೆ, ₹ 20 ಲಕ್ಷ ಲಂಚಕ್ಕೂ ಬೇಡಿಕೆ ಇರಿಸಿದ್ದರು ಎಂಬುದು ಎಸಿಬಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಿ ಕಮಿಷನರ್ ಬಿ. ದಯಾನಂದ್ ಅವರು ಆದೇಶ ಹೊರಡಿಸಿದ್ದಾರೆ. ಸಿಸಿಬಿಯ ವಿಶೇಷ ತಂಡ ಕಡತಗಳನ್ನು ಸುಪರ್ದಿಗೆ ಪಡೆದು ತನಿಖೆ ಆರಂಭಿಸಿದೆ. ಶಂಕರ್ ನಾಯಕ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಸಾಧ್ಯತೆ ಇದೆ' ಎಂದು ತಿಳಿಸಿದರು.

### ದಕ್ಷಿಣ ಕನ್ನಡ ಜಿಲ್ಲೆ ಚಾಂಪಿಯನ್

**ಬೆಂಗಳೂರು:** 'ಕಂಠೀರವ ಕ್ರೀಡಾಂಗಣದಲ್ಲಿ ಮೂರು ದಿನಗಳ ಕಾಲ ನಡೆದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಬಾಲಕರ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು 67 ಅಂಕಗಳನ್ನು ಪಡೆಯುವುದರ ಮೂಲಕ ಚಾಂಪಿಯನ್ ಪಟ್ಟ ಪಡೆದುಕೊಂಡಿದೆ' ಎಂದು ಬೆಂಗಳೂರು ಉತ್ತರ ಜಿಲ್ಲೆಯ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎನ್‌. ರಾಜು ತಿಳಿಸಿದ್ದಾರೆ.

'ಕ್ರೀಡಾಕೂಟದ ಆತಿಥ್ಯ ವಹಿಸಿದ್ದ ಬೆಂಗಳೂರು ಉತ್ತರ ಜಿಲ್ಲೆ 17 ಅಂಕಗಳನ್ನು ಪಡೆದುಕೊಂಡು ರನ್ನರ್ ಅಪ್ ಆಗಿದೆ. ಬೆಳಗಾವಿ ಜಿಲ್ಲೆಯ ಭೂಷಣ್ ಸುನಿಲ್ ಪಟೇಲ್ ವಿವಿಧ ಓಟಗಳ ವಿಭಾಗದಲ್ಲಿ ಒಂದು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ಜಯಸುವ ಮೂಲಕ ವೈಯಕ್ತಿಕ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ರೈತರ ಸಂಕಷ್ಟ ಹೆಚ್ಚಿಸಿದ ನೀರಿನ ಅಭಾವ'

**ಬೆಂಗಳೂರು:** ಹವಾಮಾನದ ಏರುಪೇರುಗಳಿಂದ ನೀರಿನ ಅಭಾವದ ಜತೆಗೆ, ರೈತರ ಸಾಲ, ಸಂಕಷ್ಟಗಳೂ ಹೆಚ್ಚುತ್ತಿವೆ ಎಂದು ಶ್ರೀ ಶ್ರೀ ರವಿಶಂಕರ್ ಹೇಳಿದರು.

ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಕೇಂದ್ರದಲ್ಲಿ ಶ್ರೀ ಶ್ರೀ ನೈಸರ್ಗಿಕ ಕೃಷಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ರೈತರ ಇಂತಹ ಸ್ಥಿತಿಗೆ ದೀರ್ಘ ಕಾಲೀನ, ಸುಸ್ಥಿರ ಹಾಗೂ ಆರೋಗ್ಯಕರವಾದ ಪರಿಹಾರ ನೀಡಲು ನೈಸರ್ಗಿಕ ಕೃಷಿ ಕೇಂದ್ರ ಸ್ಥಾಪಿಸಲಾಗಿದೆ. ಮಹಾರಾಷ್ಟ್ರದ 500 ರೈತರಿಗೆ ಪ್ರಾಕೃತಿಕ ಕೃಷಿ ಪದ್ಧತಿಯಲ್ಲಿ ಮಾದರಿ ತೋಟಗಳನ್ನು ನಿರ್ಮಿಸುವ ತರಬೇತಿ ನೀಡಲಾಗಿದೆ. ಕಪ್ಪು ಅರಿಸಿನ, ಮುಳ್ಳಿನ ಬೆಂಡೇಕಾಯಿ, ಕಪ್ಪು ಸೀತಾಫಲದ ದೇಸಿ ಬೀಜ ವಿತರಿಸಲಾಗಿದೆ ಎಂದರು.

ಮಹಾರಾಷ್ಟ್ರದ ಕೃಷಿ ಸಚಿವ ಧನಂಜಯ್ ಮುಂಡೆ ವರ್ಚುಯಲ್ ಮೂಲಕ ಮಾತನಾಡಿದರು. ಸದ್ಗುರು ಸೂರ್ಯಕಾಂತೇಶ್ವರ, ಟಿ. ಮಂಜುನಾಥ, ಸುಧೀರ್ ಛಾಪ್ಟೆ ಉಪಸ್ಥಿತರಿದ್ದರು.

ಸಂತ್ರಸ್ತರಿಂದ ಪ್ರತ್ಯೇಕ ದೂರು: ಪಶ್ಚಿಮ–ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್

# ಬೆತ್ತಲೆ ವಿಡಿಯೊ ಚಿತ್ರೀಕರಿಸಿ ವಂಚನೆ

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ನಿವೃತ್ತ ಸರ್ಕಾರಿ ನೌಕರ ಸೇರಿ ಇಬ್ಬರಿಗೆ ಯುವತಿ ಸೋಗಿನಲ್ಲಿ ಪ್ರತ್ಯೇಕವಾಗಿ ವಿಡಿಯೊ ಕರೆ ಮಾಡಿದ್ದ ಸೈಬರ್ ವಂಚಕರು, ಬೆತ್ತಲು ವಿಡಿಯೊ ಚಿತ್ರೀಕರಿಸಿಕೊಂಡು ₹20.56 ಲಕ್ಷ ದೋಚಿದ್ದಾರೆ.

ಎರಡೂ ಕೃತ್ಯಗಳ ಸಂಬಂಧ ಪಶ್ಚಿಮ ಹಾಗೂ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಹೊರ ರಾಜ್ಯಗಳಲ್ಲಿರುವ ವಂಚಕರು, ಯುವತಿ ನಗ್ನ ವಿಡಿಯೊವನ್ನು ಬಳಸಿಕೊಂಡು ಕರೆ ಮಾಡಿ ವಂಚನೆ ಮಾಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ನಿವೃತ್ತ ಸರ್ಕಾರಿ ನೌಕರ ಹಾಗೂ ವ್ಯಾಪಾರಿಯೊಬ್ಬರು ಬ್ಲ್ಯಾಕ್‌ಮೇಲ್ ಸಂಬಂಧ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

### 'ನಕಲಿ ದಾಖಲೆ ನೀಡಿ ಸಿಮ್ ಖರೀದಿ'

'ಎರಡೂ ಪ್ರಕರಣಗಳಲ್ಲೂ ಆರೋಪಿಗಳು ಬಳಸಿದ್ದ ಸಿಮ್‌ಕಾರ್ಡ್ ಬಗ್ಗೆ ಮಾಹಿತಿ ಕಲೆಹಾಕಲಾಗಿದೆ. ನಕಲಿ ದಾಖಲೆಗಳನ್ನು ನೀಡಿ ಖರೀದಿಸಿದ್ದ ಸಿಮ್‌ಕಾರ್ಡ್‌ಗಳನ್ನು ಆರೋಪಿಗಳು ಕೃತ್ಯಕ್ಕೆ ಬಳಸಿದ್ದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ವ್ಯವಸ್ಥಿತ ತಂಡ ರಚಿಸಿಕೊಂಡು ಕೃತ್ಯ ಎಸಗುತ್ತಿದ್ದಾರೆ. ಸಾರ್ವಜನಿಕರು ಅಪರಿಚಿತ ಸಂಖ್ಯೆಗಳಿಂದ ಬರುವ ವಿಡಿಯೊ ಕರೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಯಾವುದಾದರೂ ಅನುಮಾನವಿದ್ದರೆ ಠಾಣೆಗೆ ದೂರು ನೀಡಬೇಕು' ಎಂದು ತಿಳಿಸಿವೆ.

**ಮುಂಬೈ ಸಿಬಿಐ ಹೆಸರಿನಲ್ಲಿ ಬೆದರಿಕೆ:** 'ಸರ್ಕಾರದ ಇಲಾಖೆಯೊಂದರಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದ 68 ವರ್ಷದ ನೌಕರ, ವಿಜಯನಗರದಲ್ಲಿ ನೆಲೆಸಿದ್ದಾರೆ. ಅವರ ವಾಟ್ಸ್‌ಆ್ಯಪ್‌ಗೆ ಅಪರಿಚಿತ ಸಂಖ್ಯೆಯಿಂದ ಸಂದೇಶ ಬಂದಿತ್ತು. ವಾಟ್ಸ್‌ಆ್ಯಪ್ ಡಿ.ಪಿ.ಯಲ್ಲಿ ಯುವತಿ ಫೋಟೊ ಇತ್ತು. ಸಂದೇಶಕ್ಕೆ ದೂರುದಾರ ಪ್ರತಿಕ್ರಿಯಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅ. 3ರಂದು ವಿಡಿಯೊ ಕರೆ ಮಾಡಿದ್ದ ಯುವತಿ, ದೂರುದಾರರನ್ನು ಲೈಂಗಿಕವಾಗಿ ಪ್ರಚೋದಿಸಿದ್ದರು. ನಂತರ, ದೂರುದಾರರ ಬಟ್ಟೆ ಬಿಚ್ಚಿಸಿ ಬೆತ್ತಲು ಮಾಡಿದ್ದರು. ಅದೇ ದೃಶ್ಯವನ್ನು ಯುವತಿ ಚಿತ್ರೀಕರಿಸಿಕೊಂಡಿದ್ದರು. ನಂತರ, ಕರೆ ಕಡಿತಗೊಳಿಸಿದ್ದರು.'

'ಮುಂಬೈ ಸಿಸಿಬಿ ಪೊಲೀಸರ ಹೆಸರಿನಲ್ಲಿ ದೂರುದಾರರಿಗೆ ಅ. 4ರಂದು ಕರೆ ಮಾಡಿದ್ದ ಆರೋಪಿಗಳು, 'ಯುವತಿಗೆ ವಿಡಿಯೊ ಕರೆ ಮಾಡಿ ಅಸಭ್ಯವಾಗಿ ವರ್ತಿಸಿದ್ದ ಬಗ್ಗೆ ಪ್ರಕರಣ ದಾಖಲಾಗಿದೆ. ನಿಮ್ಮ ಬೆತ್ತಲು ವಿಡಿಯೊ ನಮ್ಮ ಬಳಿ ಇದೆ. ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇವೆ. ಸುದ್ದಿವಾಹಿನಿಗಳಿಗೂ ನೀಡುತ್ತೇವೆ' ಎಂದಿದ್ದರು. ಜೊತೆಗೆ, ಹಣಕ್ಕಾಗಿ ಬೇಡಿಕೆ ಇರಿಸಿದ್ದರು' ಎಂದು ಮೂಲಗಳು ಹೇಳಿವೆ.

'ಹೆದರಿದ್ದ ನಿವೃತ್ತ ನೌಕರ, ಹಂತ ಹಂತವಾಗಿ ₹ 12.36 ಲಕ್ಷ ನೀಡಿದ್ದರು. ಪುನಃ ಆರೋಪಿಗಳು ಹಣ ಕೇಳಿದ್ದರು. ಬೇಸತ್ತ ನಿವೃತ್ತ ನೌಕರ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

**ಸಿಬಿಐ ಹೆಸರಿನಲ್ಲಿ ₹8.20 ಲಕ್ಷ ವಂಚನೆ:** 'ನ್ಯೂ ಬಿಇಎಲ್ ರಸ್ತೆಯ 58 ವರ್ಷದ ನಿವಾಸಿಯಾಗಿರುವ ವ್ಯಾಪಾರಿಯೊಬ್ಬರಿಗೆ ಅ. 18ರಂದು ವಿಡಿಯೊ ಕರೆ ಮಾಡಿದ್ದ ಯುವತಿ, ತಮ್ಮ ಬಟ್ಟೆ ಬಿಚ್ಚಿ ನಗ್ನವಾಗಿದ್ದರು. ಪ್ರಚೋದನೆಗೊಂಡ ವ್ಯಾಪಾರಿ ಸಹ ಬಟ್ಟೆ ಬಿಚ್ಚಿ ಬೆತ್ತಲಾಗಿದ್ದರು. ಇದೇ ದೃಶ್ಯವನ್ನು ಯುವತಿ ಚಿತ್ರೀಕರಿಸಿಕೊಂಡು, ಕರೆ ಕಡಿತಗೊಳಿಸಿದ್ದರು' ಎಂದು ಮೂಲಗಳು ತಿಳಿಸಿದರು.

'ಸಿಬಿಐ ಅಧಿಕಾರಿಗಳ ಹೆಸರಿನಲ್ಲಿ ಕರೆ ಮಾಡಿದ್ದ ಆರೋಪಿಗಳು, 'ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ದೂರು ಬಂದಿದೆ. ಪ್ರಕರಣ ದಾಖಲಿಸಬಾರದೆಂದರೆ, ಹಣ ನೀಡಿ' ಎಂದಿದ್ದರು. ಜೊತೆಗೆ, ಯುಟ್ಯೂಬರ್ ಹೆಸರಿನಲ್ಲೂ ಕರೆ ಮಾಡಿ, 'ವಿಡಿಯೊವನ್ನು ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡುತ್ತೇವೆ' ಎಂದಿದ್ದರು. ಹೆದರಿದ್ದ ದೂರುದಾರ, ಹಂತ ಹಂತವಾಗಿ ₹8.20 ಲಕ್ಷ ನೀಡಿದ್ದರು. ಪುನಃ ಹಣ ಕೇಳಿದಾಗ ವ್ಯಾಪಾರಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಹೇಳಿದರು.

ನೆಲಮಂಗಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ಗೌರವಿಸಲಾಯಿತು. ಪ್ರಾಂಶುಪಾಲ ಕೆ.ವಿ.ಗೌರಿಶಂಕರ್, ಉಪ ಪ್ರಾಂಶುಪಾಲ ಎಚ್‌.ಆರ್‌.ಗೋಪಾಲ್, ಕಾರ್ಯದರ್ಶಿ ಎಸ್‌.ಜ್ಯೋತಿ, ಅಧ್ಯಕ್ಷ ಟಿ.ರಾಮಕೃಷ್ಣ, ಖಜಾಂಚಿ ಬಿ.ವಿ.ಸುರೇಶ್, ಎಂ.ಎಸ್‌.ಲೋಕೇಶ್ ಇದ್ದರು

## 'ಕನ್ನಡ ಕೀಳರಿಮೆಯಾಗಬಾರದು'

**ನೆಲಮಂಗಲ:** 'ಕನ್ನಡದಲ್ಲಿ ಮಾತನಾಡುವುದು ಕೀಳರಿಮೆ ಆಗಬಾರದು. ಇತಿಹಾಸವಿರುವ ಕನ್ನಡ ನಮ್ಮ ಮೊದಲ ಆದ್ಯತೆ ಆಗಬೇಕು' ಎಂದು ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಹೊಯ್ಸಳ ಪದವಿಪೂರ್ವ ಕಾಲೇಜು ಹಮ್ಮಿಕೊಂಡಿದ್ದ 'ಕಲಾ ಉತ್ಸವ ಹಾಗೂ ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಅಧ್ಯಕ್ಷ ಡಾ.ಟಿ. ರಾಮಕೃಷ್ಣ ಮಾತನಾಡಿ, 'ನಾಗತಿಹಳ್ಳಿಯಲ್ಲಿ ಆಯೋಜಿಸುವ 'ಸಾಂಸ್ಕೃತಿಕ ಹಬ್ಬ'ದಲ್ಲಿ ಕಾಲೇಜಿನ ಒಂದು ತಂಡಕ್ಕೆ ಪ್ರದರ್ಶನದ ಅವಕಾಶ ಸಿಕ್ಕಿರುವುದು ಹೆಮ್ಮೆಯ ಸಂಗತಿಯಾಗಿದೆ' ಎಂದರು.

ಪ್ರಾಂಶುಪಾಲ ಕೆ.ವಿ.ಗೌರಿಶಂಕರ್ ಎಷ್ಟೇ ಎತ್ತರಕ್ಕೆ ಬೆಳೆದರೂ ಬೇರುಗಳನ್ನು ಬಿಡಬೇಡಿ ಎಂದರು.

ಉಪ ಪ್ರಾಂಶುಪಾಲ ಎಚ್‌.ಆರ್. ಗೋಪಾಲ, ಕಾಲೇಜು ಸಮಿತಿಯ ಬಿ.ವಿ. ಸುರೇಶ್, ಎಸ್‌.ಜ್ಯೋತಿ, ಅನ್ನಪೂರ್ಣ, ಎಂ.ಎಸ್‌.ಲೋಕೇಶ್ ಇದ್ದರು.

## ನಗರದಲ್ಲಿ ಇಂದು

**ಮಕರಂದ ಕರ್ನಾಟಕ ರಾಜ್ಯೋತ್ಸವ:** ಅತಿಥಿಗಳು: ಕೃಷ್ಣ ಬೈರೇಗೌಡ, ಮಹೇಶ ಜೋಶಿ, ಆಯೋಜನೆ: ನಿಕೊ ಹೋಮ್ಸ್ 1 ಕನ್ನಡ ಬಳಗ, ಸ್ಥಳ: ನಿಕೊ ಹೋಮ್ಸ್ 1 ಭಾರತೀಯ ಸಿಟಿ, ಬೆಳಿಗ್ಗೆ 6ರಿಂದ

**'ಅಂಚಿನ ಮಾತು':** ಗಂಗಪ್ಪ ತಳವಾರ್ ಅವರ 'ಧಾವತಿ' ಪುಸ್ತಕದ ಓದು ಚರ್ಚೆ: ಪ್ರಸ್ತುತಿ: ಪ್ರಸಾದ್ ಗೌಡ ಟಿ.ಎಸ್., ಆಯೋಜನೆ: ನಿರುತ್ತರ, ಸ್ಥಳ: ಎನ್‌.ಎಸ್. ಭವನ, ಜ್ಞಾನಭಾರತಿ ಆವರಣ, ಬೆಳಿಗ್ಗೆ 8

**'ನಾರೀ ಶಕ್ತಿ ಸಂಗಮ' ಜಾಗೃತ ಮಹಿಳಾ ಸಮ್ಮೇಳನ:** ಉದ್ಘಾಟನೆ: ನ್ಯಾ. ಮಂಜುಳಾ ಚೆಲ್ಲೂರು, ಅತಿಥಿಗಳು: ಸುಶೀಲಮ್ಮ, ಜ್ಯೋತಿ ಶಂಕರ್, ಉಮಾಭಾರತಿ, ಆಯೋಜನೆ: ಯಾದವ ಸೇವಾ ಪ್ರತಿಷ್ಠಾನ, ಸ್ಥಳ: ಐಬಿಸು ಕನ್ವೆನ್ಷನ್ ಸೆಂಟರ್, ಹೆಗಡೆನಗರ, ಬೆಳಿಗ್ಗೆ 8ರಿಂದ

**'ವಿಜಯ ವೈಭವ' ವಿಜಯದಾಸರ ಆರಾಧನಾ ಮಹೋತ್ಸವ:** ಗಾಯನ: ಮುದ್ದುಮೋಹನ್, ಅಧಿತಿ ಪ್ರಹ್ಲಾದ್, ಸಮೀರ್ ವಿ. ಕುಲಕರ್ಣಿ, ವಿಜಯವಿಠ್ಠಲ ದಾಸವೃಂದ, ಆಯೋಜನೆ: ರಾಮ ಸೇವಾ ಮಂಡಳಿ ಟ್ರಸ್ಟ್, ಸ್ಥಳ: ನೆಟ್ಟಿಗೆರೆ ಗ್ರಾಮ, ಕನಕಪುರ ರಸ್ತೆ, ಬೆಳಿಗ್ಗೆ 9ರಿಂದ

**ಸಂವಿಧಾನ ದಿನಾಚರಣೆ ಅಂಗವಾಗಿ ರಾಜ್ಯಮಟ್ಟದ ಚರ್ಚಾಸ್ಪರ್ಧೆ:** ಉದ್ಘಾಟನೆ: ಗಣಪತಿ ನಾಯ್ಕ, ಅತಿಥಿಗಳು: ಸತೀಶ್ ದೊಡ್ಡಮನಿ, ಐ. ತಾರಾನಾಥ್ ಪೂಜಾರಿ, ಕೆಂಪಣ್ಣ, ಆರ್. ನಾಗೇಂದ್ರ ನಾಯ್ಕ, ಎ.ಕೆ. ವಸಂತ, ಎಚ್. ದಯಾನಂದ ಸರಸ್ವತಿ, ಬಿ.ವಿ. ರಾಮಮೂರ್ತಿ, ಪೂಜಪ್ಪ, ಅಧ್ಯಕ್ಷತೆ: ಡಿ. ಎ. ಅನಿಲ್ ಲಕ್ಷ್ಮಿನಾರಾಯಣ ಯಾದವ, ಆಯೋಜನೆ: ಆಲ್ ಇಂಡಿಯಾ ಬ್ಯಾಕ್‌ವರ್ಡ್ ಕ್ಲಾಸಸ್ ಅಡ್ವೊಕೇಟ್ಸ್ ಫೌಂಡೇಷನ್, ಸ್ಥಳ: ಜೆ.ಪಿ. ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9

**ಉಚಿತ ಸಮಾಲೋಚನೆ ಶಿಬಿರ:** ಸ್ಥಳ: ಗಾಯತ್ರಿ ಭವನ, ಬೆಳಿಗ್ಗೆ 10ರಿಂದ

**'ಕನ್ನಡ ಹಬ್ಬ':** ಅತಿಥಿಗಳು: ಎಸ್‌.ಟಿ. ಸೋಮಶೇಖರ್, ಸಿ.ಕೆ. ರಾಮಮೂರ್ತಿ, ಸಿ. ಸೋಮಶೇಖರ್, ಆಯೋಜನೆ: ವಿಸ್ತಾರ ಫೌಂಡೇಷನ್, ಸ್ಥಳ: ಎಸ್‌.ಜೆ.ಆರ್‌.ಸಿ. ಸಭಾಂಗಣ, ಆನಂದರಾವ್ ವೃತ್ತ, ಬೆಳಿಗ್ಗೆ 10

**ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ:** ಸದಾನಂದ, ಅತಿಥಿ: ಕೆ.ವಿ. ರಾಜೇಶ್ವರಿ, ಉಪಸ್ಥಿತಿ: ಭೂಮಿಕ ಕುಲಕರ್ಣಿ, ಸನ್ಮಾನ: ಬಿ.ಎಂ. ಗೋಪಾಲಕೃಷ್ಣ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

**'ನಮ್ಮ ದಿವಾಕರ್' ಎಸ್‌. ದಿವಾಕರ್ ಅವರಿಗೆ ಅಭಿನಂದನೆ, ಸಾಹಿತ್ಯ, ಸಂಗೀತ, ಸಂಭ್ರಮ:** 'ಎಸ್‌. ದಿವಾಕರ್ ಸಾಹಿತ್ಯ ಸಂಭ್ರಮದ ವಿಶೇಷ ಸಂಚಿಕೆ' ಬಿಡುಗಡೆ: ಪರಿಮಳ ಪಡಸಾಲೆ, ಅತಿಥಿಗಳು: ಎಂ.ಎಸ್‌. ಆಶಾದೇವಿ, ವಿವೇಕ ಶಾನಭಾಗ, ದಿವಾಕರ ರಚಿತ ಭಾವಗೀತೆಗಳ ಗಾಯನ: ಪರಮೇಶ್ವರ ಹೆಗಡೆ, ಆಯೋಜನೆ: ಎಸ್‌. ದಿವಾಕರ್ ಗೆಳೆಯರ ಬಳಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.15

**ರಾಜ್ಯಮಟ್ಟದ ಅಂಧರ ಸಾಂಸ್ಕೃತಿಕೋತ್ಸವ, ಗಾನಯೋಗಿ ಪುಟ್ಟರಾಜ ಗವಾಯಿ ಸಂಗೀತ ರತ್ನ, ವಿಶ್ವಚೇತನ ಹೆಲೆನ್ ಕೆಲ್ಲರ್ ಸಮಾಜಸೇವಾ ರತ್ನ ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಅಶೋಕ್, ಅಧ್ಯಕ್ಷತೆ: ವಾಟಾಳ್ ನಾಗರಾಜ್, ಪ್ರಶಸ್ತಿ ಪುರಸ್ಕೃತರು: ವಿ. ಸರಸ್ವತಿ, ವಿ. ಮನೋಹರ್, ಅತಿಥಿಗಳು: ಮಂಜುನಾಥ್ ಬಾಬು, ಬಿ.ವಿ. ಮಲ್ಲಿಕಾರ್ಜುನಯ್ಯ, ಟಿ. ಮಲ್ಲೇಶ್, ಆಯೋಜನೆ: ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಕಲ್ಯಾಣ ಸಂಸ್ಥೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

**ಕರ್ನಾಟಕ ರಾಜ್ಯೋತ್ಸವ, ಎಚ್‌.ಎಲ್‌.**

**ಕನ್ನಡ ಸಾಹಿತ್ಯ ಪರಿಷತ್ತಿನ ಸಾಂಸ್ಕೃತಿಕ ಸಂವರ್ಧನೆ, ಜಿ. ನಾರಾಯಣ ವಿಚಾರಸಂಕಿರಣ:** ಉದ್ಘಾಟನೆ: ಮಹೇಶ ಜೋಶಿ, ಅತಿಥಿಗಳು: ಕಮಲಾ ಹಂಪನಾ, ಪ್ರಾಸ್ತಾವಿಕ ನುಡಿ: ಎಂ. ನರಸಿಂಹ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಆಯೋಜನೆ: ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ಕಮಲಾ ಹಂಪನಾ

**ನಾಗೇಗೌಡ ಜನಪದ ಸಿರಿ ಪ್ರಶಸ್ತಿ ಪ್ರದಾನ:** ವಾಟಾಳ್ ನಾಗರಾಜ್, ಸತೀಶ್ ರೆಡ್ಡಿ, ಧರ್ಮೇಂದ್ರ ಕುಮಾರ್, ತಲಕಾಡು ಚಿಕ್ಕರಂಗೇಗೌಡ, ಸಿ.ಕೆ. ರಾಮಮೂರ್ತಿ, ಸಿ.ಕೆ. ರಾಮೇಗೌಡ, ಆಯೋಜನೆ: ವಿಶ್ವವಿಜಯ ಕನ್ನಡಿಗರ ವೇದಿಕೆ, ಸ್ಥಳ: ವಿಜಯ ಬ್ಯಾಂಕ್ ಬಡಾವಣೆ, ಕಾಂತಿ ಸ್ವೀಟ್ಸ್ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

**'ಜನನಾಯಕ ಕರ್ಪೂರಿ ಠಾಕೂರ್ ಮತ್ತು ಮಧು ದಂಡವತೆ' ಜನ್ಮಶತಮಾನೋತ್ಸವ:** ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ರಾಮನಾಥ್ ಠಾಕೂರ್, ರಮಾಶಂಕರ್ ಸಿಂಗ್, ಅರುಣ್ ಶ್ರೀವಾಸ್ತವ, ಉದಯ್ ದಂಡವತೆ, ಅಧ್ಯಕ್ಷತೆ: ಮೈಕಲ್ ಬಿ. ಫರ್ನಾಂಡಿಸ್, ಸನ್ಮಾನ: ಹನುಮಂತ, ಹೀರಾಚ್ ವಾಗ್ಮೋರೆ, ಅನುಸೂಯಮ್ಮ, ಆಯೋಜನೆ: ಕರ್ನಾಟಕ ಸಮಾಜವಾದಿ ಒಕ್ಕೂಟ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

**ಮ. ರಾಮಮೂರ್ತಿ ನೆನಪಿನ ಪ್ರಯುಕ್ತ ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ:** ಅಧ್ಯಕ್ಷತೆ: ಟಿ.ಎ. ನೀಲಕಂಠ ಅಡಿಗ, ಅತಿಥಿಗಳು: ಮಹದೇವಪ್ರಸಾದ್, ಜಯಶಂಕರ ಪ್ರಕಾಶ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

**'ಸ್ಕಂದ ಉತ್ಸವ' ಉದ್ಘಾಟನೆ:** ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ರೇಣುಕಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಎಸ್‌.ಟಿ. ಸೋಮಶೇಖರ್, ಅಧ್ಯಕ್ಷತೆ: ಕುಮಾರ ಕೆ.ಎಚ್., ಆಯೋಜನೆ: ಸ್ಕಂದನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಸ್ಕಂದನಗರ ಮುಖ್ಯರಸ್ತೆ, ಎಲೆಕೊಡಿಗೆಹಳ್ಳಿ, ಬೆಳಿಗ್ಗೆ 10.30

**'ಬೂಸಾ ಚಳವಳಿ ಅರ್ಧ ಶತಮಾನ ಸಮಾವೇಶ:** ಉದ್ಘಾಟನೆ: ಎಚ್. ಸಿ. ಮಹದೇವಪ್ಪ, 'ಬೂಸಾ ಚಳವಳಿ ಅರ್ಧ ಶತಮಾನ' ಕಿರುಹೊತ್ತಿಗೆ ಬಿಡುಗಡೆ: ಸತೀಶ್ ಜಾರಕಿಹೊಳಿ, ಆರ್‌.ಬಿ. ತಿಮ್ಮಾಪುರ, ಅಧ್ಯಕ್ಷತೆ: ಲಕ್ಷ್ಮೀನಾರಾಯಣ ನಾಗವಾರ, ಪ್ರಾಸ್ತಾವಿಕ ನುಡಿ: ಜೀವನಹಳ್ಳಿ ವೆಂಕಟೇಶ್, ಅತಿಥಿಗಳು: ಯತೀಂದ್ರ ಸಿದ್ದರಾಮಯ್ಯ, ಬಿ. ಪ್ರಸನ್ನಕುಮಾರ್, ಜನಾರ್ದನ್, 'ಬಿ. ಬಸವಲಿಂಗಪ್ಪನವರು ಮತ್ತು ಸಾಮಾಜಿಕ ಬದ್ಧತೆ ಬೂಸಾ ಚಳವಳಿ ಸಾಂಸ್ಕೃತಿಕ ಆಯಾಮಗಳು' ಕುರಿತು: ಅಗ್ರಹಾರ ಕೃಷ್ಣಮೂರ್ತಿ, ಕಾಳೇಗೌಡ ನಾಗವಾರ, ಅಧ್ಯಕ್ಷತೆ: ಇಂದೂಧರ ಹೊನ್ನಾಪುರ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 12

**ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಎಂ. ಚಿಕ್ಕಪ್ಪಯ್ಯ, ಅತಿಥಿಗಳು: ಎಸ್‌.ಎಸ್‌. ಮೀನಾಕ್ಷಿ ಸುಂದರಂ, ಗಣಪತಿ ಹೆಗ್ಡೆ, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಇಂದಿರಾನಗರ, ಕ್ಲಬ್, ಎಚ್‌ಎಎಲ್, ಮಧ್ಯಾಹ್ನ 3

**'ವಾಮನ ಚರಿತ್ರ' ತಾಳಮದ್ದಳೆ:** ಹಿಮ್ಮೇಳ: ಭಾಗವತ: ನಂದನ್ ಹೆಗಡೆ ದಂಟಕಲ್, ಮದ್ದಳೆ: ನಾರಾಯಣ ಮೂರ್ತಿ ಹೊಸಬಾಳೆ, ಆಗ್ನೇಯ ಭಟ್ ಕ್ಯಾಸನೂರು, ಚಂಡೆ: ಅಮೃತದೇವ್ ಕಟ್ಟಿನಕೆರೆ, ಮುಮ್ಮೇಳ: ರವಿ ಐತುಮನೆ, ಅಕ್ಷಯ್ ಹೆಗಡೆ, ನಿತಿನ್ ಹೆಗಡೆ, ಆದಿತ್ಯ ಹಲ್ಕೋಡು, ಚಂದನ್ ಕಲಾಹಂಸ, ಸಿರಿ ಹಳ್ಳದಾಚೆ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಮಾತೃ ಕೃಪಾ 2ಎಫ್ ಮುಖ್ಯರಸ್ತೆ, ಪಾಪರೆಡ್ಡಿಪಾಳ್ಯ, ನಾಗರಭಾವಿ 2ನೇ ಹಂತ, ಮಧ್ಯಾಹ್ನ 3

**ಕರ್ನಾಟಕ ರಾಜ್ಯೋತ್ಸವ:** ಅಧ್ಯಕ್ಷತೆ: ಎಲ್‌. ರವಿಚಂದ್ರ, ಅತಿಥಿಗಳು: ಶ್ರೀಹರ್ಷ ಎನ್., ಎಂ. ಖಾಸೀಮ್ ಮಲ್ಲಿಗೆಮಡವು, ಎಸ್‌.ಎನ್‌. ಸೇತುರಾಮ್, ಆಯೋಜನೆ: ಮನರಂಜನಾ ಕೂಟ, ಸ್ಥಳ: ನೇತ್ರಾವತಿ ಮಂಟಪ, ಆರ್‌.ಎಂ.ಎಸ್., ಮಧ್ಯಾಹ್ನ 3.30

**ಅ'ಸಾಮಾನ್ಯ' ಗೀತೆ:** ಉಪಸ್ಥಿತಿ: ಎ.ಎಂ. ಚಂದ್ರಶೇಖರ್, ಅರುಣಾ ಎಚ್‌.ಕೆ., ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 5.30

**'ಕಾರ್ತೀಕ ದೀಪೋತ್ಸವ' ವಚನ ಸಂಗೀತ ಪುಸ್ತಕ ಬಿಡುಗಡೆ:** ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಮುಮ್ಮಡಿ ನಿರ್ವಾಣ ಸ್ವಾಮೀಜಿ, ಉಪಸ್ಥಿತಿ: ಚನ್ನಬಸವ ಸ್ವಾಮೀಜಿ, ವಚನ ಸಂಗೀತ: ಎಸ್‌. ಪಿನಾಕಪಾಣಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಗುರುವಣ್ಣದೇವ ಮಠ, ಬಿನ್ನಿಸ್ಟನ್ ಗಾರ್ಡನ್, ಮಾಗಡಿರಸ್ತೆ, ಸಂಜೆ 5.45

**ನುಡಿ ಸುದರ್ಶನ ಅಭಿನಯದ 'ಸಕುಬಾಯಿ ಕಾಮ್‌ವಾಲಿ' ಏಕವ್ಯಕ್ತಿ ನಾಟಕ:** ನಿರ್ದೇಶನ: ಹುಲುಗಪ್ಪ ಕಟ್ಟೀಮನಿ, ಆಯೋಜನೆ: ನುಡಿರಂಗ, ಸ್ಥಳ: ಕೆ.ವಿ. ಸುಬ್ಬಣ್ಣ ಆಪ್ತ ರಂಗಮಂದಿರ, ಸಂಜೆ 6.30

## ವಂಚನೆ ಪ್ರಕರಣ: 'ಬಿಟಿವಿ' ಎಂ.ಡಿ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಂಚನೆ ಪ್ರಕರಣದ ಆರೋಪಿಯಾಗಿರುವ 'ಬಿಟಿವಿ' ಸುದ್ದಿವಾಹಿನಿಯ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜಿ.ಎಂ. ಕುಮಾರ್ ಅವರನ್ನು ವಿಜಯನಗರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಜಾಮೀನು ರಹಿತ ವಾರಂಟ್ (ಎನ್‌ಬಿಡಬ್ಲ್ಯು) ಜಾರಿಯಾಗಿದ್ದರಿಂದ ಕುಮಾರ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಲಯ, ಅವರನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್‌. ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

**2022ರಲ್ಲಿ ದಾಖಲಾಗಿದ್ದ ಎಫ್‌ಐಆರ್:** 'ಕುಮಾರ್ ವಿರುದ್ಧ ಅಶ್ವಿನ್ ಮಹೇಂದ್ರ ಅವರು ದೂರು ನೀಡಿದ್ದರು. ಐಪಿಸಿ 402 (ನಂಬಿಕೆ ದ್ರೋಹ) ಹಾಗೂ ಐಪಿಸಿ 420 (ವಂಚನೆ) ಆರೋಪದಡಿ ಕುಮಾರ್ ವಿರುದ್ಧ 2022ರಲ್ಲಿ ವಿಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು' ಎಂದು ಪೊಲೀಸರು ಹೇಳಿದರು.



ಜಿ.ಎಂ. ಕುಮಾರ್

ದೂರುದಾರ ಅಶ್ವಿನ್ ಮಹೇಂದ್ರ ಹಾಗೂ ಕುಮಾರ್ ಇಬ್ಬರೂ ಪಾಲುದಾರಿಕೆಯಲ್ಲಿ ಈಗಲ್‌ಸೈಟ್ ಮಿಡಿಯಾ ಕಂಪನಿ ಆರಂಭಿಸಿದ್ದರು. ಇಬ್ಬರೂ ಕಂಪನಿಯ ನಿರ್ದೇಶಕರಾಗಿದ್ದರು. ಆರೋಪಿ ಕುಮಾರ್, ಒಬ್ಬರೇ ಕಾನೂನು ಬಾಹಿರವಾಗಿ ಆಡಳಿತ ಮಂಡಳಿ ಸಭೆ ನಡೆಸಲಾರಂಭಿಸಿದ್ದರು. ಅಶ್ವಿನ್ ಅವರ ದಾಖಲಾತಿಗಳನ್ನು ದುರ್ಬಳಕೆ ಮಾಡಿಕೊಂಡು ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ಕೋಟಿಗೂ ಹೆಚ್ಚು ವಹಿವಾಟು ನಡೆಸಿದ್ದರೆಂಬ ಆರೋಪವಿತ್ತು.

**ವರ್ಷದಿಂದ ತಲೆಮರೆಸಿಕೊಂಡಿದ್ದ:** ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದ ಕುಮಾರ್, ಒಂದು ವರ್ಷದಿಂದ ತಲೆಮರೆಸಿಕೊಂಡಿದ್ದರು. ನೋಟಿಸ್ ಜಾರಿಯಾದರೂ ವಿಚಾರಣೆಗೆ ಹೋಗಿರಲಿಲ್ಲ. ಈತನ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿದ್ದ ನ್ಯಾಯಾಲಯ, ಇತ್ತೀಚೆಗೆ ಎನ್‌ಬಿಡಬ್ಲ್ಯು ಜಾರಿ ಮಾಡಿತ್ತು. ಆರೋಪಿ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ಶನಿವಾರ ಮನೆಯ ಬಳಿ ವಾಯುವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ ಕುಮಾರ್ ಅವರನ್ನು ವಶಕ್ಕೆ ಪಡೆಯಲಾಯಿತು.

## ರಸಪ್ರಶ್ನೆ ಸ್ಪರ್ಧೆ: ತಂಡಗಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂ.ಎಸ್. ರಾಮಯ್ಯ ಕಾಲೇಜು ಸಭಾಂಗಣದಲ್ಲಿ ನಡೆದ ಸಂವಿಧಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಹಲವು ಪ್ರಶಸ್ತಿಗಳನ್ನು ಪಡೆದುಕೊಂಡರು.

ಬಿ.ಆರ್.ಅಂಬೇಡ್ಕರ್ ಅಧ್ಯಯನ ಸಂಸ್ಥೆಯ ನೆರವಿನೊಂದಿಗೆ ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯಿಂದ ಆಯೋಜಿಸಲಾಗಿದ್ದ ಸ್ಪರ್ಧೆಯಲ್ಲಿ ಜಡಿಗೇನಹಳ್ಳಿ ಎಂಡಿಆರ್ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಮನೀಶ ಎಂ., ಪುನೀತ್‌ಗೌಡ ಹಾಗೂ ಪ್ರಮೋದ್ ಯಾದವ್ ತಂಡ ಮೊದಲ ಸ್ಥಾನಗಳಿಸಿತು. ದೊಡ್ಡಬಡಗೆರೆ ಸಂಸ್ಥೆಯ ಮದನ್, ಚಂದನ, ಸುಜಯ್ ಎಂ. ನೇತೃತ್ವದ ತಂಡ ದ್ವಿತೀಯ ಸ್ಥಾನ ಗಳಿಸಿದರೆ, ಅಡಕಮಾರನಹಳ್ಳಿ ಎಂಡಿಆರ್‌ಎಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಹರ್ಷಲ, ಎಚ್‌.ಎನ್‌. ತೇಜಸ್, ಶ್ರೇಯಸ್ ಬಿ.ಆರ್. ಮೂರನೇ ಸ್ಥಾನ ಗಳಿಸಿದರು.



ರಸಪ್ರಶ್ನೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು

ಎರಡನೇ ಹಂತದಲ್ಲಿ ನಡೆದ ಸ್ಪರ್ಧೆಯಲ್ಲಿ ಗೋವಾ ವಿಶ್ವವಿದ್ಯಾಲಯ ಮೊದಲ ಸ್ಥಾನ, ದೆಹಲಿ ನ್ಯಾಷನಲ್ ಲಾ ಸ್ಕೂಲ್ ಎರಡನೇ ಸ್ಥಾನ, ಗುಜರಾತ್ ರಾಷ್ಟ್ರೀಯ ಕಾನೂನು ವಿ.ವಿ 3ನೇ ಸ್ಥಾನ ಪಡೆಯಿತು.

ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ನಿರ್ದೇಶಕಿ ವಿ. ಭಾಗ್ಯಲಕ್ಷ್ಮಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಶೈಕ್ಷಣಿಕ ವಿಭಾಗದ ಉಪ ನಿರ್ದೇಶಕ ಪುಂಡಲೀಕ್ ಇದ್ದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಕಂಬಳ ನೋಡಲು ನೆರೆದ ಜನಸಾಗರ (ಎಡಚಿತ್ರ). ಕಂಬಳದಲ್ಲಿ ಓಡಲು ಸಜ್ಜಾಗುತ್ತಿರುವ ಕೋಣಗಳು —ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

### ರೆಬಲ್ ಸ್ಟಾರ್‌ಗಳಾದ ಕೋಣಗಳೊಂದಿಗೆ ಸೆಲ್ಫಿ, ಫೋಟೊಗಳಿಗೆ ಮುಗಿಬಿದ್ದ ಜನರು

# ಬೆಂಗಳೂರಿನಲ್ಲಿ ಕೋಣಗಳ ಮಿಂಚಿನ ಓಟ

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಬಹು ನಿರೀಕ್ಷಿತ 'ಬೆಂಗಳೂರು ಕಂಬಳ ನಮ್ಮ ಕಂಬಳ'ಕ್ಕೆ ಶನಿವಾರ ಅದ್ದೂರಿಯಾಗಿ ಚಾಲನೆ ನೀಡಲಾಯಿತು. ಕರಾವಳಿಯ ಗದ್ದೆಗಳಲ್ಲಿ, ನದಿ ತೀರಗಳಲ್ಲಿ ನೀರು ಚಿಮ್ಮಿಸುತ್ತಿದ್ದ ಕೋಣಗಳು ಶನಿವಾರ ಬೆಂದಕಾಳೂರಿನಲ್ಲಿ ಬೀದಿಯ, ರುಬ್ಬಿದ ಹುರುಳಿ ಕಾಳು ತಿಂದು 'ಕರೆ'ಗಿಳಿದು ಮಿಂಚಿನ ಓಟ ನಡೆಸಿದವು. 178 ಜೋಡಿ ಕೋಣಗಳು ಕಂಬಳದ ಸಂಭ್ರಮವನ್ನು ರಾಜಧಾನಿಯಲ್ಲಿ ಹರಡಿದವು.

ಅರಮನೆ ಮೈದಾನದಲ್ಲಿ ನಿರ್ಮಿಸಿದ್ದ 'ರಾಜ–ಮಹಾರಾಜ' ಕರೆಗಳಿಗೆ ಬೆಳಿಗ್ಗೆ ಚಾಲನೆ ನೀಡಲಾಯಿತು. ಕೋಣಗಳ ಕಂಬಳ ಓಟ ಶುರುವಾಯಿತು. ಹಗ್ಗದ ಓಟ, ನೇಗಿಲು ಓಟ, ಅಡ್ಡ ಹಲಗೆ, ಕನೆ ಹಲಗೆ ಓಟಗಳು ರೋಮಾಂಚನಗೊಳಿಸಿದವು. 14 ಸೆಕೆಂಡ್ ಒಳಗೆ ಗುರಿ ತಲುಪದ ಜೋಡಿಗಳು ಮುಖ್ಯಸ್ಪರ್ಧೆಯಿಂದ ಹೊರಬಿದ್ದವು. ಸಂಜೆವರೆಗೆ ಈ ಓಟಗಳು ನಡೆದವು.

ಪ್ರಮುಖ ಸ್ಪರ್ಧೆಗಳು ಸಂಜೆ ಆರಂಭಗೊಂಡವು. 6.5 ಕೋಲು (ಒಂದು ಕೋಲು–2.5 ಅಡಿ) ಎತ್ತರ ಮತ್ತು 7.5 ಕೋಲು ಎತ್ತರದಲ್ಲಿ ನಿಶಾನೆಗಳನ್ನು ಕಟ್ಟಲಾಗಿದ್ದು, ಹಲಗೆ ಓಟದ ಸಂದರ್ಭದಲ್ಲಿ ಕೋಣಗಳು ಅಷ್ಟು ಎತ್ತರಕ್ಕೆ ನೀರು ಚಿಮ್ಮಿಸಿ ರೋಮಾಂಚನಗೊಳಿಸಿದವು.

ಕೋಣಗಳೊಂದಿಗೆ ಹಗ್ಗ ಅಥವಾ ನೇಗಿಲು ಹಿಡಿದುಕೊಂಡು ಶರವೇಗದಲ್ಲಿ ಓಡುವ ಓಟಗಾರರು ಬೆರಗು ಮೂಡಿಸಿದರು. ಕೇವಲ ವ್ಯಾಯಾಮ, ಓಟ, ದುಡಿಮೆಯಿಂದಲೇ ಬೆಳೆಸಿರುವ ಓಟಗಾರರ 'ಸಿಕ್ಸ್‌ಪ್ಯಾಕ್' ದೇಹಗಳು ಮಿರಮಿರ ಮಿಂಚುತ್ತಿದ್ದವು.

ಮೈದಾನದ ಸುತ್ತ ಅಲ್ಲಲ್ಲಿ ಟೆಂಟ್ ಹಾಕಿಕೊಂಡು ನೆರಳಲ್ಲಿ ಇದ್ದ ಕೋಣಗಳು ತಮ್ಮ ಓಟದ ಸಮಯಕ್ಕೆ ಸರಿಯಾಗಿ ನೊಗ ಏರಿಸಿಕೊಂಡು ಸಿಂಗಾರ ಮಾಡಿಕೊಂಡು ಕರೆಯವರೆಗೆ ಮೆರವಣಿಗೆಯಲ್ಲಿ ಬರುವ ಚಂದವನ್ನು ಜನರು ಕಣ್ಣು ತುಂಬಿಕೊಂಡರು.

ಭಾರಿ ಮೈಕಟ್ಟಿನ ಕೋಣಗಳೊಂದಿಗೆ, ಕೋಣ ಓಟಗಾರರೊಂದಿಗೆ ನಿಂತು ಸೆಲ್ಫಿ ತೆಗೆದುಕೊಳ್ಳುವವರು, ಫೋಟೊ ತೆಗೆಸಿಕೊಳ್ಳುವವರ ಸಂಖ್ಯೆ ಅಧಿಕವಿತ್ತು. 'ಸ್ಟಾರ್' ಕೋಣಗಳು ಫೋಟೊ ತೆಗೆಯುವವರಿಗೆ ಸಹಕರಿಸಿದರೆ ಕೆಲವು ಕೋಣಗಳು ರೆಬೆಲ್ ಸ್ಟಾರ್‌ಗಳಂತೆ ತಲೆ ಅಲ್ಲಾಡಿಸಿ ಹಾಯಲು ಮುಂದಾದಾಗ ಕೋಣ ಅಭಿಮಾನಿಗಳು ಓಡುವ ದೃಶ್ಯಗಳು ನಗೆ ಮೂಡಿಸಿದವು.

**ಮಳೆ ತೊಂದರೆ:** ಮಧ್ಯಾಹ್ನದ ಬಳಿಕ ಸುರಿದ ಮಳೆಯು ಕಂಬಳ ನೋಡುವ ಅತ್ಯುತ್ಸಾಹಕ್ಕೆ ತಣ್ಣೀರು ಎರಚಿತು. ಮೈದಾನದಲ್ಲಿ ಅಲ್ಲಲ್ಲಿ ಕೆಸರು ನಿರ್ಮಾಣಗೊಂಡಿತು. ಬೈಕ್‌ಗಳು ಸ್ಕಿಡ್ ಆಗಿ ಜಾರಿ ಬಿದ್ದವು.

**ಸಾಂಸ್ಕೃತಿಕ ಕಾರ್ಯಕ್ರಮ:** ತುಳುನಾಡಿನ ಇತಿಹಾಸವನ್ನು ಬಿಂಬಿಸುವ ವಿವಿಧ ಕಾರ್ಯಕ್ರಮಗಳು ಸಾಂಸ್ಕೃತಿಕ ವೇದಿಕೆಯಲ್ಲಿ ಮೂಡಿಬಂದವು. ಯಕ್ಷಗಾನ, ಕಂಗೀಲು ನೃತ್ಯ, ಆಟಿ ಕಳೆಂಜ ಮುಂತಾದ ಜನಪದ ಕಲೆಗಳಲ್ಲದೇ, ಆಧುನಿಕ ಕಾಮಿಡಿ ಶೋಗಳು, ವಿವಿಧ ನೃತ್ಯಗಳು ಗಮನ ಸೆಳೆದವು.

ಹಲಸಿನ ಹಪ್ಪಳದಿಂದ ಕೋರಿ (ಕೋಳಿ)ರೊಟ್ಟಿಯವರೆಗೆ ಕರಾವಳಿಯ ಸಾಂಪ್ರದಾಯಿಕ ತಿನಿಸುಗಳು, ವಿವಿಧ ಕಲಾಪ್ರಕಾರಗಳ ಪ್ರದರ್ಶನಗಳು ಇದ್ದ 180ಕ್ಕೂ ಅಧಿಕ ಮಳಿಗೆಗಳು ಕಂಬಳದ ಮೈದಾನದಲ್ಲಿದ್ದವು. ನೆಕ್ಕಿಲಾಡಿ ಜಿ.ಎಸ್. ಬ್ಯಾಂಡ್ ವಾದ್ಯದ ಗಂಗಾಧರ ಪೂಜಾರಿ, ಬಾಲಕೃಷ್ಣ ದೇವಾಡಿಗ, ಶೇಖರ ದೇವಾಡಿಗರ ತಂಡದ ಸ್ಯಾಕ್ಸೋಫೋನ್ ವಾದನ, ಕೊಂಬು ಕಂಬಳಕ್ಕೆ ಮೆರುಗು ನೀಡಿದವು.

### ಅಲೆ ಬುಡಿಯೆರ್...

'ಅಣ್ಣ ಬೇಗ ಗೋಣೆರೆನ್ ತಯಾರ್ ಮಲ್ಪುಲೆ' (ಅಣ್ಣಾ, ಕೋಣಗಳನ್ನು ಬೇಗ ಸಜ್ಜುಗೊಳಿಸಿ), 'ಮಿಜಾರ್ ಗುತ್ತುದ ಎರು ಬತ್ತಾಂಡಾ?' (ಮಿಜಾರುಗುತ್ತಿನ ಕೋಣಗಳು ಬಂದವಾ?), 'ಬಾಕೂರು ಶಾಂತರಾಮ ಶೆಟ್ರೆನ ಎರುಳು ತಯಾರಾವೊಂದುಲ್ಲ' (ಶಾಂತಾರಾಮ ಶೆಟ್ಟರ ಕೋಣಗಳು ಸಜ್ಜಾಗುತ್ತಿವೆ), 'ಅಲೆ ಬುಡಿಯೆರ್ (ಅಗೋ...ಬಿಟ್ಟರು)'..... ಈ ರೀತಿಯ ವೀಕ್ಷಕರ ವಿವರಣೆ ಕಂಬಳಕ್ಕೆ ಹುರುಪು ತುಂಬಿದವು. ಕೋಣಗಳ ಓಟ ಶುರುವಾಗುವ ಜಾಗದಲ್ಲಿಯೂ, ಗುರಿ ಮುಟ್ಟುವ ಜಾಗದಲ್ಲಿಯೂ (ಮಂಜೊಟ್ಟಿ) ಇರುವ ಕಂಬಳ ವೀಕ್ಷಕ ವಿವರಣೆ ನೀಡುವವರ ಆಕರ್ಷಕ ಮಾತುಗಳಿಂದ ಜನರನ್ನು ಸೆಳೆದರು.

ಎರಡು ಕರೆಯ ಕೋಣಗಳು ಒಂದೇ ಸಮಕ್ಕೆ ನಿಂತ ಮೇಲಷ್ಟೇ ಓಟ ಆರಂಭಿಸಬೇಕು. ಕೋಣಗಳನ್ನು ತಿರುಗಿಸಿ ತಿರುಗಿಸಿ ಒಂದೇ ಸಮಕ್ಕೆ ನಿಲ್ಲಿಸಲು ಕೋಣ ಓಟಗಾರ ಮತ್ತು ಸಹಾಯಕರು ಸಾಹಸಪಟ್ಟರು. ರೋಚಕ ದೃಶ್ಯಗಳು ನೋಡುಗರ ಮನಸೆಳೆದವು.

### ಕೆಲವೆಡೆ ಶಿಸ್ತು, ಹಲವೆಡೆ ಅವ್ಯವಸ್ಥೆ

ಬೆಂಗಳೂರು ಕಂಬಳದಲ್ಲಿ ವೇದಿಕೆ, ಕರೆ ಇರುವಲ್ಲಿ ಅನಗತ್ಯವಾದ ಅತಿಶಿಸ್ತು ಗೊಂದಲಗಳನ್ನು ಉಂಟು ಮಾಡಿದವು. ಬೇಕಾದಷ್ಟು ಸ್ಥಳಾವಕಾಶ ಇದ್ದರೂ ಸಾರ್ವಜನಿಕರನ್ನು ಅಲ್ಲಿ ಹೋಗಬಾರದು, ಇಲ್ಲಿ ಹೋಗಬಾರದು ಎಂದು ನಿಯಂತ್ರಿಸಲಾಗಿತ್ತು. ಅವರು ಎಲ್ಲಿ ಹೋಗಿ ಕಂಬಳ ವೀಕ್ಷಿಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡುವವರ ಕೊರತೆ ಇತ್ತು. ಸಸ್ಯಾಹಾರ ಮತ್ತು ಮಾಂಸಾಹಾರದ ಉತ್ತಮ ಊಟವನ್ನು ತಯಾರು ಮಾಡಲಾಗಿತ್ತು. ಆದರೆ, ಊಟದ ಹಾಲ್‌ಗೆ ಪ್ರವೇಶಿಸುವಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೇ ನೂಕು ನುಗ್ಗಲು ಉಂಟಾಗಿತ್ತು. ಕಂಬಳ ನೋಡಲು ಬಂದ ಅನೇಕರು ಎಲ್‌ಇಡಿ ಸ್ಕ್ರೀನ್‌ಗಳಲ್ಲಿ ನೋಡಿ ಹಿಂತಿರುಗಿದರು.

ವಾಹನಗಳಲ್ಲಿ ಬರುವವರಿಗೆ ಪ್ರವೇಶ ಇರಲಿಲ್ಲ. ವಾಹನ ನಿಲುಗಡೆಗೆ ನಿಗದಿತ ಸ್ಥಳ ನಿಯೋಜನೆ ಮಾಡಲಾಗಿತ್ತು. ಆದರೆ, ವಾಹನ ಇಲ್ಲದೇ ನಡೆದುಕೊಂಡು ಬರುವವರನ್ನೂ ನೇರ ದಾರಿಯಲ್ಲಿ ಬಿಡದೇ ಸುತ್ತು ಹಾಕಿಕೊಂಡು ಬರುವಂತೆ ಮಾಡಲಾಗಿದ್ದರಿಂದ ಜನರು ಸುತ್ತು ಹಾಕಬೇಕಾಯಿತು.

## ಕಂಬಳ ಕರೆಗೆ ಚಾಲನೆ

**ಬೆಂಗಳೂರು:** ಅರಮನೆ ಮೈದಾನದಲ್ಲಿ ಶನಿವಾರ 'ಬೆಂಗಳೂರು ಕಂಬಳ ನಮ್ಮ ಕಂಬಳ'ದ ಕರೆಗಳಿಗೆ 'ಗಂಗಾರತಿ ಮಾಡಿ, ದೀಪಗಳನ್ನು ಬೆಳಗುವ ಮೂಲಕ ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಚಾಲನೆ ನೀಡಿದರು. ಕಂಬಳದ ವೇದಿಕೆ ಕಾರ್ಯಕ್ರಮವನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದರು.

ಯಡಿಯೂರಪ್ಪ ಮಾತನಾಡಿ, 'ನಮ್ಮಲ್ಲಿ ಕಷ್ಟಕಾಯ ಪರಿಷೆ ಮಾಡಿದ ದೇವರಿಗೆ ಅರ್ಪಿಸುವ ರೀತಿಯಲ್ಲಿ ಕರಾವಳಿ ಭಾಗದಲ್ಲಿ ಕೋಣಗಳನ್ನು ಕಂಬಳದಲ್ಲಿ ಓಡಿಸಿ ಭಕ್ತಿ ಸಮರ್ಪಣೆ ಮಾಡುವ ವಿಶಿಷ್ಟ ಭಕ್ತಿ ಇದೆ. ಅಂಥ ಕಂಬಳವನ್ನು ಕರಾವಳಿಗೆ ಸೀಮಿತಗೊಳಿಸದೇ ಈಗ ಬೆಂಗಳೂರಿಗೂ ತಂದಿದ್ದಾರೆ. ಇಲ್ಲಿ ಯಶಸ್ವಿಯಾಗಿ ನಡೆಸುತ್ತಿದ್ದಾರೆ. ವಿದೇಶಗಳಲ್ಲಿ ಇರುವಂತೆ ನಮ್ಮಲ್ಲಿಯೂ ಸಾಂಸ್ಕೃತಿಕ ಗ್ರಾಮಗಳನ್ನು ನಿರ್ಮಿಸಿ ರಾಜ್ಯದ ಎಲ್ಲ ಸಂಸ್ಕೃತಿಗಳು, ಸಂಪ್ರದಾಯಗಳು ಅಲ್ಲಿ ಪ್ರತಿಬಿಂಬಿಸುವಂತೆ ಮಾಡಬೇಕು' ಎಂದು ಸಲಹೆ ನೀಡಿದರು.

ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, 'ದೈವಾರಾಧನೆ, ನಾಗಾರಾಧನೆ ಸಹಿತ ವಿವಿಧ ಆರಾಧನೆಗಳು, ವಿಶಿಷ್ಟ ಜೀವನ ಪದ್ಧತಿಗಳನ್ನು ಹೊಂದಿರುವ ತುಳುನಾಡು ವೈವಿಧ್ಯಕ್ಕೆ ಹೆಸರುವಾಸಿಯಾಗಿದೆ. ತುಳುನಾಡಿನ ಕಂಬಳವನ್ನು ಜಗತ್ತಿನಾದ್ಯಂತ ಹರಡುವ ಕೆಲಸವನ್ನು ತುಳುವರು ಮಾಡುತ್ತಿದ್ದಾರೆ' ಎಂದು ಶ್ಲಾಘಿಸಿದರು.

ಸಂಸದ ಡಿ.ವಿ. ಸದಾನಂದಗೌಡ, ಗೌರವಾಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ, ಅಧ್ಯಕ್ಷ ಅಶೋಕ್ ಕುಮಾರ್ ರೈ, ಸಂಗೀತ ನಿರ್ದೇಶಕ ಗುರುಕಿರಣ್, ಕಂಬಳ ಅಧ್ಯಕ್ಷ ಸುಂದರರಾಜ್ ರೈ, ಗೌರವಾಧ್ಯಕ್ಷ ಕೆ.ವಿ. ರಾಜೇಂದ್ರಕುಮಾರ್, ಪ್ರಧಾನ ಕಾರ್ಯದರ್ಶಿ ಅಜಿತ್ ಹೆಗ್ಡೆ, ಚಿತ್ರನಟರು ಪ್ರಮುಖರು ಇದ್ದರು.

ಜಮ್ಮು–ಕಾಶ್ಮೀರದ ರಜೌರಿಯಲ್ಲಿ ಉಗ್ರರೊಂದಿಗೆ ನಡೆದ ಕಾದಾಟದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಪ್ರಾಂಜಲ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

### ತುಳುಗೆ ಹೆಚ್ಚುವರಿ ರಾಜ್ಯಭಾಷೆ ಸ್ಥಾನ: ಸಿಎಂ

**ಬೆಂಗಳೂರು:** 'ಕನ್ನಡವು ಕರ್ನಾಟಕದ ಅಧಿಕೃತ ರಾಜ್ಯಭಾಷೆಯಾಗಿದೆ. ರಾಜ್ಯದ ಇನ್ನೊಂದು ಪ್ರಮುಖ ಭಾಷೆಯಾದ ತುಳುವಿಗೆ ಹೆಚ್ಚುವರಿ ರಾಜ್ಯಭಾಷೆಯಾಗಿ ಮಾನ್ಯತೆ ನೀಡಲು ಪ್ರಯತ್ನಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಮನೆ ಮೈದಾನದಲ್ಲಿ ಶನಿವಾರ ಆರಂಭಗೊಂಡಿರುವ 'ಬೆಂಗಳೂರು ಕಂಬಳ–ನಮ್ಮ ಕಂಬಳ' ಜೋಡುಕರೆ ಕಂಬಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರಾವಳಿಯ ಲಕ್ಷಾಂತರ ಮಂದಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಹಾಗಾಗಿ ಬೆಂಗಳೂರಿನಲ್ಲೂ ಪ್ರತಿವರ್ಷ ಕಂಬಳ ಮಾಡಿ ಎಂದು ಸಲಹೆ ನೀಡಿದರು.

ಕೋಣಗಳನ್ನು ಸಾಕಲು ವರ್ಷಕ್ಕೆ ₹ 15 ಲಕ್ಷ ಬೇಕು. ಇದು ಶ್ರೀಮಂತರ ಕಲೆ ಬಡವರು ಹೇಗೆ ಸಾಕುವುದು ಎಂದು ಪ್ರಶ್ನಿಸಿದರು.

ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಮಾತನಾಡಿದರು.

---

## ಸಚಿವ ನಾಗೇಂದ್ರ ವಿರುದ್ಧದ ಪ್ರಕರಣ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನ್ಯಾಯ ಕಲ್ಪಿಸಿದ ಮೇಲೆ, ಅವರದ್ದೇ ಸಚಿವ ಸಂಪುಟದಲ್ಲಿರುವ ನಾಗೇಂದ್ರ ಮೇಲಿರುವ 25ಕ್ಕೂ ಹೆಚ್ಚು ಪ್ರಕರಣಗಳನ್ನೂ ಮುಖ್ಯಮಂತ್ರಿ ವಾಪಸ್ ಪಡೆಯಬೇಕು ಅಲ್ಲವೇ' ಎಂದು ಗಂಗಾವತಿ ಕ್ಷೇತ್ರದ ಶಾಸಕ ಜನಾರ್ದನ ರೆಡ್ಡಿ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ನೂತನ ರಾಜ್ಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

'ಗಣಿಗಾರಿಕೆಗೆ ಸಂಬಂಧಿಸಿದಂತೆ ನನ್ನ ಮೇಲೆ ಐದು ಪ್ರಕರಣಗಳಿದ್ದರೆ, ನಾಗೇಂದ್ರ ಮೇಲೆ 25ಕ್ಕೂ ಹೆಚ್ಚು ಪ್ರಕರಣಗಳು ಇವೆ. ಈ ಹಿಂದೆ ಗಣಿಗಾರಿಕೆ ವಿಚಾರದಲ್ಲಿ ಸಿದ್ದರಾಮಯ್ಯ ಅವರು ದೊಡ್ಡ ಹೋರಾಟ ನಡೆಸಿದ್ದರು. ಈಗ ನಾಗೇಂದ್ರ ಅವರನ್ನೇ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಸಿದ್ದರಾಮಯ್ಯ ಅವರು ವಾಪಸ್ ಪಡೆದು ನ್ಯಾಯ ಕಲ್ಪಿಸಿದ್ದಾರೆ. ಅದೇ ನಾಗೇಂದ್ರಗೆ ಅನ್ಯಾಯ ಮಾಡುತ್ತಿದ್ದಾರೆ' ಎಂದು ಹೇಳಿದರು.

### ನನ್ನ ಈ ಸ್ಥಿತಿಗೆ ಬಿಜೆಪಿ ಮುಖಂಡರೇ ಕಾರಣ: ಮೋದಿ, ಶಾ ವಿರುದ್ಧ ಸೋಮಣ್ಣ ಅಸಮಾಧಾನ

# 'ಎರಡು ಕಡೆ ನಿಲ್ಲಿಸಿ ನನ್ನ ಜೀವ ತೆಗೆದರು'

ಪ್ರಜಾವಾಣಿ ವಾರ್ತೆ

**ತುಮಕೂರು:** 'ಕಳೆದ ವಿಧಾನಸಭೆ ಚುನಾವಣೆಯಲ್ಲಿ ಎರಡು ಕಡೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದರೂ ಕೇಳದೆ ನಿಲ್ಲಿಸಿ ನನ್ನ ಜೀವ ತೆಗೆದರು' ಎಂದು ವಿ.ಸೋಮಣ್ಣ ಅವರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಬಳಿ ಅಳಲು ತೋಡಿಕೊಂಡಿದ್ದಾರೆ.

ಶನಿವಾರ ಸ್ವಾಮೀಜಿಯನ್ನು ಭೇಟಿ ಮಾಡಿ ಗುಪ್ತವಾಗಿ ಚರ್ಚಿಸಿದ ಸಮಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿ ಮುಖಂಡರ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೇಂದ್ರ ಗೃಹ ಸಚಿವ ಅಮಿತ್ ಶಾ ಮನೆಗೆ ಬಂದು ಎರಡು ತಾಸು ಕುಳಿತುಕೊಂಡರು. ವರುಣ, ಚಾಮರಾಜನಗರದಲ್ಲಿ ಸ್ಪರ್ಧಿಸುವಂತೆ ಒತ್ತಡ ಹಾಕಿದರು. ನಿಲ್ಲುವುದಿಲ್ಲ ಎಂದರೂ ಕೇಳಲಿಲ್ಲ. ಒತ್ತಾಯದಿಂದ ಎರಡೂ ಕಡೆ ನಿಲ್ಲಿಸಿ ನನ್ನನ್ನು ಹಾಳು ಮಾಡಿದರು. ಬೆಂಗಳೂರು ಬಿಟ್ಟು ಅಲ್ಲಿಗೆ ಹೋಗಿ ಸ್ಪರ್ಧಿಸಿದ್ದೇ ನನ್ನ ದೊಡ್ಡ ತಪ್ಪು' ಎಂದು ಸ್ವಾಮೀಜಿ ಬಳಿ ಹೇಳಿಕೊಂಡರು ಎಂದು ಗೊತ್ತಾಗಿದೆ.

ಪ್ರಧಾನಿ ನರೇಂದ್ರ ಮೋದಿ ಸಹ ದೆಹಲಿಗೆ ಕರೆಸಿಕೊಂಡು ನಾಲ್ಕು ದಿನ ಒತ್ತಡ ಹಾಕಿ ಎರಡು ಕಡೆ ಸ್ಪರ್ಧಿಸುವಂತೆ ಮಾಡಿದರು. ಬಿಜೆಪಿ ಮುಖಂಡರ ಒತ್ತಡಕ್ಕೆ ಸಿಲುಕಿ ಈ ಸ್ಥಿತಿಗೆ ಬರಬೇಕಾಯಿತು ಎಂದು ನೋವು ತೋಡಿಕೊಂಡರು ಎಂದು ಹೇಳಲಾಗಿದೆ.

**ವರಿಷ್ಠರ ಬುಲಾವ್:** ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಗಳಿಂದ ತೀವ್ರ ಅಸಮಾಧಾನಗೊಂಡಿರುವ ವಿ.ಸೋಮಣ್ಣ, ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ ನೇತೃತ್ವದ ಗುಂಪು ಡಿಸೆಂಬರ್ 7ರಂದು ದೆಹಲಿಗೆ ತೆರಳಿ ವರಿಷ್ಠರಿಗೆ ದೂರು ಸಲ್ಲಿಸಲು ಮುಂದಾಗಿದೆ.

ಸಿದ್ಧಗಂಗಾ ಮಠದಲ್ಲಿ ತಮ್ಮ ಕುಟುಂಬ ನಿರ್ಮಿಸಿರುವ ಗುರುಭವನದ ಉದ್ಘಾಟನೆ ಕಾರ್ಯಕ್ರಮದಲ್ಲಿ ಡಿ. 6ರಂದು ಪಾಲ್ಗೊಳ್ಳಲಿರುವ ಸೋಮಣ್ಣ ಮರುದಿನ ದೆಹಲಿಗೆ ತೆರಳಲಿದ್ದಾರೆ.

'ದೆಹಲಿಗೆ ಬರುವಂತೆ ಶುಕ್ರವಾರ ರಾತ್ರಿ ವರಿಷ್ಠರಿಂದ ಸಂದೇಶ ಬಂದಿದ್ದು, ಅದರಂತೆ ಪಕ್ಷದ ಕೆಲವು ಮುಖಂಡರೊಂದಿಗೆ ದೆಹಲಿಗೆ ಹೋಗುತ್ತಿದ್ದೇನೆ' ಎಂದು ಅವರು ಶನಿವಾರ ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಅರವಿಂದ ಬೆಲ್ಲದ ಅವರನ್ನು ಕರೆದುಕೊಂಡು ಡಿ.7ರಂದು ದೆಹಲಿಗೆ ಹೋಗುತ್ತೇನೆ. ವರಿಷ್ಠರನ್ನು ಭೇಟಿ ಮಾಡಿ ನಮ್ಮ ಅಭಿಪ್ರಾಯ, ನೋವು ಹೇಳಿಕೊಳ್ಳುತ್ತೇವೆ. ವರಿಷ್ಠರು ಮುಂದಿನ ನಿರ್ಧಾರ ಕೈಗೊಳ್ಳುತ್ತಾರೆ' ಎಂದು ತಿಳಿಸಿದರು.

'ಡಿ.7ರಿಂದ 10ರ ವರೆಗೆ ನಾಲ್ಕು ದಿನ ದೆಹಲಿಯಲ್ಲಿ ಬಿಡಾರ ಹೂಡಿ ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತೇವೆ. ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ನನ್ನ ಮುಂದಿನ ರಾಜಕೀಯ ನಡೆ ನಿಂತಿದೆ' ಎಂದು ಸೋಮಣ್ಣ ಸುಳಿವು ನೀಡಿದರು.

'ಮಗು ಅತ್ತರೆ ತಾಯಿ ಹಾಲು ಕೊಡುವುದು. ಇಲ್ಲದೆ ಇದ್ದರೆ ತಾಯಿ ಸಹ ಹಾಲು ಕೊಡುವುದಿಲ್ಲ. ನಾವು ಹಿರಿಯರು. ನಮ್ಮದೇ ಆದ ಸೇವೆ, ಅನುಭವ, ಆಲೋಚನೆ ಇವೆ. ಎಲ್ಲವೂ ನಮ್ಮದೇ ಸರಿ ಎಂದೂ ಹೇಳುವುದಿಲ್ಲ. ಏನೆಲ್ಲ ಆಗಿದೆ ಎಂಬ ವಿಚಾರಗಳನ್ನು ಹೈಕಮಾಂಡ್ ಮುಂದೆ ಇಡುತ್ತೇವೆ' ಎಂದರು.

ವಿ.ಸೋಮಣ್ಣ

- ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಬಳಿ ಅಳಲು ತೋಡಿಕೊಂಡ ಸೋಮಣ್ಣ
- ಹೈಕಮಾಂಡ್‌ಗೆ ದೂರು ನೀಡಲು ಡಿ.7ಕ್ಕೆ ಯತ್ನಾಳ, ಜಾರಕಿಹೊಳಿ ಗುಂಪು ದೆಹಲಿಗೆ
- ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಮುಂದಿನ ರಾಜಕೀಯ ನಡೆಗೆ ತೀರ್ಮಾನ

### ಕರೆ ಸ್ವೀಕರಿಸದ ಸೋಮಣ್ಣ: ಬಿಎಸ್‌ವೈ

**ಬೆಂಗಳೂರು:** 'ವಿ. ಸೋಮಣ್ಣ ಅವರ ಜತೆ ಮಾತನಾಡುವ ಪ್ರಯತ್ನ ಮಾಡಿದ್ದೇನೆ. ಅವರು ನನ್ನ ದೂರವಾಣಿ ಕರೆಯನ್ನು ಸ್ವೀಕರಿಸಲಿಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಪಕ್ಷದ ನಾಯಕರ ವಿರುದ್ಧ ಸೋಮಣ್ಣ ಅಸಮಾಧಾನ ಹೊರಹಾಕಿರುವ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಸೋಮಣ್ಣ ಮಾತನಾಡಿದ್ದನ್ನು ನೋಡಿದ್ದೇನೆ. ಅವರನ್ನು ಪಕ್ಷದಲ್ಲೇ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ' ಎಂದರು.

'ವಿಜಯೇಂದ್ರ ಮನೆಗೆ ಬಂದು ಹೂಗುಚ್ಛ ಕೊಡುವ ನಾಟಕ ಆಡುವುದು ಬೇಡ' ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ ಬಗ್ಗೆ ಕೇಳಿದಾಗ, 'ಯತ್ನಾಳ ಮನೆಗೆ ಹೋಗುತ್ತೀವಿ ಅಂದವರು ಯಾರು' ಎಂದು ಮರುಪ್ರಶ್ನೆ ಹಾಕಿದರು. 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕರಣದಲ್ಲಿ ನಾನು ಹೇಳಿರುವುದೆಲ್ಲವೂ ಸತ್ಯ. ಎಲ್ಲ ಗೊತ್ತಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸತ್ಯವನ್ನು ತಿರುಚುವ ಕೆಲಸ ಮಾಡುತ್ತಿದ್ದಾರೆ' ಎಂದು ದೂರಿದರು.

### ಕುಕ್ಕೆ ಸುಬ್ರಹ್ಮಣ್ಯ: ಸಾಮೂಹಿಕ ವಿವಾಹಕ್ಕೆ ಅರ್ಜಿ ಸಲ್ಲಿಸಲು ಡಿ.31 ಕೊನೆಯ ದಿನ

**ಸುಬ್ರಹ್ಮಣ್ಯ:** ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮುಂದಿನ ವರ್ಷ ಜನವರಿ 31ರಂದು ಸರಳ ಸಾಮೂಹಿಕ ವಿವಾಹ ನಡೆಯಲಿದ್ದು, ಅರ್ಜಿ ಸಲ್ಲಿಸಲು ಈ ವರ್ಷದ ಡಿ. 31 ಕೊನೆಯ ದಿನ. ವಿವಾಹವಾಗಲು ಅಪೇಕ್ಷಿಸುವವರು ದೇವಳದ ಕಚೇರಿಯಿಂದ ಅರ್ಜಿ ನಮೂನೆ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗೆ 08257-281224/236200/281700/281423/281265 ಸಂಖ್ಯೆಗಳಿಗೆ ಕರೆ ಮಾಡಬಹುದು. ಜ.5ರಂದು ನೋಂದಾಯಿತ ವಧು- ವರರ ವಿವರ ಪ್ರಕಟಿಸಲಾಗುವುದು. 10ರಂದು ಅಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು 15ರಂದು ವಧುವರರ ಅಂತಿಮ ಪಟ್ಟಿ ಪ್ರಕಟಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಕಲ್ಲಿದ್ದಲು ಅಕ್ರಮ ಸಂಗ್ರಹ: ದೂರು ದಾಖಲು

ಪ್ರಜಾವಾಣಿ ವಾರ್ತೆ

**ಶಕ್ತಿನಗರ (ರಾಯಚೂರು ಜಿಲ್ಲೆ):** ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ವ್ಯಾಗನ್ ಸ್ವಚ್ಛತೆ ಹೆಸರಲ್ಲಿ ಕಲ್ಲಿದ್ದಲು ಅಕ್ರಮ ಸಂಗ್ರಹ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ರಾಯಚೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಧ್ರಪ್ರದೇಶದ ಕರ್ನೂಲ್‌ನ ಶ್ರೀಗುರು ರಾಘವೇಂದ್ರ ಎಂಟರ್‌ಪ್ರೈಸಸ್ ಗುತ್ತಿಗೆದಾರ ಮತ್ತು ಯರಮರಸ್ ರೈಲು ನಿಲ್ದಾಣದ ಸ್ಟೇಷನ್ ಮಾಸ್ಟರ್ ವಿರುದ್ಧ ದೂರು ದಾಖಲಾಗಿದೆ. 120 ಮೆಟ್ರಿಕ್ ಟನ್ ಕಚ್ಚಾ ಕಲ್ಲಿದ್ದಲು ಕಳ್ಳತನ ಮಾಡಿ ರೈಲು ನಿಲ್ದಾಣ ಹೊರವಲಯದಲ್ಲಿ ಅಕ್ರಮವಾಗಿ ಸಂಗ್ರಹ ಮಾಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವೈಟಿಪಿಎಸ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ಮಹೇಂದ್ರ ಜಿ.ಸಿ ದೂರು ದಾಖಲಿಸಿದ್ದಾರೆ.

ರಾಯಚೂರು ತಾಲ್ಲೂಕಿನ ಯರಮರಸ್ ರೈಲು ನಿಲ್ದಾಣ ವ್ಯಾಪ್ತಿಯಲ್ಲಿ ಅಕ್ರಮವಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ಕಲ್ಲಿದ್ದಲು ಸಂಗ್ರಹಿಸಲಾಗುತ್ತಿದೆ ಎನ್ನುವ ಮಾಹಿತಿ ತಿಳಿದು ಬೆಂಗಳೂರಿನ ಅಧಿಕಾರಿಗಳ ತಂಡ ಸ್ಥಳಕ್ಕೆ ಬಂದು ತನಿಖೆ ನಡೆಸಿತ್ತು.

### ₹ 20 ಕೋಟಿ ಕೊಟ್ಟರೆ ಆಸ್ತಿ ಬಿಡುವೆ; ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

**ನಾಗಮಂಗಲ (ಮಂಡ್ಯ ಜಿಲ್ಲೆ):** 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಕಳಿಯಲ್ಲಿ ನಾನು ಖರೀದಿಸಿರುವ ಭೂಮಿ ₹100 ಕೋಟಿ ಬೆಲೆ ಬಾಳುತ್ತದೆ ಎಂದು ಕತೆ ಕಟ್ಟಲಾಗುತ್ತಿದೆ. ಯಾರಾದರೂ ₹ 20 ಕೋಟಿ ಕೊಟ್ಟರೆ ಆಸ್ತಿ ಬಿಟ್ಟುಬಿಡುತ್ತೇನೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶನಿವಾರ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ನನ್ನ ಬಗ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಮಾತನಾಡಲಿಲ್ಲ ಎಂದರೆ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಊಟ ಸೇರುವುದಿಲ್ಲ, ನಿದ್ದೆ ಬರುವುದಿಲ್ಲ. ರಾಜರಿಂದ ದಾನ ಬಂದಿದ್ದ ಜಮೀನನ್ನು ನಾನು ಖಾಸಗಿ ಮಾಲೀಕರಿಂದ ಖರೀದಿಸಿದ್ದೇನೆ. ಕೆರೆ ಜಾಗ ಒತ್ತುವರಿ ಮಾಡಿದ್ದೇನೆ ಎಂಬುದು ಸತ್ಯಕ್ಕೆ ದೂರವಾದ ಮಾತು' ಎಂದರು.

'ಬರ ಪರಿಹಾರ ವಿತರಣೆಗಾಗಿ ಶೀಘ್ರ ₹6,663 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಕೋರಿದ್ದೇವೆ. ಅಂಕಿ ಅಂಶಗಳ ಸಹಿತ ಅಧ್ಯಯನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡದಿದ್ದರೂ ರೈತರ ಹಿತ ಕಾಯಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದರು.

### ಬೈಯಪ್ಪನಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ • ಕೃತ್ಯಕ್ಕೆ ಸಹಕರಿಸಿದ್ದ ಲ್ಯಾಬ್ ಟೆಕ್ನಿಷಿಯನ್

# 900 ಹೆಣ್ಣು ಭ್ರೂಣ ಹತ್ಯೆ: ವೈದ್ಯ ಬಂಧನ

ಪ್ರಜಾವಾಣಿ ವಾರ್ತೆ

ಡಾ. ಚಂದನ್ ಬಲ್ಲಾಳ್

**ಬೆಂಗಳೂರು:** ಭ್ರೂಣ ಲಿಂಗ ಪತ್ತೆ ಹಾಗೂ ಗರ್ಭಪಾತ ಪ್ರಕರಣದ ತನಿಖೆ ಮುಂದುವರಿಸಿರುವ ಬೈಯಪ್ಪನಹಳ್ಳಿ ಠಾಣೆ ಪೊಲೀಸರು, ಮೈಸೂರಿನ ವೈದ್ಯ ಡಾ. ಚಂದನ್ ಬಲ್ಲಾಳ್ ಹಾಗೂ ಲ್ಯಾಬ್ ಟೆಕ್ನಿಷಿಯನ್ ನಿಸಾರ್ ಅವರನ್ನು ಬಂಧಿಸಿದ್ದಾರೆ.

'ಮೈಸೂರಿನ ಮಾತಾ ಆಸ್ಪತ್ರೆ ಹಾಗೂ ಅಲ್ಲಿನ ರಾಜ್‌ಕುಮಾರ್ ರಸ್ತೆಯಲ್ಲಿರುವ ಆಯುರ್ವೇದಿಕ್ ಪೈಲ್ ಡೇ ಕೇರ್ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಡಾ. ಚಂದನ್, ಇದುವರೆಗೂ 900 ಗರ್ಭಪಾತ ಮಾಡಿಸಿ, ಹೆಣ್ಣು ಭ್ರೂಣ ಹತ್ಯೆ ಮಾಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅ. 15ರಂದು ಭ್ರೂಣ ಲಿಂಗ ಪತ್ತೆಗಾಗಿ ಬೆಂಗಳೂರಿನಿಂದ ಮಂಡ್ಯಕ್ಕೆ ಗರ್ಭಿಣಿಯೊಬ್ಬರನ್ನು ಕಾರಿನಲ್ಲಿ ಕರೆದೊಯ್ಯಲಾಗುತ್ತಿತ್ತು. ಕಾರು ನೋಡಿ ಅನುಮಾನಗೊಂಡಿದ್ದ ಪೊಲೀಸರು, ಬೆನ್ನಟ್ಟಿ ಕಾರು ನಿಲ್ಲಿಸಿದ್ದರು. ಕಾರಿನಲ್ಲಿದ್ದವರನ್ನು ವಿಚಾರಣೆ ನಡೆಸಿದಾಗ, ಭ್ರೂಣ ಲಿಂಗ ಪತ್ತೆ ಜಾಲದ ಮಾಹಿತಿ ಸಿಕ್ಕಿತ್ತು.'

'ವೈದ್ಯನ ಸಂಬಂಧಿ ಆಗಿದ್ದ ವೀರೇಶ್, ನವೀನ್‌ಕುಮಾರ್, ಶಿವಲಿಂಗೇಗೌಡ ಹಾಗೂ ನಯನ್ ಕುಮಾರ್‌ನನ್ನು ಆರಂಭದಲ್ಲಿ ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಆಧರಿಸಿ ಚೆನ್ನೈನ ವೈದ್ಯ ಡಾ. ತುಳಸಿರಾಮ್ (41), ಮೈಸೂರು ಉದಯಗಿರಿಯಲ್ಲಿರುವ ಮಾತಾ ಆಸ್ಪತ್ರೆ ವ್ಯವಸ್ಥಾಪಕರಾದ ಸಿ.ಎಂ. ಮೀನಾ (38) ಹಾಗೂ ಆಸ್ಪತ್ರೆಯ ಸ್ವಾಗತಗಾರ್ತಿ ರಿಜ್ಮಾ ಖಾನಂ (38) ಅವರನ್ನು ಸೆರೆ ಹಿಡಿಯಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಮ್ಮ ಆಸ್ಪತ್ರೆಯ ಕಿರಿಯ ವೈದ್ಯ ಹಾಗೂ ಇತರರ ಬಂಧನ ಸುದ್ದಿ ತಿಳಿಯುತ್ತಿದ್ದಂತೆ ಡಾ. ಚಂದನ್ ಬಲ್ಲಾಳ್ ತಲೆಮರೆಸಿಕೊಂಡಿದ್ದ. ಈತನ ಬಂಧನಕ್ಕಾಗಿ ವಿಶೇಷ ತಂಡ ರಚಿಸಲಾಗಿತ್ತು. ಊರೂರು ಸುತ್ತಾಡುತ್ತಿದ್ದ ಚಂದನ್‌ನನ್ನು ಇದೀಗ ಬಂಧಿಸಲಾಗಿದೆ' ಎಂದು ಹೇಳಿವೆ.

**ತಿಂಗಳಿಗೆ 25 ಗರ್ಭಪಾತ:** 'ವೈದ್ಯ ಚಂದನ್, ಪ್ರತಿ ತಿಂಗಳು 25 ಗರ್ಭಪಾತ ಮಾಡುತ್ತಿದ್ದ. ಮೂರು ವರ್ಷಗಳಿಂದ ಈತ ಕೃತ್ಯ ಎಸಗುತ್ತಿದ್ದ. ಆರೋಪಿ ವಿರೇಶ್ ನೀಡಿರುವ ಪಟ್ಟಿ ಪ್ರಕಾರ ಚಂದನ್ ಇದುವರೆಗೂ 900 ಗರ್ಭಪಾತ ಮಾಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ವೀರೇಶ್ ತಂಡವಲ್ಲದೇ ಬೇರೆ ತಂಡಗಳೂ ವೈದ್ಯ ಚಂದನ್ ಬಳಿ ಗರ್ಭಪಾತ ಮಾಡಿಸಿರುವ ಮಾಹಿತಿ ಇದೆ. ಆದರೆ, ಸದ್ಯಕ್ಕೆ ಪುರಾವೆಗಳು ಸಿಕ್ಕಿಲ್ಲ' ಎಂದು ಹೇಳಿವೆ.

### ರಾಜ್ಯವ್ಯಾಪಿ ಹರಡಿರುವ ಜಾಲ

'ಬೆಂಗಳೂರು, ಮಂಡ್ಯ, ಮೈಸೂರು ಹಾಗೂ ರಾಮನಗರದಲ್ಲಿ ಭ್ರೂಣ ಲಿಂಗ ಪತ್ತೆ ಜಾಲ ಹಬ್ಬಿದೆ. ಆರೋಪಿ ವೀರೇಶ್, ಪರಿಚಯಸ್ಥರ ಮೂಲಕ ಗರ್ಭಿಣಿ ಹಾಗೂ ಅವರ ಕುಟುಂಬದವರನ್ನು ಸಂಪರ್ಕಿಸುತ್ತಿದ್ದ. ಹೆಣ್ಣು ಭ್ರೂಣ ಮಾಡುವುದಾಗಿ ಹೇಳಿ ಮಂಡ್ಯ ಜಿಲ್ಲೆಯ ಆಲೆಮನೆಯೊಂದರಲ್ಲಿ ನಿರ್ಮಿಸಿದ್ದ ಸ್ಕ್ಯಾನಿಂಗ್ ಕೇಂದ್ರಕ್ಕೆ ಕರೆಸುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹೆಣ್ಣು ಭ್ರೂಣ ಎಂಬುದು ಗೊತ್ತಾಗುತ್ತಿದ್ದಂತೆ ಹಲವರು, ಗರ್ಭಪಾತ ಮಾಡುವಂತೆ ಕೋರುತ್ತಿದ್ದರು. ಅಂಥ ಗರ್ಭಿಣಿಯರನ್ನು ಡಾ. ಚಂದನ್ ಬಲ್ಲಾಳ್ ಬಳಿ ಕಳುಹಿಸಲಾಗುತ್ತಿತ್ತು. ₹ 20 ಸಾವಿರದಿಂದ ₹ 25 ಸಾವಿರ ಪಡೆಯುತ್ತಿದ್ದ ಚಂದನ್, ಗರ್ಭಪಾತ ಮಾಡುತ್ತಿದ್ದ' ಎಂದು ಹೇಳಿವೆ.


ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

No:RGU/PROC/Cell Cultural Lab/122/2021-22 ದಿನಾಂಕ:23.11.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಇವರು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಸೆಲ್ ಕಲ್ಚರ್ ಲ್ಯಾಬೋರೇಟರಿಗೆ ಉಪಕರಣಗಳು ಮತ್ತು ಸಲಕರಣೆಗಳನ್ನು ಪೂರೈಕೆ ಮಾಡುವುದಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

Tender No: RGUHSK/2023-24/IND0003/Call-02

| | |
|---|---|
| ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ | 23/11/2023 |
| ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ | 01/12/2023 ಸಂಜೆ 5:30 ಗಂಟೆಗೆ |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 04/12/2023 ಬೆಳಿಗ್ಗೆ 11:00 ಗಂಟೆಗೆ |
| ಆರ್ಥಿಕ ಬಿಡ್ ತೆರೆಯುವ ದಿನಾಂಕ | 06/12/2023 ಬೆಳಿಗ್ಗೆ 11:30 ಗಂಟೆಗೆ |
| ಟೆಂಡರ್ ತೆರೆಯುವ ಸ್ಥಳ | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು |

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/2281/2023–24



ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ–ಹಾವೇರಿ. ದೂರವಾಣಿ : 08375-249049
Fax : 08375-249009 Email : dhohaveri@gmail.com
ಕ್ರಸಂ/ಪೂರೈಕೆ/37/2023–24 ದಿನಾಂಕ : 23–11–2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿಗಾಗಿ ಜಿಲ್ಲೆಯ ಅಧೀನ ತಾಲೂಕಾಮಟ್ಟದ ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಬೇಕಾಗುವ ಕ್ಷ–ಕಿರಣ ಫಿಲಂ ಹಾಗೂ ರಾಸಾಯನಿಕಗಳನ್ನು ಖರೀದಿಸುವ ಕುರಿತು ವಿವಿಧ ಟೆಂಡರದಾರರಿಂದ ಅಲ್ಪಾವಧಿ ಇ–ಟೆಂಡರ ಕರೆಯಲಾಗಿದೆ. ಇಚ್ಛೆಯುಳ್ಳ ಟೆಂಡರದಾರರು ಇ–ಟೆಂಡರ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
(1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **24/11/2023** (2) ಟೆಂಡರ್‌ನ ಮೊತ್ತ ರೂ. **10,00,000/–** (3) ಇಎಂಡಿ ಮೊತ್ತ ರೂ. **50,000/–** (4) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **01/12/2023** ಸಾಯಂಕಾಲ 4.00 ಗಂಟೆಯವರೆಗೆ (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **02/12/2023** ಸಾಯಂಕಾಲ 4.30 ಗಂಟೆ (6) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **ತಿಳಿಸಲಾಗುವುದು** (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ, **08375–249066**
**ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ**
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/333/2023–24



ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194–230102, ಫ್ಯಾಕ್ಸ್:08194–230102, ಇ–ಮೇಲ್ :eeubp.d5cta@gmail.com
ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಟೆಂಡರ್/2023–24/1183
ದಿನಾಂಕ:–23.11.2023

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ 4701 ಯೋಜನೆಯಡಿಯಲ್ಲಿ ಬರುವ 2– 4701 ಕಾಮಗಾರಿಗಳ ಟೆಂಡರ್ ಕರೆಯಲಾಗಿದ್ದು. ಕಾಮಗಾರಿಗಳಿಗೆ ಏಕ–ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:04.12.2023 ಸಂಜೆ 5.30 ಗಂಟೆಯವರೆಗೆ 3) ಟೆಂಡರ್‌ನ್ನು ದಿನಾಂಕ:05.12.2023 ರಂದು ಸಂಜೆ 5.30 ಗಂಟೆವರೆಗೆ ಸಲ್ಲಿಸಬಹುದಾಗಿದೆ 4) ಆರ್ಥಿಕ ಬಿಡ್ಡುಗಳನ್ನು ದಿನಾಂಕ:06.12.2023 ರಂದು ಸಂಜೆ 5.30 ಗಂಟೆ ನಂತರ ತೆರೆಯಲಾಗುವುದು. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು https://kppp.karnataka.gov.in/ ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
ಕಾಮಗಾರಿಗಳ ವಿವರ:–1. Providing Security to UBP Office Building and Officer's/ Staff Quarters of UBP Colony at Chitradurga for the year 2023-24 (VJNL/2023-24/SE0011) AMOUNT PUT TO TENDER:- RS.4.41 LAKHS
2. Supply of various category of Man power to the UBP office of Chief Engineer, Superintending Engineer, Executive Engineer, Division No.05, Chitradurga and its Sub division Offices for the year 2023-24 (VJNL/2023-24/SE0015) AMOUNT PUT TO TENDER:- RS.28.11 LAKHS
ಸಹಿ/– ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭಮೇಯೋ, ವಿಭಾಗ ನಂ.5, ಚಿತ್ರದುರ್ಗ.
DIPR/CTA/KSMCA/355/2023-24

# ಆಸ್ಪತ್ರೆಯಿದ್ದರೂ ತಜ್ಞರಿಲ್ಲ..

**ರಾಜ್ಯದ ವೈದ್ಯಕೀಯ ವ್ಯವಸ್ಥೆ ಚಿತ್ರಣ**

- **60** ರಾಜ್ಯದಲ್ಲಿರುವ ಒಟ್ಟು ವೈದ್ಯಕೀಯ ಕಾಲೇಜುಗಳು
- **2,844** ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳು
- **37,419** ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು
- **16,993** ನೋಂದಾಯಿತ ಖಾಸಗಿ ಆಸ್ಪತ್ರೆಗಳು
- **624** ಆಯುಷ್ ಆಸ್ಪತ್ರೆಗಳು
- **1,92,508** ಆಸ್ಪತ್ರೆಗಳಲ್ಲಿ ಇರುವ ಹಾಸಿಗೆಗಳು

ಒಂದನೇ ಪುಟದಿಂದ...

ಇದರಿಂದಾಗಿ ಮಹಾನಗರ ಕೇಂದ್ರಿತ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಹಾಗೂ ಖಾಸಗಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳತ್ತ ಮುಖ ಮಾಡಬೇಕಾಗಿದೆ. ಸರ್ಕಾರಿ ಸ್ವಾಮ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಒಳರೋಗಿ ದಾಖಲಾತಿಗೆ ಕಾಯಬೇಕಾಗಿರುವುದರಿಂದ ತುರ್ತು ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಿಗೇ ದಾಖಲಾಗಿ, ಲಕ್ಷಾಂತರ ರೂಪಾಯಿ ಚಿಕಿತ್ಸಾ ವೆಚ್ಚ ಭರಿಸಬೇಕಾದದ್ದು ಅನಿವಾರ್ಯವಾಗಿದೆ.

ಬೆಂಗಳೂರಿನ ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ಕ್ರೀಡಾ ವೈದ್ಯಕೀಯ ವಿಭಾಗದ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆಯನ್ನು ಹಿಂದಿನ ಬಿಜೆಪಿ ಸರ್ಕಾರದ ಸಚಿವರ ಅಸಹಕಾರದಿಂದ ಹಲವು ಕಾರಣ ನೀಡಿ ಎರಡು ಸಲ ಮುಂದೂಡಲಾಗಿತ್ತು. ಕೊನೆಗೊಂದು 'ಶುಭದಿನ' ಶಂಕುಸ್ಥಾಪನೆ ನೆರವೇರಿತು. ಇಂತಹ ಹಲವು ಉದಾಹರಣೆಗಳು ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜು ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ನಡೆದಿವೆ ಎಂದು ಆರೋಗ್ಯ ಇಲಾಖೆಯ ಮೂಲಗಳು ಹೇಳುತ್ತವೆ.

ಉತ್ತರ ಕನ್ನಡ ಹಾಗೂ ಕೊಡಗು ಜಿಲ್ಲೆಯ ಜನರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ನಿರಂತರ ಹೋರಾಟ ನಡೆಸಿದರೂ ಬೇಡಿಕೆ ಈಡೇರಲಿಲ್ಲ. ಈ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿದ್ದರೂ ತಜ್ಞ ವೈದ್ಯರು, ಮೂಲಸೌಕರ್ಯ ಕೊರತೆ ಸೇರಿ ವಿವಿಧ ಕಾರಣಗಳಿಂದ ತೃತೀಯ ಹಂತದ ವೈದ್ಯಕೀಯ ಸೇವೆಗಳು ಲಭ್ಯವಾಗುತ್ತಿಲ್ಲ. ಕರಾವಳಿ ಮತ್ತು ಮಲೆನಾಡಿನಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರಿಂದ ಕರಾವಳಿ ಜನ ಮಣಿಪಾಲ ಇಲ್ಲವೇ ಮಂಗಳೂರಿಗೆ, ಕೊಡಗು ಮತ್ತು ಚಿಕ್ಕಮಗಳೂರಿನ ಜನ ಇತ್ತ ಮೈಸೂರು ಇಲ್ಲವೇ ಬೆಂಗಳೂರಿಗೆ ಬರಬೇಕು. ಇದರಿಂದಾಗಿ ಅದೆಷ್ಟೋ ಮಂದಿ ಆಸ್ಪತ್ರೆ ತಲುಪುವಷ್ಟರಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

ದಾವಣಗೆರೆಯಲ್ಲಿ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಿಪಿಪಿ) ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸಿ, ಚಿಗಟೇರಿ ಜಿಲ್ಲಾ ಆಸ್ಪತ್ರೆಯನ್ನು ಖಾಸಗಿ ಸಂಸ್ಥೆಗೆ ಹಸ್ತಾಂತರಿಸುವ ಪ್ರಸ್ತಾವ ಕಳೆದ ವರ್ಷ ಸರ್ಕಾರದ ಮುಂದಿತ್ತು. ಆದರೆ, ಇದು ಸಾಕಾರವಾಗಿಲ್ಲ. ಚಿಗಟೇರಿ ಆಸ್ಪತ್ರೆಗೆ ನಿತ್ಯ 1,000ದಿಂದ 1,200ಕ್ಕೂ ಹೆಚ್ಚು ರೋಗಿಗಳು ಭೇಟಿ ನೀಡುತ್ತಿದ್ದಾರೆ. ಜಿಲ್ಲೆ ಮಾತ್ರವಲ್ಲದೇ, ಚಿತ್ರದುರ್ಗ, ಶಿವಮೊಗ್ಗ, ಹಾವೇರಿ, ಚಿಕ್ಕಮಗಳೂರು, ಬಳ್ಳಾರಿ ಜಿಲ್ಲೆಯಿಂದಲೂ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುತ್ತಿದ್ದಾರೆ. ಆದರೆ, ಅಗತ್ಯಕ್ಕೆ ತಕ್ಕಷ್ಟು ಚಿಕಿತ್ಸಾ ಸೌಲಭ್ಯಗಳು ಇಲ್ಲ. ದಿನಕ್ಕೆ ಸಾವಿರ ರೋಗಿಗಳು ಬರುತ್ತಿದ್ದರೂ ಎಕ್ಸ್- ರೇ, ಸ್ಕ್ಯಾನಿಂಗ್ ಯಂತ್ರಗಳು ಕೇವಲ ಒಂದೊಂದು ಮಾತ್ರ ಇವೆ. 1976ರಲ್ಲಿ ನಿರ್ಮಾಣಗೊಂಡಿರುವ ಆಸ್ಪತ್ರೆ ಕಟ್ಟಡವೂ ಮುಪ್ಪಿನಾವಸ್ಥೆ ತಲುಪಿದೆ.

ಚಿತ್ರದುರ್ಗದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭಗೊಂಡಿದೆ. ಜಿಲ್ಲಾ ಆಸ್ಪತ್ರೆಯನ್ನು ಚಿತ್ರದುರ್ಗ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಗೆ ಹಸ್ತಾಂತರಿಸುವ ಪ್ರಕ್ರಿಯೆ ಶುರುವಾಗಿದೆ. ಜಿಲ್ಲಾ ಆಸ್ಪತ್ರೆಯು 600 ಹಾಸಿಗೆ ಸಾಮರ್ಥ್ಯ ಹೊಂದಿದೆ. ವೈದ್ಯಕೀಯ ಕಾಲೇಜು ಸುಪರ್ದಿಗೆ ಪಡೆದ ಬಳಿಕ 180 ಹಾಸಿಗೆ ಹೆಚ್ಚುವರಿಯಾಗಿ ಸೇರ್ಪಡೆಯಾಗಲಿವೆ. ಆದರೆ ಇಲ್ಲಿ 300 ಹಾಸಿಗೆಗೆ ಸಾಕಾಗುವಷ್ಟು ವೈದ್ಯಕೀಯ ಸಿಬ್ಬಂದಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಂಗಳೂರಿನ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ ಮತ್ತು ಸ್ತ್ರೀರೋಗ ಚಿಕಿತ್ಸೆಗಿರುವ ಲೇಡಿ ಗೋಷನ್ ಆಸ್ಪತ್ರೆಗೆ ದಕ್ಷಿಣ ಕನ್ನಡ ಹಾಗೂ ಉಡುಪಿ ಮಾತ್ರವಲ್ಲ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಸೇರಿದಂತೆ ಸುತ್ತಮುತ್ತಲ 10ಕ್ಕೂ ಹೆಚ್ಚು ಜಿಲ್ಲೆಗಳಿಂದ ಬರುವವರೇ ಹೆಚ್ಚು. ವರ್ಷಕ್ಕೆ ಸುಮಾರು 30 ಸಾವಿರ ಒಳರೋಗಿಗಳು ಮತ್ತು 3 ಲಕ್ಷದಷ್ಟು ಹೊರರೋಗಿಗಳಿಗೆ ಚಿಕಿತ್ಸೆ ನೀಡುವ ವೆನ್‌ಲಾಕ್ ಆಸ್ಪತ್ರೆಯಲ್ಲಿ ಹೆಚ್ಚಿನ ಕ್ಲಿನಿಕಲ್ ಸೇವೆ ಕೆಎಂಸಿ ವೈದ್ಯರಿಂದ ಸಿಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇರಲಿ, ಕನಿಷ್ಠ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯವೂ ಇಲ್ಲ. ಚಾಮರಾಜನಗರದಲ್ಲೂ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯಿಲ್ಲ. ಅಲ್ಲಿನ ಜನರೂ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗಾಗಿ ಒಂದೂವರೆ ಗಂಟೆ ಮೈಸೂರಿಗೆ ಪ್ರಯಾಣಿಸಬೇಕಾಗಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಹೆಸರುವಾಸಿಯಾದ ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಕಿಮ್ಸ್) ಅಧೀನದಲ್ಲಿ 2019ರಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ. ಬೆಳಗಾವಿ ಜಿಲ್ಲಾಸ್ಪತ್ರೆ ಆವರಣದಲ್ಲಿ 250 ಹಾಸಿಗೆಗಳ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಿದ್ಧಗೊಂಡು ವರ್ಷ ಕಳೆದರೂ ಜನರಿಗೆ ಪ್ರಯೋಜನವಾಗಿಲ್ಲ. ವೈದ್ಯಕೀಯ ಸಿಬ್ಬಂದಿ ಹಾಗೂ ಪೀಠೋಪಕರಣ ಇಲ್ಲದ ಕಾರಣ ಜನರ ನಿರೀಕ್ಷೆ ಹುಸಿಯಾಗಿದೆ. ಬಳ್ಳಾರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡದ ನಿರ್ಮಾಣ ಕಾರ್ಯ ಬಹುತೇಕ ಅಂತಿಮ ಹಂತದಲ್ಲಿದೆ. ಸಣ್ಣಪುಟ್ಟ ಕಾಮಗಾರಿಯಷ್ಟೇ ಬಾಕಿ ಉಳಿದಿದೆ. ಯೋಜನೆಗೆ ₹ 90 ಕೋಟಿ ಖರ್ಚಾಗಿದ್ದು, ಇನ್ನೂ ₹ 42 ಕೋಟಿ ಹಣ ಬಿಡುಗಡೆ ಮಾಡಬೇಕಿದೆ.

ರಾಜ್ಯದ ವೈದ್ಯಕೀಯ ಸ್ಥಿತಿಗತಿ ಬಗ್ಗೆ ಸಮಗ್ರ ವರದಿ ತಯಾರಿಸಲು ರಾಜ್ಯ ಸರ್ಕಾರ 2021ರಲ್ಲಿ 'ಕರ್ನಾಟಕ ಹೆಲ್ತ್ ವಿಷನ್ ಗ್ರೂಪ್' ರಚಿಸಿತ್ತು. ನಿಮ್ಹಾನ್ಸ್‌ನ ಅಂದಿನ ನಿರ್ದೇಶಕ ಡಾ.ಜಿ. ಗುರುರಾಜ್ ಇದರ ಅಧ್ಯಕ್ಷರಾಗಿದ್ದರು. ಈ ವರದಿಯಲ್ಲಿಯೂ ಸರ್ಕಾರಿ ವೈದ್ಯಕೀಯ ವ್ಯವಸ್ಥೆಯನ್ನು ಬಲಪಡಿಸುವ ಬಗ್ಗೆ ಹೇಳಲಾಗಿತ್ತು. 'ಆರೋಗ್ಯ ಮೂಲಸೌಕರ್ಯವು ಜನಸಂಖ್ಯೆ ಕೇಂದ್ರೀಕೃತವಾಗಿರಬೇಕು. ಜಿಲ್ಲಾ ಮಟ್ಟದಲ್ಲಿ ತುರ್ತು ಚಿಕಿತ್ಸೆ, ಟ್ರಾಮಾ (ಅಪಘಾತ), ತೀವ್ರ ನಿಗಾ ಆರೈಕೆ ಹಾಗೂ ವೈದ್ಯಕೀಯ ತಜ್ಞರ ಸೇವೆ ಅಸಮರ್ಪಕವಾಗಿದ್ದು, ಇವುಗಳನ್ನು ಬಲಪಡಿಸಲು ಆದ್ಯತೆ ನೀಡಬೇಕು' ಎಂದು ವರದಿಯಲ್ಲಿ ತಜ್ಞರು ತಿಳಿಸಿದ್ದರು.

**ಗುತ್ತಿಗೆ ನವೀಕರಿಸದ ಸರ್ಕಾರ:** ಕೋವಿಡ್ ಕಾಣಿಸಿಕೊಂಡ ಬಳಿಕ ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಗುತ್ತಿಗೆ ಆಧಾರ ಒಂದು ವರ್ಷಕ್ಕೆ ಅನ್ವಯಿಸಿದಂತೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿಕೊಂಡಿತ್ತು. ಕೋವಿಡ್ ನಿಯಂತ್ರಣದ ಬಳಿಕ ಗುತ್ತಿಗೆ ನವೀಕರಿಸಿಲ್ಲ. ಇದರಿಂದಾಗಿ ವೈದ್ಯರ ಕೊರತೆ ಸಮಸ್ಯೆ ಮುಂದುವರೆದಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 6,838 ಶುಶ್ರೂಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 1,840 ಪ್ರಯೋಗಾಲಯ ತಜ್ಞರು, 477 ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, 237 ಶಸ್ತ್ರಚಿಕಿತ್ಸಕರು, 375 ಮಕ್ಕಳ ತಜ್ಞರು, 289 ದಂತ ತಜ್ಞರು, 462 ವಿಕಿರಣ ವಿಜ್ಞಾನ ತಜ್ಞರು, 1,127 ತಜ್ಞ ವೈದ್ಯರು ಇಲಾಖೆ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ ಹಲವರು ಖಾಸಗಿಯಾಗಿಯೂ ಸೇವೆ ನೀಡುತ್ತಿದ್ದಾರೆ. ಇವರು ಸರ್ಕಾರಿ ವ್ಯವಸ್ಥೆಯಡಿ ಕಾಟಾಚಾರಕ್ಕೆ ವೈದ್ಯಕೀಯ ಸೇವೆ ನೀಡುತ್ತಿದ್ದಾರೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿದೆ.

ದೇಶದಲ್ಲಿಯೇ ಅತೀ ಹೆಚ್ಚು ವೈದ್ಯಕೀಯ ಕಾಲೇಜುಗಳಿದ್ದರೂ ಇಲ್ಲಿನ ಸರ್ಕಾರಿ ಆಸ್ಪತ್ರೆಗಳು ವೈದ್ಯರ ಕೊರತೆ ಎದುರಿಸುತ್ತಿವೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಡಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಪ್ರತಿವರ್ಷ 49 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪದವೀಧರರಾಗಿ ಹೊರಹೊಮ್ಮುತ್ತಿದ್ದಾರೆ. ಸರಾಸರಿ ಸಾವಿರ ಎಂಬಿಬಿಎಸ್ ಹಾಗೂ 2 ಸಾವಿರ ನರ್ಸಿಂಗ್ ಪದವೀಧರರು ವಾರ್ಷಿಕ ಲಭ್ಯರಾಗುತ್ತಿದ್ದಾರೆ. ಇಷ್ಟಾಗಿಯೂ ವೈದ್ಯರ ಕೊರತೆ ನಿವಾರಣೆಯಾಗಿಲ್ಲ.

ಮಂಜೂರಾದ ತಜ್ಞ ವೈದ್ಯರ ಹುದ್ದೆಗಳಲ್ಲಿ ರಾಯಚೂರು, ಕಲಬುರಗಿ, ಯಾದಗಿರಿ, ಗದಗ, ಬಾಗಲಕೋಟೆ, ಕೊಪ್ಪಳ, ಮಂಡ್ಯ, ಹಾವೇರಿ, ಹಾಸನದಲ್ಲಿ ಹೆಚ್ಚಿನ ಹುದ್ದೆಗಳು ಖಾಲಿಯಿವೆ. ದಂತವೈದ್ಯರು, ಮಕ್ಕಳ ತಜ್ಞರ ಹುದ್ದೆಗಳು ಸಹ ಬಹುತೇಕ ಜಿಲ್ಲೆಯಲ್ಲಿ ಖಾಲಿ ಉಳಿದಿವೆ.

ವಿಮೆಯಿದ್ದರೂ ಚಿಕಿತ್ಸೆಯಿಲ್ಲ: ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ, ಮಧುಮೇಹ ಮತ್ತು ಪಾರ್ಶ್ವವಾಯು ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಅಂಗಾಂಗ ಕಸಿ ಕಾರ್ಯಕ್ರಮ ಸೇರಿ ಕೇಂದ್ರ ಸರ್ಕಾರ ಪ್ರಾಯೋಜಿತ 34 ಆರೋಗ್ಯ ಕಾರ್ಯಕ್ರಮಗಳು ರಾಜ್ಯದಲ್ಲಿ ಜಾರಿಯಲ್ಲಿವೆ. ಜ್ಯೋತಿ ಸಂಜೀವಿನಿ, ಶುಚಿ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಆರೋಗ್ಯ ಕವಚ ಸೇರಿ ರಾಜ್ಯ ಸರ್ಕಾರ ಪ್ರಾಯೋಜಿತ 21 ಕಾರ್ಯಕ್ರಮಗಳಿವೆ. ಆದರೆ, ತುರ್ತು ಸಂದರ್ಭದಲ್ಲಿ ರೋಗಿಗಳು ಸರ್ಕಾರಿ ವ್ಯವಸ್ಥೆಯಲ್ಲಿ ಚಿಕಿತ್ಸೆ ಪಡೆಯುವುದು ಸವಾಲಾಗಿದೆ.

ಆರೋಗ್ಯ ಭದ್ರತೆ ಒದಗಿಸುವ ಭರವಸೆಯೊಂದಿಗೆ 2018ರಲ್ಲಿ ಪ್ರಾರಂಭವಾದ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆ (ಎಬಿ-ಎಆರ್‌ಕೆ), ಐದು ವರ್ಷಗಳಾದರೂ ಜನರಿಗೆ ಭರವಸೆಯನ್ನು ಮೂಡಿಸಿಲ್ಲ. ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದ್ದರೂ ದ್ಯಕೀಯ ಸೌಲಭ್ಯ ಪಡೆಯುವುದು ಕಷ್ಟಸಾಧ್ಯವಾಗಿದೆ.

**ಪೂರಕ ಮಾಹಿತಿ: ದಾವಣಗೆರೆ, ಮೈಸೂರು, ಮಂಗಳೂರು ಹಾಗೂ ಹುಬ್ಬಳ್ಳಿ ಬ್ಯುರೊ**

## ಖಾಸಗಿ ಸೇವೆ ಅವಲಂಬನೆ

ಸರ್ಕಾರಿ ಆಸ್ಪತ್ರೆಗಳಲ್ಲಿ ತೃತೀಯ ಹಂತದ ವೈದ್ಯಕೀಯ ವ್ಯವಸ್ಥೆಯ ಬಲವರ್ಧನೆ ಸಾಕಾರವಾಗಿಲ್ಲ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳ ಮೇಲೆ ಅವಲಂಬನೆ ಹೆಚ್ಚಾಗಿದ್ದು, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ ಅಪಘಾತ ಸೇರಿ ವಿವಿಧ ತುರ್ತು ಸಂದರ್ಭದಲ್ಲಿ ಶೇ 70ರಿಂದ ಶೇ 80 ರಷ್ಟು ಮಂದಿಗೆ ಖಾಸಗಿ ಆಸ್ಪತ್ರೆಗಳೇ ಚಿಕಿತ್ಸೆ ಒದಗಿಸುತ್ತಿವೆ. ಹೀಗಾಗಿಯೇ ರಾಜ್ಯದಲ್ಲಿ 16 ಸಾವಿರಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳು ತಲೆಯೆತ್ತಿವೆ.

ಜಿಲ್ಲಾ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯ ಇಲ್ಲದಿರುವುದರಿಂದ ರೋಗಿಗಳು ಶಿಫಾರಸು ಆಧಾರದಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾಗಿದೆ. ಇದರಿಂದ ರೋಗಿಯ ಸ್ಥಿತಿ ಬಿಗಡಾಯಿಸುವ ಜತೆಗೆ ಆರ್ಥಿಕ ವೆಚ್ಚವೂ ಹೆಚ್ಚಳವಾಗುತ್ತಿದೆ. ಕೋವಿಡ್ ಮೂರನೇ ಅಲೆ ಎದುರಿಸಲು ಚಿಕಿತ್ಸೆಗೆ ಗೊತ್ತುಪಡಿಸಲಾದ 1.94 ಲಕ್ಷ ಹಾಸಿಗೆಗಳಲ್ಲಿ ಶೇ 73.71 ರಷ್ಟು ಹಾಸಿಗೆಗಳು ಖಾಸಗಿಯವರ ನಿಯಂತ್ರಣದಲ್ಲಿಯೇ ಇತ್ತು. ಚಿಕಿತ್ಸೆಗೆ ಮೀಸಲಿರಿಸಿದ ಹಾಸಿಗೆಗಳಲ್ಲಿ 51,093 ಹಾಸಿಗೆಗಳು ಸರ್ಕಾರಿ ವ್ಯವಸ್ಥೆಯಡಿ ಇದ್ದರೆ, 1.43 ಲಕ್ಷ ಹಾಸಿಗೆಯನ್ನು ಖಾಸಗಿ ವ್ಯವಸ್ಥೆಯಡಿ ಗುರುತಿಸಲಾಗಿತ್ತು.

ಈಗಲೂ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಸುಸಜ್ಜಿತ ಪ್ರಯೋಗಾಲಯಗಳಿಲ್ಲ. ಎಕ್ಸ್‌-ರೇ, ಸಿಟಿ ಸ್ಕ್ಯಾನ್, ಎಂಆರ್‌ಐ ಸೇರಿ ವಿವಿಧ ಪರೀಕ್ಷೆಗಳಿಗೆ ಖಾಸಗಿ ಕೇಂದ್ರಗಳನ್ನೇ ಅವಲಂಬಿಸಬೇಕಾದ ಸ್ಥಿತಿಯಿದೆ. ಈ ಘಟಕಗಳು ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಇದ್ದರೂ ಇದರ ಲಾಭ ರೋಗಿಗಳಿಗೆ ಸಿಗುತ್ತಿಲ್ಲ. ಇದರಿಂದಾಗಿ ಸಾವಿರಾರು ರೂಪಾಯಿಯನ್ನು ಖಾಸಗಿ ಘಟಕಗಳಿಗೆ ವ್ಯಯಿಸಬೇಕಾಗಿದೆ.

## ಸರ್ಕಾರಿ ವೈದ್ಯಕೀಯ ವ್ಯವಸ್ಥೆ ಸುಧಾರಣೆಗೆ ತಜ್ಞರ ಸಲಹೆಗಳು

- ಖಾಸಗಿ ಆಸ್ಪತ್ರೆಗಳಂತೆ ವೈದ್ಯರಿಗೆ ಸೂಕ್ತ ವೇತನ ನೀಡಬೇಕು
- ಕೆಲಸದ ಅವಧಿ ಹಾಗೂ ನಂತರ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳಲ್ಲಿನ ಸೇವೆಗೆ ಕಡಿವಾಣ ಹಾಕಬೇಕು
- ಆಸ್ಪತ್ರೆಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣ ಮತ್ತು ಸಿಬ್ಬಂದಿಗಳನ್ನು ಒದಗಿಸಿ, ಅದರ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿ ನೀಡಬೇಕು
- ಹೊಸ ಆಸ್ಪತ್ರೆ, ವೈದ್ಯಕೀಯ ಕಾಲೇಜು ಆಸ್ಪತ್ರೆ ನಿರ್ಮಾಣಕ್ಕಿಂತ ಇರುವ ಆಸ್ಪತ್ರೆಗಳ ಬಲವರ್ಧನೆಗೆ ಆದ್ಯತೆ ನೀಡಬೇಕು
- ಜಿಲ್ಲಾಮಟ್ಟದಲ್ಲಿ ತೀವ್ರ, ತುರ್ತು ನಿಗಾ ಘಟಕವನ್ನು ಬಲಪಡಿಸಬೇಕು
- ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಬೇಕು
- ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು
- ಲಂಚಕ್ಕೆ ಬೇಡಿಕೆ ಇಟ್ಟಲ್ಲಿ, ಸೇವೆಗೆ ನಿರಾಕರಿಸಿದಲ್ಲಿ ಕಾನೂನು ಅಡಿ ಕಠಿಣ ಕ್ರಮ ಕೈಗೊಳ್ಳಬೇಕು
- ಕಾರ್ಪೋರೇಟ್ ಆಸ್ಪತ್ರೆಗಳ ಲಾಬಿಗೆ ಮಣಿಯಬಾರದು

## 'ತುರ್ತು ನಿಗಾ ಘಟಕ ಬಲಪಡಿಸಬೇಕು'

'ರಸ್ತೆ ಅಪಘಾತ, ಹೃದಯಾಘಾತ ಹಾಗೂ ಪಾರ್ಶ್ವವಾಯುವಿಗೆ ಒಳಗಾದಾಗ ಆದಷ್ಟು ಬೇಗ ತುರ್ತು ಚಿಕಿತ್ಸೆ ಒದಗಿಸಬೇಕಾಗುತ್ತದೆ. ಆದ್ದರಿಂದ ಜಿಲ್ಲಾ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ತುರ್ತು ನಿಗಾ ಘಟಕ ಬಲಪಡಿಸಿ, ಸೂಕ್ತವಾಗಿ ನಿರ್ವಹಣೆ ಮಾಡಬೇಕು. ಅತ್ಯಾಧುನಿಕ ಉಪಕರಣಗಳು ಇದ್ದರೂ ಅದನ್ನು ನಿರ್ವಹಿಸುವವರು ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅಗತ್ಯ ಪ್ರಮಾಣದಲ್ಲಿ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಒದಗಿಸಬೇಕು. ಕೆಲವು ವೇಳೆ ಚಿಕಿತ್ಸೆ ಫಲಕಾರಿಯಾಗದಿದ್ದರೆ ರೋಗಿಗಳ ಕಡೆಯವರು ಹಲ್ಲೆ ಮಾಡುವ ಸಾಧ್ಯತೆ ಇರುತ್ತದೆ. ಇದರಿಂದಾಗಿಯೇ ಗಂಭೀರ ಸ್ಥಿತಿಯಲ್ಲಿ ಬಂದ ರೋಗಿಗಳನ್ನು ದಾಖಲಿಸಿಕೊಳ್ಳಲು ವೈದ್ಯರು ಹಿಂದೇಟು ಹಾಕುತ್ತಾರೆ. ಆದ್ದರಿಂದ ವೈದ್ಯರಿಗೆ ಸೂಕ್ತ ವಾತಾವರಣ ಕಲ್ಪಿಸಬೇಕು. ಔಷಧಗಳು ಸಮರ್ಪಕವಾಗಿ ಪೂರೈಕೆ ಆಗುವಂತೆ ನೋಡಿಕೊಳ್ಳಬೇಕು. ಆಸ್ಪತ್ರೆಗಳ ಮುಖ್ಯಸ್ಥರು ಜವಾಬ್ದಾರಿ ತೆಗೆದುಕೊಂಡು, ಗುಣಮಟ್ಟದ ಸೇವೆಗೆ ಶ್ರಮಿಸಬೇಕು.

**ಡಾ.ಸಿ.ಎನ್. ಮಂಜುನಾಥ್,** ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

## 'ಖಾಸಗಿ ಸೇವೆಗೆ ಕಡಿವಾಣ ಅಗತ್ಯ'

ಸರ್ಕಾರಿ ಆಸ್ಪತ್ರೆ, ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಎಲ್ಲಾ ಅವಧಿಯಲ್ಲಿ ಇರುವುದಿಲ್ಲ. 24x7 ಅವಧಿ ತಜ್ಞ ವೈದ್ಯರು ಕರ್ತವ್ಯದಲ್ಲಿ ಇರುವಂತೆ ನೋಡಿಕೊಳ್ಳಬೇಕು. ರೋಗಿಗಗಳು ಅಲೆದಾಡುವುದನ್ನು ತಪ್ಪಿಸಬೇಕು. ವೈದ್ಯರಿಗೆ ಕಾರ್ಪೋರೇಟ್ ಆಸ್ಪತ್ರೆಗಳಲ್ಲಿ ನೀಡುವಷ್ಟೇ ವೇತನ ನೀಡಿ, ಪ್ರೋತ್ಸಾಹಿಸಬೇಕು. ಆಗ ಕರ್ತವ್ಯದ ಅವಧಿ ಹಾಗೂ ನಂತರದ ಅವಧಿಯಲ್ಲಿ ಖಾಸಗಿ ಸೇವೆಗೆ ಕಡಿವಾಣ ಹಾಕಲು ಸಾಧ್ಯ. ಕಾರ್ಪೋರೇಟ್ ಆಸ್ಪತ್ರೆಗಳ ಲಾಬಿಗೆ ಮಣಿಯದೆ, ಖಾಸಗಿ ಆಸ್ಪತ್ರೆಗಳ ಮಾದರಿಯಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಬೇಕು. ನವಜಾತ ಶಿಶುಗಳ ಐಸಿಯು, ಮಕ್ಕಳ ಐಸಿಯು ಹಾಗೂ ವೈದ್ಯಕೀಯ ಐಸಿಯು ಘಟಕಗಳನ್ನು ಬಲಪಡಿಸಿ, ಅಗತ್ಯ ವೈದ್ಯಕೀಯ ಉಪಕರಣಗಳನ್ನು ಒದಗಿಸಬೇಕು.

**ಡಾ.ಎಸ್. ಶ್ರೀನಿವಾಸ್,** ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ

## 'ಕೊರತೆ ನೀಗಿಸಲು ಸೂಕ್ತ ವೇತನ ನೀಡಿ'

ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಎಂಬಿಬಿಎಸ್ ವೈದ್ಯರಿದ್ದಾರೆ. ಆದರೆ, ಸರ್ಕಾರಿ ವ್ಯವಸ್ಥೆಯಡಿ ಸೂಕ್ತ ವೇತನ ಸಿಗದಿರುವುದರಿಂದ ಅವರು ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ತೋರುತ್ತಿದ್ದಾರೆ. ವೇತನದ ಕಾರಣವೇ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಕೂಡ ಬಿಡುವಿನ ಅವಧಿಯಲ್ಲಿ ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದ್ದರಿಂದ ವೈದ್ಯರಿಗೆ ಉತ್ತಮ ಸಂಬಳ ನೀಡಬೇಕು. ಅದೇ ರೀತಿ, ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ವೈದ್ಯರಿಗೆ ಅಗತ್ಯವಿರುವ ಉಪಕರಣಗಳನ್ನು ಕೂಡ ಒದಗಿಸಬೇಕು. ಕೇವಲ ಕಟ್ಟಡ ನಿರ್ಮಿಸಿದರೆ ಪ್ರಯೋಜನವಿಲ್ಲ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಹಣವನ್ನು ಹೂಡಿಕೆ ಮಾಡಬೇಕು. ಆಗ ಸರ್ಕಾರಿ ವೈದ್ಯಕೀಯ ವ್ಯವಸ್ಥೆ ಸುಧಾರಿಸುತ್ತದೆ.

**ಡಾ.ಶ್ರೀನಿವಾಸ ಕಕ್ಕಿಲ್ಲಾಯ,** ವೈದ್ಯರು

## 'ಮಾನವ ಸಂಪನ್ಮೂಲ ಅಗತ್ಯ'

ರಾಜ್ಯದಲ್ಲಿನ ಜಿಲ್ಲಾ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲು ಅಗತ್ಯ ಮಾನವಸಂಪನ್ಮೂಲ ಒದಗಿಸಬೇಕು. ರಾಜ್ಯದ ಬಹುತೇಕ ಆಸ್ಪತ್ರೆಗಳು ವೈದ್ಯಕೀಯ ತಜ್ಞರ ಕೊರತೆ ಎದುರಿಸುತ್ತಿವೆ. ಕಿದ್ವಾಯಿಯಂತಹ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ವಿಭಾಗವಾರು ಆದರೂ ಪ್ರಾರಂಭಿಸಿ, ಚಿಕಿತ್ಸೆ ಒದಗಿಸಬೇಕು. ಕ್ಯಾನ್ಸರ್‌ನಂತಹ ಕಾಯಿಲೆಗೆ ಚಿಕಿತ್ಸೆ ಪಡೆಯಲು ಬೆಂಗಳೂರಿಗೆ ಬಂದು, ಐದಾರು ತಿಂಗಳು ಇಲ್ಲಿ ಇರಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇದರಿಂದ ರೋಗಿಗಳು ಆರ್ಥಿಕವಾಗಿಯೂ ಸಂಕಷ್ಟಕ್ಕೆ ಸಿಲುಕುತ್ತಾರೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿಯೇ ಕ್ಯಾನ್ಸರ್ ತಪಾಸಣೆಗೆ ಕ್ರಮವಹಿಸಬೇಕು. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದರೆ ವ್ಯಕ್ತಿಯೂ ಬೇಗ ಚೇತರಿಸಿಕೊಳ್ಳುತ್ತಾನೆ.

**ಡಾ.ಸಿ. ರಾಮಚಂದ್ರ,** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿಕಟಪೂರ್ವ ನಿರ್ದೇಶಕ

## 'ವೈದ್ಯಕೀಯ ಉಪಕರಣ ಒದಗಿಸಿ'



ಆಸ್ಪತ್ರೆಗಳಲ್ಲಿ ವೈದ್ಯರು ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಲು ಅಗತ್ಯ ವೈದ್ಯಕೀಯ ಉಪಕರಣ ಹಾಗೂ ಅತ್ಯಾಧುನಿಕ ಯಂತ್ರಗಳನ್ನೂ ಒದಗಿಸಬೇಕು. ಅದರ ನಿರ್ವಹಣೆಗೂ ಕ್ರಮವಹಿಸಬೇಕು. ಕೇವಲ ಕಟ್ಟಡಗಳನ್ನು ನಿರ್ಮಿಸುವುದರಿಂದ ವೈದ್ಯಕೀಯ ವ್ಯವಸ್ಥೆ ಸುಧಾರಿಸುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಅಗತ್ಯ ಸೌಲಭ್ಯ ಒದಗಿಸಬೇಕು. ಹೃದಯ ವಿಜ್ಞಾನ, ಕ್ಯಾನ್ಸರ್ ಸೇರಿ ವಿವಿಧ ಸೂಪರ್ ಸ್ಪೆಷಾಲಿಟಿಯನ್ನು ವಿಸ್ತರಿಸಬೇಕು. ಜಿಲ್ಲಾ ಆಸ್ಪತ್ರೆಗಳಲ್ಲಿ ನರರೋಗ ತಜ್ಞರು ಸೇರಿ ವಿವಿಧ ವೈದ್ಯರ ಕೊರತೆಯಿಂದ ಬೆಂಗಳೂರಿಗೆ ಶಿಫಾರಸು ಮಾಡಲಾಗುತ್ತಿದೆ. ಈ ಸಮಸ್ಯೆ ನಿವಾರಣೆಗೆ ವೈದ್ಯರ ನೇಮಕಾತಿಗೆ ಆದ್ಯತೆ ನೀಡಬೇಕು.

**ಡಾ.ಎಚ್.ಎಸ್. ಚಂದ್ರಶೇಖರ್,** ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ ಮಾಜಿ ನಿರ್ದೇಶಕ

## ಗುಂಡಣ್ಣ

## 25 ವರ್ಷಗಳ ಹಿಂದೆ

ಗುರುವಾರ, 26-11-1998

- **ನಾಲ್ಕು ರಾಜ್ಯಗಳಲ್ಲಿ ಶೇ 60 ಮತದಾನ**

**ನವದೆಹಲಿ, ನ.25– ದೆಹಲಿ,** ಮಧ್ಯಪ್ರದೇಶ, ರಾಜಸ್ಥಾನ ಮತ್ತು ಮಿಜೊರಾಂ ವಿಧಾನಸಭೆಗೆ ಇಂದು ನಡೆದ ಚುನಾವಣೆಯಲ್ಲಿ ಪ್ರಥಮ ವರದಿಗಳ ಪ್ರಕಾರ ಸುಮಾರು ಶೇ 60ರಷ್ಟು ಮತದಾನವಾಗಿದೆ.

ಮಧ್ಯಪ್ರದೇಶದಲ್ಲಿ ಮತದಾನದ ಸಂದರ್ಭದಲ್ಲಿ ನಡೆದ ಹಿಂಸಾಚಾರದಲ್ಲಿ ಇಬ್ಬರು ಸತ್ತಿದ್ದು, 16 ಜನರು ಗಾಯಗೊಂಡಿದ್ದಾರೆ. ರಾಜಸ್ಥಾನದ ಕೆಲವೆಡೆ ಮತಪೆಟ್ಟಿಗೆ ಅಪಹರಣ ಪ್ರಕರಣ ವರದಿಯಾಗಿದೆ. ದೆಹಲಿಯ ಕೊಳೆಗೇರಿಯಲ್ಲಿ ವಿತರಿಸಲಾದ ತಿಂಡಿ ತಿಂದು 300ಕ್ಕೂ ಹೆಚ್ಚು ಜನ ಅಸ್ವಸ್ಥರಾಗಿದ್ದಾರೆ.

## 50 ವರ್ಷಗಳ ಹಿಂದೆ

ಸೋಮವಾರ, 26-11-1973

- **ಇಂದು ದೆಹಲಿಗೆ ಬ್ರೆಜ್ನೆವ್: ಭವ್ಯ ಸ್ವಾಗತಕ್ಕೆ ಸಜ್ಜು**

**ನವದೆಹಲಿ, ನ.25–** ಐದು ದಿನಗಳ ಅಧಿಕೃತ ಪ್ರವಾಸಕ್ಕಾಗಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಇಲ್ಲಿಗೆ ಆಗಮಿಸುವ ಸೋವಿಯಟ್ ಕಮ್ಯುನಿಸ್ಟ್ ಪಕ್ಷದ ನಾಯಕ ಬ್ರೆಜ್ನೆವ್ ಅವರಿಗಾಗಿ ಸಿದ್ಧವಾಗಿರುವ ಚರಿತ್ರಾರ್ಹ ಮತ್ತು ಹಾರ್ದಿಕ ಸ್ವಾಗತವು ಹೊಸ ಅಧ್ಯಾಯವನ್ನು ಆರಂಭಿಸಲಿದೆ.

ಹಿರಿಯ ರಾಷ್ಟ್ರವೊಂದರ ನೆಚ್ಚಿನ ನಾಯಕನಿಗೆ ಭಾರಿ ಸ್ವಾಗತ ನೀಡಲು ಅಧಿಕೃತ ಕಾರ್ಯಕ್ರಮಗಳ ಜತೆಗೆ ದೆಹಲಿ ಪೌರ ಸಮಿತಿ ಮತ್ತು ಭಾರತ–ಸೋವಿಯಟ್ ಸಾಂಸ್ಕೃತಿಕ ಸಂಘ ವಿಶೇಷ ವ್ಯವಸ್ಥೆಗಳನ್ನು ಮಾಡಿಕೊಂಡಿವೆ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ನವೆಂಬರ್ 26, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಕಾರ್ತಿಕ ಶುಕ್ಲ ಚತುರ್ದಶಿ ಗಂ. 15-54 ನಕ್ಷತ್ರ: ಭರಣಿ ಗಂ. 14-05 ಯೋಗ: ಪರಿಘ ಗಂ 25-36 ಕರಣ: ವಣಿಜ ಗಂ 15-54, ವೃಶ್ಚಿಕ ಮಾಸದ 10 ನೇ ದಿನ, ಮಳೆನಕ್ಷತ್ರ: ಅನುರಾಧ 2.
**ರಾಹುಕಾಲ :** ಸಾಯಂಕಾಲ 04-30 - 06-00
**ಸೂರ್ಯೋದಯ :** 06-39 **ಸೂರ್ಯಾಸ್ತ :** 05-57
**ಮುಸ್ಲಿಂ ದಿನಾಂಕ :** 11 ಜುಮಾದುಲ್ಲಾವಲ್
**ದಿನ ವಿಶೇಷ :** ರಸಯಾತ್ರಾ, ತ್ರಿಪುರೋತ್ಸವ, ಅದೃಷ್ಟ ಸಂಖ್ಯೆ : 4, 12

**ಮೇಷ:** ಕಷ್ಟಪಟ್ಟು ದುಡಿಯುವುದರಿಂದ ಹಣ ಕೈಯಲ್ಲಿ ನಿಲ್ಲುವುದು. ಅದರಿಂದಾಗಿ ಹಣಕಾಸಿನ ವಿಚಾರದಲ್ಲಿ ನೀವು ಇನ್ನೊಂದು ಮೆಟ್ಟಿಲು ಹತ್ತುವಂತೆ ಆಗಲಿದೆ.

**ವೃಷಭ:** ನೂತನ ವಾಹನ ಖರೀದಿಯ ಯೋಜನೆಗೆ ತಂದೆಯಿಂದ ಒಪ್ಪಿಗೆ ಮತ್ತು ಸಹಾಯ ಸಿಗಲಿದೆ. ಉನ್ನತ ಶಿಕ್ಷಣ ಪಡೆಯುವ ನಿಮ್ಮ ಗುರಿಗೆ ಇನ್ನೂ ಹೆಚ್ಚಿನ ಪರಿಶ್ರಮ ಅಗತ್ಯವಾಗುವುದು. ನಿಮ್ಮ ಸ್ವ ಇಚ್ಛೆಯೇ ಅಂತಿಮವಾಗಿರಲಿ.

**ಮಿಥುನ:** ಎಲ್ಲರನ್ನೂ ಪ್ರೀತಿಯಿಂದ ಗೆಲ್ಲಬೇಕೆಂಬ ಮಾತಿನ ಮಹತ್ವ ನಿಮಗೆ ಅನುಭವದಿಂದಾಗಿ ತಿಳಿದುಬರಲಿದೆ. ಕಾರ್ಯಕ್ಷೇತ್ರದಲ್ಲಿ ಹೊಸ ವಿಚಾರಗಳ ಅನ್ವೇಷಣೆ ಉತ್ತಮ ಫಲ ನೀಡಲಿವೆ. ನಿರುದ್ಯೋಗಿಗಳಿಗೆ ಒತ್ತಡ ಹೆಚ್ಚಾಗಲಿದೆ.

**ಕರ್ಕಾಟಕ:** ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧ ಮುಂದುವರಿಯಲಿದೆ. ಮನೆಯ ರಿಪೇರಿ ಕೆಲಸಗಳು ಅನಿವಾರ್ಯವಾಗುವುದು ಮತ್ತು ಅಧಿಕ ಹಣ ವ್ಯಯವಾಗುತ್ತದೆ. ಪ್ರಾಣಾಯಾಮವನ್ನು ಅಭ್ಯಾಸ ಮಾಡಿರಿ.

**ಸಿಂಹ:** ನಿಮ್ಮ ಸಮಸ್ಯೆಗಳಿಗೆ ಧಾರ್ಮಿಕ ಮಾರ್ಗದಲ್ಲಿ ನಡೆದರೆ ಉತ್ತರ ಸಿಗುವುದು. ಹಣಕ್ಕಿಂತ ಸ್ನೇಹ ಸಂಬಂಧಗಳು ಮುಖ್ಯವೆಂದು ಅರಿವಾಗಲಿದೆ. ಇಂದು ಅಪರೂಪದ ಸಮಾರಂಭವೊಂದಕ್ಕೆ ಆಹ್ವಾನ ಬರುವುದು.

**ಕನ್ಯಾ:** ಒಟ್ಟು ಕುಟುಂಬದ ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಬರದಂತೆ ನೋಡಿಕೊಳ್ಳುವುದು ಉತ್ತಮ. ಮಗಳ ಮದುವೆಯ ಸಲುವಾಗಿ ಆಭರಣವನ್ನು ಕೊಳ್ಳುವ ಬಗ್ಗೆ ಯೋಚಿಸಿ.

**ತುಲಾ:** ನಿಮ್ಮ ಬುದ್ಧಿವಂತಿಕೆಯ, ನಿಮ್ಮ ಸಾಮರ್ಥ್ಯದ ಅರಿವು ನಿಮಗಿಲ್ಲ, ಧೈರ್ಯದಿಂದ ಮುನ್ನಡೆದರೆ ಯಶಸ್ಸು ನಿಮ್ಮದಾಗುವುದು. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರ ಗೊಳಿಸಲು ಕಾರಣವಾಗುವುದು.

**ವೃಶ್ಚಿಕ:** ಮನೆಗೆ ನೂತನ ಸಾಕು ಪ್ರಾಣಿಯ ಆಗಮನ ಮಕ್ಕಳಲ್ಲಿ ಸಂತೋಷ ಮೂಡಿಸಲಿದೆ. ಮಕ್ಕಳ ನಡುವಳಿಕೆಯಿಂದ ಅಗೌರವಕ್ಕೆ ಕಾರಣವಾಗುವಿರಿ, ಅದರಿಂದಾಗಿ ಬೇಸರವಾಗುವುದು.

**ಧನು:** ನಿಮ್ಮ ಸಣ್ಣ-ಪುಟ್ಟ ಮಾಹಿತಿಯಿಂದ ಸಂಸ್ಥೆಗೆ ಅನುಕೂಲವಾಗುತ್ತದೆ. ಕರ್ತವ್ಯ ನಿಷ್ಠೆಯ ಬಗ್ಗೆ ನಿಮ್ಮ ಮೇಲೆ ಆರೋಪ ಬರದಂತೆ ನಿಮ್ಮ ವ್ಯವಹಾರವಿರುವುದು ಉತ್ತಮ. ಈ ಹಿಂದೆ ತೆಗೆದುಕೊಂಡ ನಿಲುವನ್ನು ಬದಲಾಯಿಸಬೇಡಿ.

**ಮಕರ:** ಕಫದ ಅಥವಾ ಉಸಿರಾಟದ ಸಮಸ್ಯೆ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ. ವೈದ್ಯರ ಸಲಹೆ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಿರಿ. ವೃತ್ತಿಗೆ ಸಂಬಂಧಿಸಿದಂತೆ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

**ಕುಂಭ:** ಜವಾಬ್ದಾರಿಯಲ್ಲಿನ ಸ್ಪಷ್ಟ ವಿಷಯವೊಂದು ಮನವರಿಕೆಯಾಗುವುದು. ಮಗಳ ಆಸೆಯಂತೆ ವಿದೇಶ ಪ್ರಯಾಣದ ಸಾಧ್ಯತೆ ಇರುವುದು. ಭೋಜನದ ಸಮಯದಲ್ಲಿ ವ್ಯತ್ಯಯಗಳು ಸಂಭವಿಸುವುದಾಗಿ ಕಾಣುವುದು.

**ಮೀನ:** ಈ ದಿನ ನಿಮ್ಮ ಸಹೋದ್ಯೋಗಿಯೊಬ್ಬರು ಅತಿ ಉತ್ತಮ ಉಪಾಯಗಳನ್ನು ನೀಡಲಿದ್ದು ಅವರ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ಕೆಲಸದ ಬಾಕಿ ಹಣವು ಇಂದು ಸಂದಾಯವಾಗುವುದು.

## ಪದಬಂಧ 5511

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಅಯಸ್ಕಾಂತವನ್ನು ಹೀಗೂ ಹೇಳುವರು (5)
3. ಕಾಠಿಣ್ಯ ಪದಕ್ಕೊಂದು ಪರ್ಯಾಯ ಪದ (3)
5. ಆಂಜನೇಯನ ಇನ್ನೊಂದು ಹೆಸರು (5)
7. ಲೋಹದ ಹಕ್ಕಿ (3)
8. ಭಾನುವಾರವನ್ನು ಹೀಗೂ ಹೇಳುವರು (5)
10. ದನಕ್ಕಾಗಿ ನಡೆದ ಜಗಳ (3)
11. ಹೇಳಲಾರದ ಯಾತನೆ (5)
14. ತೀರ್ಪು ಅಥವಾ ಗೊತ್ತುವಳಿ (3)
15. ಭೂತಗನ್ನಡಿ ಇಲ್ಲದೆ (5)

**ಮೇಲಿಂದ ಕೆಳಕ್ಕೆ**
1. ಅತಿಯಾಸೆಯುಳ್ಳವನು (3)
2. ಬನದ ಬಳಿ ನೀಡಿದ ಮುತ್ತು (3)
4. ಇದು ಒಳ್ಳೆಯ ದಿನ (3)
6. ತಿರುವುಮುರುವಾಗಿರುವ ಉಡುಪು (3)
7. ಹೆಂಡತಿಯನ್ನು ಕಳೆದುಕೊಂಡವನು (3)
8. ಆತನ ಮುಖ! (3)
9. ಓದುಗ ಇಲ್ಲಿದ್ದಾನೆ (3)
10. ಕೆಲಸದಲ್ಲಿ ನಿಪುಣನಾದವನು (3)
12. ಉತ್ತೇಜನಕರವಾದ ಆಹಾರ (3)
13. ಅಡಿಗಡಿಗೆ ತಲೆದೋರುವ ಶೀತ (3)



## 5510 ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 2. ಒನಕೆ 4.ಮರಣ 5.ತಳಹದಿ 6. ಹಳವಂಡ 8. ಟೆಸ 10.ಉಪಾ 13. ರಸಮಯ 14.ಸಹವಾಸ 15. ಗಾವುದ 16.ಚಮ್ಮಾರ

**ಮೇಲಿಂದ ಕೆಳಕ್ಕೆ:** 1.ಸಮಯಸಾಧಕ 2.ಒಣಹರಟೆ 3.ಮಹಲು 5.ತಡಸಲು 7.ಅರಣ್ಯರೋದನ 9.ಸಮರಸ 11. ಪಾಳೆಯಗಾರ 12.ಸಾಹಸಿ

## ಸುಡೊಕು 5897

| | | | | | | | | |
|---|---|---|---|---|---|---|---|---|
| 7 | | 4 | | 5 | | | | 3 |
| | 2 | | 1 | | 9 | 6 | | 5 |
| 6 | | 5 | | 3 | | | | |
| 2 | | | | | 4 | 1 | | 9 |
| 9 | 7 | 1 | | 8 | | | 4 | |
| 4 | | | 9 | | 2 | 3 | | 7 |
| | 4 | | 3 | | 7 | | 2 | |
| | | | | | | 7 | | |
| 1 | 3 | | | 2 | | | 6 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 5896 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 9 | 6 | 2 | 1 | 3 | 4 | 5 |
| 3 | 2 | 6 | 5 | 4 | 8 | 9 | 1 | 7 |
| 1 | 4 | 5 | 9 | 7 | 3 | 2 | 8 | 6 |
| 2 | 6 | 8 | 1 | 3 | 5 | 4 | 7 | 9 |
| 9 | 3 | 1 | 7 | 8 | 4 | 5 | 6 | 2 |
| 4 | 5 | 7 | 2 | 9 | 6 | 1 | 3 | 8 |
| 6 | 9 | 2 | 3 | 1 | 7 | 8 | 5 | 4 |
| 7 | 1 | 4 | 8 | 5 | 9 | 6 | 2 | 3 |
| 5 | 8 | 3 | 4 | 6 | 2 | 7 | 9 | 1 |

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾರ್ಯಾಚರಣೆ ಹಲವು ದಿನಗಳೇ ಆಗಬಹುದು – ಅಧಿಕಾರಿಗಳ ಹೇಳಿಕೆ; ಆತಂಕದಲ್ಲಿ ಕಾರ್ಮಿಕರ ಕುಟುಂಬ

# ಯಂತ್ರಕ್ಕೆ ಹಾನಿ: ರಕ್ಷಣಾ ಕಾರ್ಯಕ್ಕೆ ಅಡ್ಡಿ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಹದಿನಾಲ್ಕು ದಿನಗಳಿಂದ ಸಿಲುಕಿರುವ ಕಾರ್ಮಿಕರನ್ನು ಹೊರ ತರುವ ಕಾರ್ಯಾಚರಣೆಗೆ ಮತ್ತೆ ಅಡ್ಡಿಯಾಗಿದೆ. ಕೊರೆಯುವ ಯಂತ್ರಕ್ಕೆ ತೀವ್ರ ಹಾನಿಯಾಗಿದೆ ಎಂದು ಸುರಂಗ ವಿಷಯಗಳ ತಜ್ಞ ಅರ್ನಾಲ್ಡ್ ಡಿಕ್ಸ್ ತಿಳಿಸಿದ್ದಾರೆ.

ಕೊರೆಯುವ ಯಂತ್ರ ನಿಷ್ಪ್ರಯೋಜಕವಾಗಿದೆ. ಕಳೆದ ಕೆಲವು ದಿನಗಳಿಂದ ಕೊರೆಯುವ ಕಾರ್ಯಕ್ಕೆ ನಾನಾ ಅಡೆತಡೆಗಳು ಎದುರಾಗಿವೆ. ಕಾರ್ಮಿಕರನ್ನು ಹೊರತರಲು ಇನ್ನೂ ಹಲವು ದಿನಗಳು ಬೇಕಾಗಬಹುದು ಎಂದು ಹೇಳಿದರು.

ಲಂಬಾಕಾರವಾಗಿ ರಂಧ್ರ ಕೊರೆಯುವುದು ಅಥವಾ ಕಾರ್ಮಿಕರಿಂದಲೇ ಸುರಂಗ ಅಗೆಯುವಂತಹ ಇತರ ಆಯ್ಕೆಗಳ ಬಗ್ಗೆ ವರದಿಗಾರರು ಕೇಳಿದಾಗ, 'ಎಲ್ಲಾ ಆಯ್ಕೆಗಳ ಬಗ್ಗೆಯೂ ವಿಚಾರ ಮಾಡುತ್ತಿದ್ದೇವೆ. ರಕ್ಷಣಾ ಸಿಬ್ಬಂದಿ ಮತ್ತು ಕಾರ್ಮಿಕರ ಸುರಕ್ಷತೆ ಖಚಿತಪಡಿಸಿಕೊಳ್ಳಬೇಕು' ಎಂದರು.

ಅಧಿಕಾರಿಗಳು ಈಗ ಎರಡು ಪರ್ಯಾಯಗಳತ್ತ ಗಮನ ಹರಿಸುತ್ತಿದ್ದು, ಉಳಿದ 10 ಅಥವಾ 12 ಮೀಟರ್ ಉದ್ದ ಕಾರ್ಮಿಕರೇ ಸುರಂಗ ಕೊರೆಯುವುದು ಅಥವಾ ಮೇಲ್ಭಾಗದಿಂದ 86 ಮೀಟರ್ ಕೆಳಗೆ ಕೊರೆಯುವುದು ಆಯ್ಕೆಗಳಾಗಿವೆ.

ರಂಧ್ರ ಕೊರೆಯುತ್ತಿದ್ದ ಅಮೆರಿಕದ ಯಂತ್ರದ ಬ್ಲೇಡ್‌ಗಳು ಪೈಪ್‌ಗೆ ಬಡಿದ ಕಾರಣ ಶುಕ್ರವಾರ ರಕ್ಷಣಾ ಕಾರ್ಯವನ್ನು ನಿಲ್ಲಿಸಲಾಗಿತ್ತು. ಹಾಗಾಗಿ ಕಾರ್ಯಾಚರಣೆ ಇನ್ನೂ ಹಲವು ದಿನಗಳು ಅಥವಾ ವಾರಗಳು ಆಗಬಹುದು. ಇದೇ ರೀತಿಯ ಅಡ್ಡಿಯಿಂದಾಗಿ ಮೂರು ದಿನಗಳಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕಾರ್ಮಿಕರಿಂದಲೇ ಸುರಂಗ ಅಗೆಯುವಂತಹ ಕೆಲಸ ಭಾನುವಾರದಿಂದ ಆರಂಭವಾಗಲಿದೆ. ಅಗರ್ ಯಂತ್ರದ ಬ್ಲೇಡ್‌ಗಳು ಅವಶೇಷಗಳ ಅಡಿ ಸಿಲುಕಿಕೊಂಡಿವೆ. ಬ್ಲೇಡ್‌ಗಳ ಕೆಲ ಭಾಗವನ್ನು ಕತ್ತರಿಸಲಾಗಿದೆ. ಉಳಿದ ಕೆಲಸ ಪೂರ್ಣಗೊಳಿಸಲು ಪ್ಲಾಸ್ಮಾ ಕಟ್ಟರ್ ಅನ್ನು ಹೈದರಾಬಾದ್‌ನಿಂದ ವಿಮಾನದಲ್ಲಿ ತರಲಾಗುತ್ತಿದೆ' ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದರು

ರಕ್ಷಣಾ ಸಿಬ್ಬಂದಿ 48 ಮೀಟರ್ ವರೆಗೂ ಸುರಂಗ ಕೊರೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು 12–14 ಮೀಟರ್‌ನಷ್ಟು ಕೊರೆದರೆ ಕಾರ್ಮಿಕರನ್ನು ತಲುಪಬಹುದು. ಕಾರ್ಮಿಕರು ಸಿಲುಕಿಕೊಂಡಿರುವ ಪ್ರದೇಶವು 8.5 ಮೀಟರ್ ಎತ್ತರ ಮತ್ತು ಸುಮಾರು ಎರಡು ಕಿಲೋಮೀಟರ್ ಉದ್ದವಿದೆ.

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹಾಗೂ ಅಧಿಕಾರಿಗಳು ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದರು –ಪಿಟಿಐ ಚಿತ್ರ

**'ಕಾರ್ಮಿಕರು ಅವರ ಕುಟುಂಬ ಸದಸ್ಯರೊಂದಿಗೆ ಸಂಪರ್ಕದಲ್ಲಿರುವಂತೆ ಮಾಡಲು ಬಿಎಸ್‌ಎನ್‌ಎಲ್ ಸ್ಥಿರ ದೂರವಾಣಿ ಸೌಲಭ್ಯ ಕಲ್ಪಿಸಿದೆ**

**ರಾಕೇಶ್ ಚೌಧರಿ**

ಡಿಜಿಎಂ, ಬಿಎಸ್‌ಎನ್‌ಎಲ್

## 'ರಕ್ಷಣೆಗೆ ಸಾಕಷ್ಟು ಸಮಯ ಬೇಕು'

ಕೊರೆಯುವ ಯಂತ್ರ ಪದೇ ಪದೇ ತಾಂತ್ರಿಕ ಸಮಸ್ಯೆ ಎದುರಿಸುತ್ತಿರುವ ಕಾರಣ ಕಾರ್ಮಿಕರನ್ನು ಹೊರತರಲು ಲಂಬಾಕಾರವಾಗಿ ರಂಧ್ರ ಕೊರೆಯುವತ್ತ ಗಮನ ಹರಿಸಲಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪ್ರಾಧಿಕಾರದ ಸದಸ್ಯ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತಾ ಹಸ್ನೈನ್, ಕಾರ್ಮಿಕರನ್ನು ಹೊರತರಲು ಸಾಕಷ್ಟು ಸಮಯ ಬೇಕಾಗುತ್ತದೆ. ಏಕೆಂದರೆ ಎಲ್ಲವನ್ನೂ ಅತ್ಯಂತ ಎಚ್ಚರಿಕೆಯಿಂದ ಮಾಡಬೇಕಾಗಿದೆ. ಮುಂದಿನ 24–36 ಗಂಟೆಗಳಲ್ಲಿ ಕಾರ್ಯಾಚರಣೆ ಪ್ರಾರಂಭವಾಗಬಹುದು ಎಂದರು.

ಬಹಳ ಕಷ್ಟದ ಕಾರ್ಯಾಚರಣೆ ನಡೆಯುತ್ತಿದೆ. ಪ್ರಸ್ತುತ ಎರಡು ವಿಧಾನಗಳನ್ನು ಬಳಸಲಾಗುತ್ತಿದೆ. ಆದರೆ ಡ್ರಿಫ್ಟ್ ಎಂಬ ಮೂರನೇ ವಿಧಾನವನ್ನು ಶೀಘ್ರದಲ್ಲೇ ಬಳಸಲಾಗುವುದು ಎಂದರು.

**ಆಟದ ವಸ್ತುಗಳ ರವಾನೆ:** ಕಾರ್ಮಿಕರ ಒತ್ತಡ ನಿವಾರಿಸಲು ಮೊಬೈಲ್ ಫೋನ್, ಲೂಡೊ, ಹಾವು–ಏಣಿಗಳಂತಹ ಆಟದ ವಸ್ತುಗಳನ್ನು ರವಾನಿಸಲಾಗಿದೆ. ಕಾರ್ಮಿಕರು ವಿಡಿಯೊ ಗೇಮ್ ಆಡಲು ಮೊಬೈಲ್ ಫೋನ್ ನೀಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಕುಟುಂಬದವರಲ್ಲಿ ಆತಂಕ:** 'ಸುರಂಗದೊಳಗಿರುವ ಕಾರ್ಮಿಕರನ್ನು ಹೊರ ತರಲಾಗುವುದು ಎಂದು ಅಧಿಕಾರಿಗಳು ಎರಡು ದಿನಗಳಿಂದ ಭರವಸೆ ನೀಡುತ್ತಿದ್ದಾರೆ. ಆದರೆ ಒಂದಲ್ಲ ಒಂದು ಅಡ್ಡಿ ಉಂಟಾಗಿ ಕಾರ್ಯಾಚರಣೆ ವಿಳಂಬವಾಗುತ್ತಿದೆ' ಎಂದು ಕಾರ್ಮಿಕರ ಕುಟುಂಬದ ಸದಸ್ಯ ಬಿಹಾರದ ಬಂಕಾದ ದೇವೇಂದರ್ ಕಿಸ್ಕು ಬೇಸರ ವ್ಯಕ್ತಪಡಿಸಿದರು.

'ಅವರು ತುಂಬಾ ಒತ್ತಡ ಮತ್ತು ತಾಳ್ಮೆ ಕಳೆದುಕೊಂಡಂತೆ ಕಾಣುತ್ತಿದ್ದರು. ನಾವು ಯಾವಾಗ ಹೊರಬರುತ್ತೇವೆ ಎಂದು ಕೇಳುತ್ತಲೇ ಇದ್ದರು. ಬೆಳಿಗ್ಗೆ ಅವರೊಂದಿಗೆ ಹತ್ತು ನಿಮಿಷ ಮಾತನಾಡಿದೆ. ಅವರು ಆಹಾರ ಸೇವಿಸಿರಲಿಲ್ಲ. ಏನನ್ನೂ ತಿನ್ನಲು ಬಯಸುವುದಿಲ್ಲ ಎಂದರು' ಎಂದು ಸುನಿತಾ ತಿಳಿಸಿದರು.

ಸುನಿತಾ ಅವರ ಸೋದರ ಸಂಬಂಧಿ ವೀರೇಂದ್ರ, ಸುರಂಗದೊಳಗೆ ಸಿಲುಕಿರುವ 41 ಕಾರ್ಮಿಕರ ಪೈಕಿ ಒಬ್ಬರು. ಬಿಹಾರ ಮೂಲದ ಅವರು ಪತಿ ದೇವೇಂದರ್ ಮತ್ತು ವೀರೇಂದ್ರ ಅವರ ಪತ್ನಿಯೊಂದಿಗೆ ಘಟನಾ ಸ್ಥಳಕ್ಕೆ ಬಂದಿದ್ದಾರೆ.

'ಅಧಿಕಾರಿಗಳು ಪ್ರತಿದಿನ ಭರವಸೆ ನೀಡುತ್ತಿದ್ದಾರೆ. ಆದರೆ, ಇನ್ನೂ ಯಶಸ್ಸು ಸಾಧಿಸಿಲ್ಲ' ಎಂದು ವೀರೇಂದ್ರ ಅವರ ಹಿರಿಯ ಸಹೋದರ ದೇವೇಂದರ್ ಹೇಳಿದರು.

ನಾನಾ ಕಾರಣಗಳಿಂದ ರಕ್ಷಣಾ ಕಾರ್ಯಕ್ಕೆ ಅಡ್ಡಿಯಾಗುತ್ತಿರುವುದರಿಂದ ಸಂತ್ರಸ್ತ ಕುಟುಂಬಗಳ ಸದಸ್ಯರಲ್ಲಿ ಆತಂಕ ಮಡುಗಟ್ಟಿದೆ.

ಆರು ಇಂಚಿನ ಅಗಲದ ಪೈಪ್ ಮೂಲಕ ಆಹಾರ, ಔಷಧಿಗಳು ಮತ್ತು ಇತರ ಅಗತ್ಯ ವಸ್ತುಗಳನ್ನು ಕಾರ್ಮಿಕರಿಗೆ ಕಳುಹಿಸಲಾಗುತ್ತಿದೆ. ಕಾರ್ಮಿಕರು ಅವರ ಕುಟುಂಬ ಸದಸ್ಯರೊಂದಿಗೆ ನಿತ್ಯ ಮಾತನಾಡುತ್ತಿದ್ದಾರೆ.

ಸಮೀಪದ ಗ್ರಾಮಗಳ ನಿವಾಸಿಗಳು ಕಾರ್ಮಿಕರ ಸುರಕ್ಷಿತ ಬಿಡುಗಡೆಗಾಗಿ ಸ್ಥಳೀಯ ದೇವರನ್ನು ಪ್ರಾರ್ಥಿಸುತ್ತಿದ್ದಾರೆ.

'ಕಾರ್ಮಿಕರ ಯೋಗಕ್ಷೇಮ ಮತ್ತು ರಕ್ಷಣೆಗಾಗಿ ನಿತ್ಯ ಪ್ರಾರ್ಥನೆ ಸಲ್ಲಿಸುತ್ತೇವೆ' ಎಂದು ಸುರಂಗದಿಂದ 10 ಕಿ.ಮೀ ದೂರದಲ್ಲಿರುವ ಬ್ರಮ್ಖಾಲ್ ಗ್ರಾಮದ ನಿವಾಸಿ ರಾಜೇಶ್ ರಾವತ್ ಮತ್ತು ಅವರ ಕುಟುಂಬ ಸದಸ್ಯರು ಹೇಳಿದರು.

**ಉತ್ತರಕಾಶಿಗೆ ಕಾರ್ಮಿಕರ ಕುಟುಂಬ (ಭುವನೇಶ್ವರ ವರದಿ):** ಇನ್ನೂ ಮೂವರು ಒಡಿಶಾ ಕಾರ್ಮಿಕರ ಕುಟುಂಬ ಸದಸ್ಯರು ಉತ್ತರಾಖಂಡ ತಲುಪಲಿದ್ದಾರೆ.

ಕಾರ್ಮಿಕ ಆಯುಕ್ತ ಎನ್.ತಿರುಮಲ ನಾಯಕ್, 'ಇಬ್ಬರು ಕಾರ್ಮಿಕರ ಕುಟುಂಬ ಸದಸ್ಯರು ಈಗಾಗಲೇ ಉತ್ತರ ಕಾಶಿಯಲ್ಲಿದ್ದರೆ, ಇತರ ಮೂವರು ಕಾರ್ಮಿಕರ ಕುಟುಂಬ ಸದಸ್ಯರು ಅಲ್ಲಿಗೆ ಬರಲಿದ್ದಾರೆ. ಈ ಕುಟುಂಬ ಸದಸ್ಯರ ಪ್ರಯಾಣ, ಆಹಾರ ಮತ್ತು ವಸತಿಗೆ ರಾಜ್ಯ ಸರ್ಕಾರ ಅನುಕೂಲ ಕಲ್ಪಿಸುತ್ತಿದೆ' ಎಂದು ಅವರು ಹೇಳಿದರು.

ರಕ್ಷಣಾ ಕಾರ್ಯಾಚರಣೆ ಪೂರ್ಣಗೊಳ್ಳುವವರೆಗೂ ಅವರು ಅಲ್ಲಿಯೇ ಇರುತ್ತಾರೆ. ಒಡಿಶಾದ ಎಲ್ಲಾ ಐದು ಕಾರ್ಮಿಕರು ಆರೋಗ್ಯವಾಗಿದ್ದಾರೆ ಎಂದು ನಾಯಕ್ ಹೇಳಿದರು.

# ಮಹುವಾ ವಿರುದ್ಧ ತನಿಖೆಗೆ ಪ್ರಕರಣ ದಾಖಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಪ್ರಾಥಮಿಕ ತನಿಖೆ ನಡೆಸಲು ಸಿಬಿಐ ಪ್ರಕರಣ ದಾಖಲಿಸಿದೆ.

ಲೋಕಪಾಲ ಸಂಸ್ಥೆಯ ಸಾರ್ವಜನಿಕ ತನಿಖಾಧಿಕಾರಿ ಅವರ ನಿರ್ದೇಶನದ ಮೇರೆಗೆ ಈ ಕ್ರಮ ಕೈಗೊಂಡಿದೆ. ಪೂರ್ಣ ಪ್ರಮಾಣದಲ್ಲಿ ತನಿಖೆ ಆರಂಭಿಸುವುದಕ್ಕೂ ಮೊದಲು ಪ್ರಾಥಮಿಕ ತನಿಖೆ ನಡೆಸಲಿದೆ. ಆರೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದರೆ ಇದನ್ನು ಎಫ್‌ಐಆರ್ ಆಗಿ ಬದಲಾಯಿಸುವ ಸಾಧ್ಯತೆಯಿದೆ.

ಮಹುವಾ ಅವರು ಪ್ರಶ್ನೆ ಕೇಳಲು ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, ಲೋಕಪಾಲಕ್ಕೆ ದೂರು ಸಲ್ಲಿಸಿದ್ದರು. ಆರ್ಥಿಕ ಲಾಭಕ್ಕಾಗಿ ರಾಷ್ಟ್ರೀಯ ಭದ್ರತಾ ಹಿತಾಸಕ್ತಿಯನ್ನು ಕಡೆಗಣಿಸಿದ್ದಾರೆ ಎಂದೂ ಆರೋಪಿಸಿದ್ದರು.

# ವಿವಿಧ ಹಿಂದೂ ಸಂಘಟನೆಗಳ ಒಗ್ಗಟ್ಟಿಗೆ ಹೊಸಬಾಳೆ ಕರೆ



ದತ್ತಾತ್ರೇಯ ಹೊಸಬಾಳೆ

ಬ್ಯಾಂಕಾಕ್ (ಪಿಟಿಐ): 'ಹಿಂದೂ ಸಮಾಜದ ಧ್ವನಿ ಇನ್ನಷ್ಟು ಸ್ಪಷ್ಟ ಹಾಗೂ ಗಟ್ಟಿಯಾಗಿ ಮೊಳಗಲು ವಿವಿಧ ರಾಷ್ಟ್ರಗಳಲ್ಲಿರುವ, ಹಿಂದೂ ಸಂಘಟನೆಗಳ ನಡುವೆ ಉತ್ತಮ ಸಮನ್ವಯ ಈ ಹೊತ್ತಿನ ಅಗತ್ಯವಾಗಿದೆ' ಎಂದು ಆರ್‌ಎಸ್‌ಎಸ್‌ನ ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪ್ರತಿಪಾದಿಸಿದ್ದಾರೆ.

ಶುಕ್ರವಾರ ಇಲ್ಲಿ ನಡೆದ ವಿಶ್ವ ಹಿಂದೂ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಸಂಘಟನೆಗಳಲ್ಲಿನ ವೈವಿಧ್ಯದಿಂದಾಗಿ ವಿವಿಧ ದೇಶಗಳಲ್ಲಿ ಹಿಂದೂಗಳಲ್ಲಿ ಒಗ್ಗಟ್ಟು ಇಲ್ಲವಾಗಿದೆ. ಸಮಾಜದ ಮುಂದಿನ ಸವಾಲುಗಳನ್ನು ಎದುರಿಸಲು ಜಾಗತಿಕವಾಗಿ ಎಲ್ಲ ಹಿಂದೂ ಸಂಘಟನೆಗಳನ್ನು ಬಲಪಡಿಸುವುದು ಅಗತ್ಯ' ಎಂದು ಹೇಳಿದರು.

'ಭಾಷೆ, ವರ್ಗ, ಜಾತಿ, ಉಪ ಜಾತಿ, ಗುರುಗಳ ಹೆಸರಿನಲ್ಲಿ ವಿಶ್ವದ ವಿವಿಧೆಡೆ ಹಿಂದೂಗಳ ಹಲವು ಸಂಸ್ಥೆಗಳು, ಸಂಘಟನೆಗಳು, ವೇದಿಕೆಗಳು ರಚನೆಯಾಗಿವೆ. ಎಲ್ಲವೂ ಸಂಘಟನೆಗಳಲ್ಲಿ ಕಾರ್ಯನಿರತವಾಗಿವೆ. ಆದರೆ, ಈ ವೈವಿಧ್ಯದ ನಡುವೆ ಹಿಂದುತ್ವ ಕಾಣೆಯಾಗಿದೆ. ಆದರೆ, ಈ ಸಂಘಟನೆಗಳು ಮುಖ್ಯ ಉದ್ದೇಶವನ್ನೇ ಮರೆಯಬಾರದು. ಹಲವು ಕಡೆ ಸಂಘಟನೆಗಳಲ್ಲಿನ ವೈವಿಧ್ಯವೇ ಒಗ್ಗಟ್ಟು ಮೂಡದಿರುವುದಕ್ಕೂ ಕಾರಣವಾಗಿದೆ' ಎಂದು ಹೊಸಬಾಳೆ ಹೇಳಿದರು.

ಮತಾಂತರ, ಹಿಂದೂಗಳ ಮಾನವಹಕ್ಕುಗಳ ಉಲ್ಲಂಘನೆ, ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ಭಾಷೆಗಳು ಮತ್ತು ಹಿಂದೂ ಅಧ್ಯಯನ ಪೀಠ ಇಲ್ಲದಿರುವುದು ಸಮಾಜದ ಮುಂದಿರುವ ಕೆಲ ಸವಾಲು ಎಂದರು.

# ಟಿ.ವಿ ಪತ್ರಕರ್ತೆ ಸೌಮ್ಯಾ ಹಂತಕರಿಗೆ ಜೀವಾವಧಿ ಶಿಕ್ಷೆ

ನವದೆಹಲಿ (ಪಿಟಿಐ): ದೆಹಲಿಯಲ್ಲಿ 2008ರಲ್ಲಿ ನಡೆದಿದ್ದ ಟಿ.ವಿ. ಪತ್ರಕರ್ತೆ ಸೌಮ್ಯಾ ವಿಶ್ವನಾಥನ್ ಕೊಲೆ ಪ್ರಕರಣದಲ್ಲಿ ನಾಲ್ವರು ಅಪರಾಧಿಗಳಿಗೆ ಇಲ್ಲಿನ ನ್ಯಾಯಾಲಯ ಶನಿವಾರ ಜೀವಾವಧಿ ಶಿಕ್ಷೆ ವಿಧಿಸಿದೆ. ಐದನೇ ಅಪರಾಧಿಗೆ ಮೂರು ವರ್ಷಗಳ ಜೈಲು ಶಿಕ್ಷೆ ಪ್ರಕಟಿಸಿದೆ.

ಅಪರಾಧಿಗಳಾದ ರವಿ ಕಪೂರ್, ಅಮಿತ್ ಶುಕ್ಲಾ, ಬಲ್ಜೀತ್ ಮಲಿಕ್ ಮತ್ತು ಅಜಯ್ ಕುಮಾರ್‌ಗೆ ಎಂಬುವರಿಗೆ ಜೀವಾವಧಿ ಶಿಕ್ಷೆ ಘೋಷಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ರವೀಂದ್ರ ಕುಮಾರ್ ಪಾಂಡೆ, ಅವರಿಗೆ ತಲಾ ₹1.25 ಲಕ್ಷ ದಂಡವನ್ನೂ ವಿಧಿಸಿದರು.

ಐದನೇ ಅಪರಾಧಿ ಅಜಯ್ ಸೇಥಿಗೆ ಮೂರು ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ ₹7.25 ಲಕ್ಷ ದಂಡ ವಿಧಿಸಲಾಯಿತು. ಆದರೆ, ಸೇಥಿ ಈಗಾಗಲೇ 14 ವರ್ಷಗಳಿಗಿಂತ ಹೆಚ್ಚು ಜೈಲು ಶಿಕ್ಷೆಯನ್ನು ಅನುಭವಿಸಿದ್ದಾನೆ ಎಂಬುದನ್ನು ನ್ಯಾಯಾಲಯ ಹೇಳಿತು.

ಅಪರಾಧಿಗಳಿಗೆ ವಿಧಿಸಲಾದ ಒಟ್ಟು ದಂಡದ ಮೊತ್ತ ₹12 ಲಕ್ಷವನ್ನು ಸಂತ್ರಸ್ತೆಯ ಕುಟುಂಬಕ್ಕೆ ಪಾವತಿಸುವಂತೆ ನ್ಯಾಯಾಲಯ ತಿಳಿಸಿದೆ.

ಈ ಅಪರಾಧವು ಅಪರೂಪದಲ್ಲೇ ಅಪರೂಪವೆನಿಸುವ ಪ್ರಕರಣಗಳ ವರ್ಗಕ್ಕೆ ಸೇರಿಲ್ಲವಾದ್ದರಿಂದ ಮರಣದಂಡನೆ ಕೋರಿಕೆಯನ್ನು ತಿರಸ್ಕರಿಸಲಾಗಿದೆ ಎಂದು ಸೆಷನ್ಸ್ ನ್ಯಾಯಾಧೀಶರು ತೀರ್ಪಿನ ವೇಳೆ ಹೇಳಿದರು.

15 ವರ್ಷಗಳಿಂದ ನ್ಯಾಯಕ್ಕಾಗಿ ಕಾಯುತ್ತಿದ್ದೇನೆ ಎಂದು ವಿಚಾರಣೆ ವೇಳೆ ಸಂತ್ರಸ್ತೆಯ ತಾಯಿ ಮಾಧವಿ ವಿಶ್ವನಾಥನ್ ಅವರು ನ್ಯಾಯಾಲಯಕ್ಕೆ ತಿಳಿಸಿದ್ದರು.

ಇಂಗ್ಲಿಷ್ ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸೌಮ್ಯಾ ವಿಶ್ವನಾಥನ್ ಅವರನ್ನು 2008ರ ಸೆಪ್ಟೆಂಬರ್ 30ರಂದು ಬೆಳಗ್ಗೆ ದಕ್ಷಿಣ ದೆಹಲಿಯ ನೆಲ್ಸನ್ ಮಂಡೇಲಾ ಮಾರ್ಗದಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಕೆಲಸದಿಂದ ಮನೆಗೆ ಮರಳುತ್ತಿದ್ದ ಅವರನ್ನು ದೋಚುವ ಪ್ರಯತ್ನದಲ್ಲಿ ಹತ್ಯೆ ಮಾಡಲಾಗಿತ್ತು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿತ್ತು.

ದರೋಡೆ ಮಾಡಲು ಸೌಮ್ಯ ಅವರ ಕಾರನ್ನು ಹಿಂಬಾಲಿಸಿದ್ದ ಅಪರಾಧಿ ರವಿ ಕಪೂರ್, ನಾಡ ಪಿಸ್ತೂಲಿನಿಂದ ಗುಂಡಿಕ್ಕಿ ಹತ್ಯೆ ಮಾಡಿದ್ದ. ಅಮಿತ್ ಶುಕ್ಲಾ, ಅಜಯ್ ಕುಮಾರ್ ಮತ್ತು ಬಲ್ಜೀತ್ ಮಲಿಕ್ ಕೂಡ ಕಪೂರ್ ಜೊತೆಗಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿತ್ತು.

# ಕರ್ತವ್ಯದಲ್ಲಿದ್ದ ಗೃಹ ರಕ್ಷಕ ಸಾವು

ಬೆಂಗಳೂರು/ಮಂಡ್ಯ: ಮಧ್ಯಪ್ರದೇಶ ಚುನಾವಣೆ ಕರ್ತವ್ಯ ಮುಗಿಸಿ ವಾಪಸು ಬರುತ್ತಿದ್ದ ಸಂದರ್ಭದಲ್ಲಿ ತೀವ್ರ ಅಸ್ವಸ್ಥಗೊಂಡಿದ್ದ ಗೃಹ ರಕ್ಷಕ ಸಿದ್ದು (34) ಅವರು ಶುಕ್ರವಾರ ಮೃತಪಟ್ಟಿದ್ದಾರೆ.

'ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಸಿದ್ದು, 10 ವರ್ಷಗಳಿಂದ ಗೃಹ ರಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಶನಿವಾರ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ' ಎಂದು ಸಹೋದ್ಯೋಗಿಯೊಬ್ಬರು ಹೇಳಿದರು.

'ಮಳವಳ್ಳಿ ಗೃಹರಕ್ಷಕ ತಂಡದಲ್ಲಿದ್ದ ಸಿದ್ದು ಹಾಗೂ ಇತರರನ್ನು ಚುನಾವಣೆ ಕರ್ತವ್ಯಕ್ಕೆಂದು ಮಧ್ಯಪ್ರದೇಶಕ್ಕೆ ಕಳುಹಿಸಲಾಗಿತ್ತು. ಕರ್ತವ್ಯ ಪೂರ್ಣಗೊಂಡ ನಂತರ ಗೃಹರಕ್ಷಕರೆಲ್ಲರೂ ರೈಲಿನಲ್ಲಿ ಬೆಂಗಳೂರು ಮಾರ್ಗವಾಗಿ ಮಂಡ್ಯದತ್ತ ಶುಕ್ರವಾರ ಹೊರಟಿದ್ದರು.'

'ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಸಿದ್ದು, ರೈಲಿನಲ್ಲಿ ನಾಲ್ಕು ಬಾರಿ ವಾಂತಿ ಮಾಡಿಕೊಂಡಿದ್ದರು. ತೀವ್ರ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದರು. ರೈಲು ನಿಲ್ದಾಣ ಸಮೀಪದಲ್ಲಿರುವ ಆಸ್ಪತ್ರೆಗೆ ಅವರನ್ನು ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದರು. ನಂತರ, ಮೃತದೇಹವನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ಸಾಗಿಸಲಾಯಿತು' ಎಂದು ಸಹೋದ್ಯೋಗಿ ತಿಳಿಸಿದರು.

**ಮೂಲ ಸೌಕರ್ಯವಿಲ್ಲದೇ ಪರದಾಟ:** 'ಚುನಾವಣೆ ಕರ್ತವ್ಯಕ್ಕೆ ರಾಜ್ಯದಿಂದ ಹೋಗಿದ್ದ ಸಿಬ್ಬಂದಿಗೆ ಯಾವುದೇ ಮೂಲ ಸೌಕರ್ಯ ಒದಗಿಸಿರಲಿಲ್ಲ. ಈ ಅವ್ಯವಸ್ಥೆಯಿಂದ ಅಸ್ವಸ್ಥರಾಗಿ ಸಿದ್ದು ಮೃತಪಟ್ಟಿದ್ದಾರೆ' ಎಂದು ಸಹೋದ್ಯೋಗಿಗಳು ಆರೋಪಿಸಿದರು.

ಅಗಲಿದ ವೀರ ಯೋಧನಿಗೆ ಅಂತಿಮ ನಮನ • ಅಪಾರ ಜನಸಾಗರ • ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ

# ಹುತಾತ್ಮ ಕ್ಯಾಪ್ಟನ್ ಪ್ರಾಂಜಲ್‌ಗೆ ಕಣ್ಣೀರ ವಿದಾಯ

ಪ್ರಜಾವಾಣಿ ವಾರ್ತೆ

ಆನೇಕಲ್ : ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಉಗ್ರರೊಂದಿಗಿನ ಕಾದಾಟದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರಿಗೆ ಶನಿವಾರ ಕಣ್ಣೀರ ವಿದಾಯ ಹೇಳಲಾಯಿತು.

ಸಾವಿರಾರು ಮಂದಿ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿ ವೀರಯೋಧನಿಗೆ ಅಂತಿಮ ನಮನ ಸಲ್ಲಿಸಿದರು. ಕುಟುಂಬದವರ ನೀರವ ಮೌನದ ನಡುವೆ ಸರ್ಕಾರಿ ಮತ್ತು ಸೇನಾ ಗೌರವಗಳೊಂದಿಗೆ ಬ್ರಾಹ್ಮಣ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನ ನೆರವೇರಿಸಲಾಯಿತು.

ಶನಿವಾರ ಬೆಳಗ್ಗೆ 7ರಿಂದ 11ರವರೆಗೆ ಜಿಗಣಿ ಸಮೀಪದ ನಂದನವದ ಮನೆಯ ಮುಂಭಾಗ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿತ್ತು.

ಚಳಿಯನ್ನೂ ಲೆಕ್ಕಿಸದೆ ಸಹಸ್ರಾರು ಅಭಿಮಾನಿಗಳು ಹುತಾತ್ಮ ಯೋಧನಿಗೆ ಗೌರವ ಸಲ್ಲಿಸಲು ನಂದನವನ ಬಡಾವಣೆಗೆ ಆಗಮಿಸಿದ್ದರು. ವಿವಿಧ ಶಾಲೆಯ ವಿದ್ಯಾರ್ಥಿಗಳು, ಸುತ್ತಮುತ್ತಲ ಗ್ರಾಮಸ್ಥರು, ಅಧಿಕಾರಿಗಳು, ಆಟೊ ರಿಕ್ಷಾ ಚಾಲಕರು, ಕಾರ್ಮಿಕರು ಪುಷ್ಪನಮನ ಸಲ್ಲಿಸಿದರು. ಸಾರ್ವಜನಿಕರ ದರ್ಶನಕ್ಕೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು.

ಪ್ರಾಂಜಲ್ ಪಾರ್ಥಿವ ಶರೀರಕ್ಕೆ ತಂದೆ ವೆಂಕಟೇಶ್ ಸೆಲ್ಯೂಟ್ ಹೊಡೆದು ಗೌರವ ಸೂಚಿಸಿದರು. ಪ್ರಾಂಜಲ್ ತಾಯಿ ಅನುರಾಧ, ಪತ್ನಿ ಅದಿತಿ ಇದ್ದಾರೆ

ಭಾರತೀಯ ಸೇನಾ ಪಡೆ, ಪೊಲೀಸ್, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ ಕೆಡೆಟ್‌ಗಳು ವೀರಯೋಧನಿಗೆ ಗೌರವ ವಂದನೆ ಸಲ್ಲಿಸಿದರು. ಗಾಯಕರು ದೇಶಭಕ್ತಿ ಗೀತೆಗಳ ಮೂಲಕ ಗೌರವ ಸಲ್ಲಿಸಿದರು.

ಪೊಲೀಸ್ ಬ್ಯಾಂಡ್ ಸಿಬ್ಬಂದಿ ರಾಷ್ಟ್ರಗೀತೆ ನುಡಿಸಿದ ನಂತರ ಮೂರು ಸುತ್ತು ಕುಶಾಲ ತೋಪು ಹಾರಿಸಿ ಗೌರವ ಸಮರ್ಪಿಸಲಾಯಿತು. ಪಾರ್ಥಿವ ಶರೀರವನ್ನು ಮನೆಗೆ ಕೊಂಡೊಯ್ದು ಅಲ್ಲಿ ಕುಟುಂಬದವರು ಧಾರ್ಮಿಕ ವಿಧಿ ವಿಧಾನ ನೆರವೇರಿಸಿದರು. ಅಲ್ಲಿಂದ ತೆರೆದ ಮಿಲಿಟರಿ ವಾಹನದಲ್ಲಿ ಅಂತಿಮ ಮೆರವಣಿಗೆ ಹೊರಟಿತು.

ಸೋಮಸುಂದರಪಾಳ್ಯದಲ್ಲಿ ವಿದ್ಯುತ್ ಚಿತಾಗಾರದಲ್ಲಿ 3.10ಕ್ಕೆ ಪ್ರಾಂಜಲ್ ಅಂತ್ಯಕ್ರಿಯೆ ನೆರವೇರಿತು. 'ಭಾರತ್ ಮಾತಾ ಕಿ ಜೈ', 'ವಂದೇ ಮಾತರಂ', 'ಅಮರ್ ರಹೇ ಪ್ರಾಂಜಲ್' ಎಂಬ ಘೋಷಣೆ ಮುಗಿಲು ಮುಟ್ಟಿದ್ದವು.

ಸಂಸದ ಡಿ.ಕೆ.ಸುರೇಶ್, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಎಂ.ಕೃಷ್ಣಪ್ಪ, ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿ ಪುರುಷೋತ್ತಮ್, ಉಪವಿಭಾಗಾಧಿಕಾರಿ ರಜನಿಕಾಂತ್, ತಹಶೀಲ್ದಾರ್ ಶಿವಪ್ಪ ಎಚ್. ಲಮಾಣಿ, ಡಿವೈಎಸ್‌ಪಿ ಮೋಹನ್ ಭಾಗವಹಿಸಿದ್ದರು.

## ಮಳೆಯೊಂದಿಗೆ ಸುರಿದ ಹೂಮಳೆ

ಪ್ರಾಂಜಲ್ ಪಾರ್ಥಿವ ಶರೀರ ಹೊತ್ತ ತೆರೆದ ಮಿಲಿಟರಿ ವಾಹನ ಜಿಗಣಿ ಸಮೀಪದ ಓಟಿಸಿ ಸರ್ಕಲ್‌ಗೆ ಬರುತ್ತಿದ್ದಂತೆಯೇ ತುಂತುರು ಮಳೆ ಆರಂಭವಾಯಿತು. ರಸ್ತೆ ಇಕ್ಕೆಲಗಳಲ್ಲಿ ನಿಂತಿದ್ದ ಅಭಿಯಾನಿಗಳು ಹೂ ಮಳೆಗರೆದರು.

ನಂದನವನ ಬಡಾವಣೆಯಿಂದ ನೈಸ್ ರಸ್ತೆಯವರೆಗೂ ರಸ್ತೆಯ ಬದಿ ನಿಂತಿದ್ದ ವಿದ್ಯಾರ್ಥಿಗಳು, ಸಾರ್ವಜನಿಕರು ವಾಹನ ಬರುತ್ತಿದ್ದಂತೆ ಹೂ ಎರಚಿ ನಮನ ಸಲ್ಲಿಸಿದರು. ರಾಷ್ಟ್ರಧ್ವಜ ಹಿಡಿದ ಯುವಕರು ದ್ವಿಚಕ್ರ ವಾಹನಗಳಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡರು. ಪ್ರತಿ ವೃತ್ತದಲ್ಲೂ ವಿದ್ಯಾರ್ಥಿಗಳು ಬ್ಯಾಂಡ್ ಗೌರವ ಸಲ್ಲಿಸಿದರು.

## ಕಟ್ಟುಮಸ್ತಾದ ದೇಹ: ಪ್ರಾಂಜಲ ಮನಸ್ಸು

'ಪ್ರಾಂಜಲ್ ಕಟ್ಟುಮಸ್ತಾದ ದೇಹ ಹೊಂದಿದ್ದರೂ ಮಾತು ಮಾತ್ರ ಮೃದು. ಪ್ರಾಂಜಲ ಮನಸ್ಸಿನ ವಿನಯವಂತ ಮತ್ತು ಹೃದಯವಂತರಾಗಿದ್ದರು. ಬ್ಯಾಸ್ಕೆಟ್‌ಬಾಲ್ ಆಟಗಾರರಾಗಿದ್ದರು' ಎಂದು ನಿವೃತ್ತ ಯೋಧ ಭಾಸ್ಕರ್ ರೈ ಸ್ಮರಿಸಿದರು.

'ಸುರತ್ಕಲ್‌ನಲ್ಲಿ ಪ್ರತಿದಿನ ನಮ್ಮ ಅಂಗಡಿಗೆ ಬಂದು ಸೇನೆಯ ಮತ್ತು ಕ್ರೀಡೆಯ ಬಗ್ಗೆ ಮಾತನಾಡುತ್ತಿದ್ದರು. ಪರೀಕ್ಷೆಗೆ ತಯಾರಿ ನಡೆಸಿ ಭಾರತೀಯ ಸೇನೆಯಲ್ಲಿ ಅಧಿಕಾರಿಯಾಗಬೇಕು ಎಂಬ ಹಂಬಲ ವ್ಯಕ್ತಪಡಿಸಿದ್ದರು. ಅದರಂತೆ ಉನ್ನತ ಸ್ಥಾನಕ್ಕೇರಿದ್ದರು. ಆದರೆ ವಿಧಿ ಅವರನ್ನು ಬಹು ಬೇಗ ಕರೆದೊಯ್ದಿದೆ' ಎಂದು ಸ್ಮರಿಸಿಕೊಂಡರು.

## ಅಪ್ಪನಿಂದ ಅಂತಿಮ ಸಲ್ಯೂಟ್

ಪ್ರಾಂಜಲ್ ಪಾರ್ಥಿವ ಶರೀರದ ಬಳಿ ಕೊನೆಯವರೆಗೂ ತಂದೆ ವೆಂಕಟೇಶ್, ತಾಯಿ ಅನುರಾಧ ಮತ್ತು ಪತ್ನಿ ಅಧಿತಿ ಹಾಗೂ ಕುಟುಂಬ ವರ್ಗದವರು ಮೌನವಾಗಿ ನಿಂತಿದ್ದರು.
ಸೇನೆ ಮತ್ತು ಪೊಲೀಸರ ಗೌರವವಂದನೆ ಮುಗಿಯುತ್ತಿದ್ದಂತೆ ಎದ್ದು ನಿಂತ ವೆಂಕಟೇಶ್ ತಮ್ಮ ಮಗನಿಗೆ ಸಲ್ಯೂಟ್ ಹೊಡೆದರು.

# ಅರಣ್ಯ ಕಾಯ್ದೆ ಉಲ್ಲಂಘನೆ: ₹10 ಲಕ್ಷದವರೆಗೆ ದಂಡ

ಒಂದನೇ ಪುಟದಿಂದ

**ಚಿರತೆ ರಕ್ಷಣೆ ಕೇಂದ್ರ:** ರಾಜ್ಯದಲ್ಲಿ ಚಿರತೆಗಳು ಜನವಸತಿ ಪ್ರದೇಶಗಳನ್ನು ಪ್ರವೇಶಿಸುತ್ತಿರುವುದು ಹೆಚ್ಚುತ್ತಿರುವುದರಿಂದ ಚಿರತೆ ರಕ್ಷಣಾ ಕೇಂದ್ರಗಳನ್ನು ಹೆಚ್ಚಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ. ಈಗ ಮೈಸೂರಿನಲ್ಲಿರುವ ರಕ್ಷಣಾ ಕೇಂದ್ರದಲ್ಲಿ 17 ಚಿರತೆಗಳಿಗೆ ಮಾತ್ರ ಅವಕಾಶ ಕಲ್ಪಿಸಲು ಸಾಧ್ಯವಿದೆ.

**ಇ–ಆಫೀಸ್ ಕಡ್ಡಾಯ:** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಕೆಳಹಂತದ ಕಚೇರಿಗಳಲ್ಲೂ ಇ–ಆಫೀಸ್ ತಂತ್ರಾಂಶದ ಮೂಲಕ ಕಡತ ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಬೇಕು. ಇ–ಆಡಳಿತ ಅನುಷ್ಠಾನಕ್ಕೆ ಕಾಲಮಿತಿ ನಿಗದಿಪಡಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಇ–ಸಂಗ್ರಹಣಾ ಪೋರ್ಟಲ್‌ನಲ್ಲಿರುವ ಎಲ್ಲ ಟೆಂಡರ್ ದಾಖಲೆಗಳನ್ನು ಸಾರ್ವಜನಿಕ ಡೊಮೈನ್ ಒಂದರಲ್ಲಿ ಅಪ್‌ಲೋಡ್ ಮಾಡಬೇಕು. ಮಾಹಿತಿ ಹಕ್ಕು ಕಾಯ್ದೆಯಡಿ ಸಾರ್ವಜನಿಕರು ಶುಲ್ಕ ಪಾವತಿಸಿ ಪಡೆಯುವ ಬದಲು ಮುಕ್ತವಾಗಿ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ 2.16 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಬಾಕಿ ಉಳಿಸಿಕೊಂಡಿದೆ. ವಸತಿ ಇಲಾಖೆಯು ಮಂಡಳಿಗೆ ಹಕ್ಕುಪತ್ರ ವಿತರಣೆಗೆ ಸಂಬಂಧಿಸಿದಂತೆ ವಾರ್ಷಿಕ ಮತ್ತು ಮಾಸಿಕ ಗುರಿ ನಿಗದಿಪಡಿಸಬೇಕು ಎಂದು ಆಯೋಗ ಹೇಳಿದೆ.

## ಭೂ ಪರಿವರ್ತನೆ ಸರಳೀಕರಣಕ್ಕೆ ಶಿಫಾರಸು

ವಸತಿ ಮತ್ತು ವಾಣಿಜ್ಯ ಉದ್ದೇಶಗಳಿಗೆ 10 ಎಕರೆ ಅಥವಾ 20,000 ಚದರ ಅಡಿಗಳಷ್ಟು ವಿಸ್ತೀರ್ಣದವರೆಗಿನ ಕೃಷಿ ಜಮೀನನ್ನು ಪರಿವರ್ತಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದನ್ನು ಕೈಬಿಡಬೇಕು ಎಂದು ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದೆ.

'ವಸತಿ ಮತ್ತು ವಾಣಿಜ್ಯ ಉದ್ದೇಶದ ಭೂ ಪರಿವರ್ತನೆ ಪ್ರಕ್ರಿಯೆಯನ್ನು ಸರಳೀಕರಣ ಮಾಡಲು ಈ ಕ್ರಮ ಅಗತ್ಯ. ಕೈಗಾರಿಕಾ ಉದ್ದೇಶದ ಭೂ ಪರಿವರ್ತನೆಗೆ ಮಾತ್ರ ನಿರಾಕ್ಷೇಪಣ ಪತ್ರ ಪಡೆಯುವಂತಿರಬೇಕು' ಎಂದು ವರದಿಯಲ್ಲಿ ತಿಳಿಸಿದೆ.

**ತುಂಡು ಗುತ್ತಿಗೆ:** ಕುಡಿಯುವ ನೀರು ಪೂರೈಕೆ, ಭದ್ರತಾ ಬ್ಯಾರಿಕೇಡ್ ಅಳವಡಿಕೆ, ರಸ್ತೆ ಗುಂಡಿ ಮುಚ್ಚುವುದು, ವಿದ್ಯುತ್ ಪೂರೈಕೆ ಪುನರಾರಂಭ ಸೇರಿದಂತೆ ತುರ್ತು ಕೆಲಸಗಳಿಗೆ ₹2 ಲಕ್ಷದವರೆಗಿನ ಕಾಮಗಾರಿಗಳನ್ನು ತುಂಡು ಗುತ್ತಿಗೆಯಡಿ ಕೈಗೊಳ್ಳುವ ಅಧಿಕಾರವನ್ನು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಿಗೆ ನೀಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

# ಜಾತಿ ಗಣತಿ ವರದಿಗೆ 'ಅಹಿಂದ' ಪಟ್ಟು

ಒಂದನೇ ಪುಟದಿಂದ

ದಾವಣಗೆರೆ ಅಥವಾ ಚಿತ್ರದುರ್ಗದಲ್ಲಿ ಡಿ. 30ರಂದು ಸುಮಾರು 10 ಲಕ್ಷ ಜನರನ್ನು ಸೇರಿಸಿ 'ಅಹಿಂದ' (ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಸಮಾವೇಶ ಹಮ್ಮಿಕೊಂಡು, ಶಕ್ತಿ ಪ್ರದರ್ಶನ ಮಾಡಲು ಕೂಡಾ ತೀರ್ಮಾನಿಸಲಾಗಿದೆ.

ಸಭೆಯಲ್ಲಿ ಮಾತನಾಡಿದ ಕೆ. ರಾಮಚಂದ್ರಪ್ಪ, 'ಪ್ರಬಲ ಜಾತಿಗಳು ನೂರಾರು ವರ್ಷದಿಂದ ನಮ್ಮ ಮೇಲೆ ಸವಾರಿ ಮಾಡುತ್ತಾ ಬರುತ್ತಿವೆ. ಅಧಿಕಾರದಲ್ಲಿ ಇರುವವರಿಗೆ ಈಗಲೂ ಸಂವಿಧಾನಬದ್ಧ ಸವಲತ್ತುಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಪ್ರಬಲ ಸಮುದಾಯದವರಿಗೆ ನಾವು (ಹಿಂದುಳಿದವರು) ಸರಿಸಮಾನವಾಗಿ ಬಂದರೆ ನಮ್ಮ ಸೇವೆ ಮಾಡಲು ಯಾರು ಇರುವುದಿಲ್ಲ ಎಂಬ ಆತಂಕ ಎದುರಾಗಿದೆ. ನಮ್ಮಲ್ಲಿ ಒಗ್ಗಟ್ಟು ಇಲ್ಲ. ಪ್ರಬಲ ಜಾತಿಯವರು ನಮ್ಮನ್ನು ತುಳಿಯುತ್ತಿದ್ದಾರೆ. ಅದನ್ನು ತಡೆಯಲು ಜಾಗೃತಿ ಮೂಡಿಸಬೇಕು' ಎಂದರು.

'ಜಾತಿ ಜನಗಣತಿಯ ಮೂಲ ಪ್ರತಿ ಕಳೆದು ಹೋಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಕಳವು ಆಗಿದ್ದರೆ ಅವರ ಅವಧಿಯಲ್ಲೇ ಕಳವು ಆಗಿರಬೇಕು. ಮಾಜಿ ಮುಖ್ಯಮಂತ್ರಿ ವಿರುದ್ಧ ಇತ್ತೀಚೆಗೆ ವಿದ್ಯುತ್ ಕಳವು ಆರೋಪ ಬಂದಿತ್ತು. ಹೀಗಾಗಿ ಅವರೇ ಜಾತಿ ಜನಗಣತಿ ವರದಿಯ ಮೂಲ ಪ್ರತಿಯನ್ನೂ ಕಳವು ಮಾಡಿರಬೇಕು' ಎಂದರು.

'ವರದಿ ಸ್ವೀಕರಿಸುವುದಕ್ಕೆ ಉಪ ಮುಖ್ಯಮಂತ್ರಿ ಕೂಡ ವಿರೋಧ ವ್ಯಕ್ತಪಡಿಸಿದ್ದಾರೆ. ಅವರು ರಾಜ್ಯದ ಉಪಮುಖ್ಯಮಂತ್ರಿಯೇ ಅಥವಾ ಒಂದು ಸಮುದಾಯದ ಉಪಮುಖ್ಯಮಂತ್ರಿಯೇ? ಒಬ್ಬ ಸಚಿವರೂ ಕೂಡ ವರದಿ ವಿರೋಧಿಸಿ ಸಹಿ ಹಾಕಿದ್ದಾರೆ. ಸಂವಿಧಾನದ ಮೇಲೆ ಪ್ರಮಾಣ ಮಾಡಿದವರು ಸ್ವಜನ ಪಕ್ಷಪಾತ ಮಾಡಬಾರದು. ಅವರಿಗೆ (ಡಿ.ಕೆ. ಶಿವಕುಮಾರ್) ಉಪಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಲು ಯಾವ ನೈತಿಕತೆ ಇದೆ. ಅವರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

'ಮುಸ್ಲಿಮರಿಗೆ ವೀರಪ್ಪ ಮೊಯಿಲಿಯವರು ಶೇ 4 ಮೀಸಲಾತಿ ನೀಡಿದ್ದಾರೆ. ದೇವೇಗೌಡರು ಮುಸ್ಲಿಂ ಮೀಸಲಾತಿ ನೀಡಿಲ್ಲ, ಅವರು ಅಧಿಸೂಚನೆ ಮಾತ್ರ ಹೊರಡಿಸಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಶೇ 7ರಷ್ಟು ಮೀಸಲಾತಿ ನೀಡಬೇಕು' ಎಂದು ಮುಸ್ಲಿಂ ಮುಖಂಡ ಮೆಹಬೂಬ್ ಪಾಷಾ ಆಗ್ರಹಿಸಿದರು.

'ನಮಗೆ ಪ್ರಥಮ ಶತ್ರುಗಳು ನಮ್ಮ ಪಕ್ಷದವರೇ. ನಮ್ಮಿಂದ ಗೆದ್ದವರೇ ಜಾತಿ ಜನಗಣತಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಯಾರಿಂದ ಗೆದ್ದಿದ್ದೀರಿ ಎಂಬುದನ್ನು ಅವರಿಗೆ ಮನವರಿಕೆ ಮಾಡಬೇಕು. ಈ ಬಗ್ಗೆ ನಿರಂತರ ಹೋರಾಟ ಮಾಡಬೇಕು' ಎಂದು 'ಅಹಿಂದ' ನಾಯಕರು ಆಗ್ರಹಿಸಿದರು.

## ವರದಿಗೆ ವೀರಶೈವ–ಲಿಂಗಾಯತರ ವಿರೋಧ

'ಕಾಂತರಾಜ ವರದಿ ವಿರುದ್ಧ ಒಕ್ಕಲಿಗರಂತೆ ನಾವು ಕೂಡಾ ಸಹಿ ಮಾಡಿ, ಮುಖ್ಯಮಂತ್ರಿಗೆ ಮನವಿ ಸಲ್ಲಿಸುತ್ತೇವೆ. ಬಿಜೆಪಿ, ಜೆಡಿಎಸ್‌ನವರೂ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ವರದಿ ಕುರಿತು ಈಗಾಗಲೇ ಮೌಖಿಕವಾಗಿ ಮುಖ್ಯಮಂತ್ರಿ ಬಳಿ ಚರ್ಚೆ ನಡೆಸಿದ್ದೇವೆ' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ವರದಿ ಸೋರಿಕೆ ಆಗಿದೆ. ಹೀಗಾಗಿ, ನಾವು ವಿರೋಧ ಮಾಡುತ್ತಿದ್ದೇವೆ. ಅದರಲ್ಲಿ ಲಿಂಗಾಯತ ವೀರಶೈವ ಎಂದು ಬರೆದುಕೊಂಡೇ ಇಲ್ಲ. ಅನೇಕ ಲೋಪದೋಷಗಳಿವೆ. ಈ ಸಮೀಕ್ಷಾ ವರದಿಗೆ ನಾವೂ ಸೇರಿ ಅನೇಕರ ವಿರೋಧವಿದೆ' ಎಂದರು.

'ಮನೆ ಮನೆಗೆ ಹೋಗಿ ಸಮೀಕ್ಷೆ ಮಾಡಬೇಕು. ಎಲ್ಲೊ ಕುಳಿತು ಸಮೀಕ್ಷೆ ಮಾಡುವುದಲ್ಲ. ಪ್ರತ್ಯೇಕ ಲಿಂಗಾಯತ ಧರ್ಮ ಎಂದು ಹೋದವರೆಲ್ಲ ಸೋತರು. ಲಿಂಗಾಯತ ಎಂದು ಹೋದವರೆಲ್ಲ ನೆಲ ಕಚ್ಚಿದರು. ಮೂಲ ವರದಿ ಕೊಟ್ಟಿದ್ದೇವೆಂದು ಆಯೋಗದ ಹಿಂದಿನ ಅಧ್ಯಕ್ಷ ಎಚ್. ಕಾಂತರಾಜ ಹೇಳುತ್ತಿದ್ದಾರೆ. ಆದರೆ, ಆ ವರದಿ ನಾಪತ್ತೆಯಾಗಿದೆ' ಎಂದರು.

'ಲೋಕಸಭಾ ಚುನಾವಣೆಗೆ ಜಾತಿ ಜನಗಣತಿ ಹಿನ್ನಡೆ ಆಗಬಹುದೇ' ಎಂಬ ಪ್ರಶ್ನೆಗೆ 'ಈ ಹಿಂದೆ ಪ್ರತ್ಯೇಕ ಧರ್ಮ ವಿಚಾರದಲ್ಲಿ ಆದಂತೆಯೇ ಶೇ 100ರಷ್ಟು ತೊಂದರೆ ಆಗಲಿದೆ' ಎಂದು ಅಭಿಪ್ರಾಯಪಟ್ಟರು.

**ಬಸವರಾಜ ರಾಯರಡ್ಡಿ ತಿರುಗೇಟು:** ಜಾತಿ ವಿಚಾರ ಮಾತನಾಡಿದ್ದು ತಪ್ಪು ಎಂದಿದ್ದ ಬಸವರಾಜ ರಾಯರಡ್ಡಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಾಮನೂರು ಶಿವಶಂಕರಪ್ಪ, 'ಅವನು ಹಿಂದೆಯೂ ಹೀಗೆ ಏನೇನೊ ಮಾತನಾಡಿದ್ದ. ಸಚಿವ ಸಂಪುಟದಿಂದ ಹೊರಗೆ ಇರುವುದಕ್ಕೆ ಏನೇನೊ ಮಾತನಾಡುತ್ತಿದ್ದಾನೆ. ಬರೀ ಲಿಂಗಾಯತ ಎಂದು ಹೋದವರೆಲ್ಲ ನೆಲ ಕಚ್ಚಿದ್ದಾರೆ' ಎಂದರು.

ಆನ್‌ಲೈನ್- ಆಫ್‌ಲೈನ್ ಗೇಮ್‌ಗಳಿಂದ ಸಾಲದ ಸುಳಿಗೆ ಸಿಲುಕಿದ್ದರು

# ಕಂಟೋನ್ಮೆಂಟ್ ಬೋರ್ಡ್ ಸಿಇಒ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ದಂಡು ಮಂಡಳಿ (ಕಂಟೋನ್ಮೆಂಟ್ ಬೋರ್ಡ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆನಂದ (40) ತಮ್ಮ ಸರ್ಕಾರಿ ನಿವಾಸದಲ್ಲಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಶವದ ಬಳಿ ವಿಷದ ಬಾಟಲಿ ಹಾಗೂ ಡೆತ್‌ನೋಟ್ ಸಿಕ್ಕಿದೆ.

2015ರ ಬ್ಯಾಚ್‌ನ ಇಂಡಿಯನ್ ಡಿಫೆನ್ಸ್ ಎಸ್ಟೇಟ್ ಸರ್ವಿಸ್ (ಐಡಿಇಎಸ್) ಅಧಿಕಾರಿಯಾಗಿದ್ದ ಆನಂದ ಒಂದೂವರೆ ವರ್ಷದಿಂದ ಬೆಳಗಾವಿ ದಂಡು ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿದ್ದರು. ತಮಿಳುನಾಡಿನ ಚೆನ್ನೈನವರಾದ ಅವರು ಅವಿವಾಹಿತರಾಗಿದ್ದು, ಕ್ಯಾಂಪ್ ಪ್ರದೇಶದ ಸರ್ಕಾರಿ ಬಂಗಲೆಯಲ್ಲಿ ವಾಸವಿದ್ದರು.

'ಆನಂದ ಅವರು ಆನ್‌ಲೈನ್ ಆಫ್‌ಲೈನ್ ಗೇಮ್‌ನಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಂದೆ, ತಾಯಿಗೆ ಬರೆದಿರುವ 'ಡೆತ್‌ನೋಟ್'ನಲ್ಲಿ ಹೇಳಿದ್ದಾರೆ' ಎಂದು ಪೊಲೀಸರು ಖಚಿತಪಡಿಸಿದ್ದಾರೆ.

ಕೆ.ಆನಂದ

'ಆನ್‌ಲೈನ್ ಹಾಗೂ ಆಫ್‌ಲೈನ್ ಗೇಮ್‌ನಿಂದ ನಾನು ಸಾಕಷ್ಟು ಹಣ ಕಳೆದುಕೊಂಡಿದ್ದೇನೆ. ವಿಪರೀತ ಆಗಿರುವ ಸಾಲವನ್ನು ತೀರಿಸಲು ಸಾಧ್ಯವಾಗುತ್ತಿಲ್ಲ. ನಾನು ಈ ಜಗತ್ತು ಬಿಟ್ಟು ಹೋಗುವ ಸಮಯ ಬಂದಿದೆ. ಇದಕ್ಕಿಂತ ಸುಂದರ ಜಗತ್ತಿಗೆ ಹೋಗುತ್ತಿದ್ದೇನೆ. ಸಾಧ್ಯವಾದರೆ ನನ್ನನ್ನು ಕ್ಷಮಿಸಿ' ಎಂದು ಅವರು ಇಂಗ್ಲಿಷ್‌ನಲ್ಲಿ ಬರೆದು, ಕೊನೆಗೆ ಸಹಿ ಮಾಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಗುರುವಾರ ಸಂಜೆ ಮಲಗುವ ಕೋಣೆಗೆ ಹೋದವರು, ಮತ್ತೆ ಹೊರ ಬರಲಿಲ್ಲ. ಮೊಬೈಲ್ ಕರೆಗೂ ಸ್ಪಂದಿಸದಿರುವ ಬಗ್ಗೆ ಶನಿವಾರ ಬೆಳಿಗ್ಗೆ ಮನೆಗೆಲಸದವರು ದಂಡು ಮಂಡಳಿಯ ಮಾಜಿ ಉಪಾಧ್ಯಕ್ಷ ಸಾಜಿದ್ ಶೇಖ್ ಅವರಿಗೆ ವಿವರಿಸಿದರು. ಅವರ ಮಾಹಿತಿ ಆಧಾರದ ಬಾಗಿಲು ಮುರಿದು ಒಳಹೋದಾಗಲೇ ಮೃತದೇಹ ಪತ್ತೆಯಾಗಿದೆ' ಎಂದು ಕ್ಯಾಂಪ್ ಠಾಣೆ ಪೊಲೀಸರು ತಿಳಿಸಿದರು.

## 'ಖುಷಿಯಿಂದ ಸಾಯುವುದು ಹೇಗೆ?'

'ಖುಷಿಯಿಂದ ಸಾಯುವುದು ಹೇಗೆ' ಎಂಬ ಬಗ್ಗೆ ಆನಂದ ಅವರು ಲ್ಯಾಪ್ ಟಾಪ್‌ನಲ್ಲಿ ಗೂಗಲ್ ಮೂಲಕ ಹುಡುಕಾಟ ನಡೆಸಿದ್ದಾರೆ. ಕೆಲ ವಿಡಿಯೊಗಳನ್ನೂ ನೋಡಿದ್ದಾರೆ. ನಂತರ ವಿಷ ಕುಡಿದಿರಬಹುದು. ಈ ಎಲ್ಲ ದಾಖಲೆ ಆಧರಿಸಿ, ಅದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ಪೊಲೀಸರು ತಿಳಿಸಿದ್ದಾರೆ.

ಆನಂದ ಅವರ ತಂದೆ ಕೆ. ಕಾಂಗರಾಜ್ ಚೆನ್ನೈನಲ್ಲಿದ್ದು, ಅವರಿಗೆ ವಿಷಯ ತಿಳಿಸಲಾಗಿದೆ. ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಶವವನ್ನು ಚೆನ್ನೈಗೆ ಕಳುಹಿಸಲಾಗುವುದು' ಎಂದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ನಗರ ಪೊಲೀಸ್ ಕಮಿಷನರ್ ಎಸ್.ಎನ್.ಸಿದ್ರಾಮಪ್ಪ, 'ಆನಂದ ಅವರ ಹಾಸಿಗೆ ಮೇಲೆ ವಿಷದ ಬಾಟಲಿ ಮತ್ತು ಡೆತ್‌ನೋಟ್ ಸಿಕ್ಕಿದೆ. ಅವು ಸೇರಿ ಅಗತ್ಯ ಸಾಕ್ಷ್ಯಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದರು.

'ಆನಂದ ಅವರ ಮುಖದ ಮೇಲೆ ಅಲ್ಪಪ್ರಮಾಣದ ರಕ್ತಸ್ರಾವ ಕಂಡುಬಂದಿದೆ. ಹಾಸಿಗೆ ಮೇಲಿನಿಂದ ಅವರು ಕೆಳಗೆ ಬಿದ್ದಿರಬಹುದು. ಅವರ ಕೋಣೆಯೊಳಗೆ ಯಾರೂ ಒತ್ತಾಯದಿಂದ ಪ್ರವೇಶಿಸಿದ್ದು ತನಿಖೆಯಲ್ಲಿ ಕಂಡುಬಂದಿಲ್ಲ' ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ರೋಹನ್ ಜಗದೀಶ ತಿಳಿಸಿದರು.

ಸಿಬಿಐ ತನಿಖೆ ನಡೆಸಿತ್ತು: ದಂಡು ಮಂಡಳಿಯಲ್ಲಿ ಎರಡು ವರ್ಷಗಳ ಹಿಂದೆ ನಡೆದ 17 ಸಿಬ್ಬಂದಿಯ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ನವೆಂಬರ್ 18ರಂದು ಸಿಬಿಐ ಅಧಿಕಾರಿಗಳ ತಂಡ ದಾಳಿ ಮಾಡಿ, ಪರಿಶೀಲನೆ ನಡೆಸಿತ್ತು.

## ಮುಂಬೈ ಧಾರಣೆ

**ಶೇಂಗಾ**

25-11-2023

| | |
|---|---|
| ಜಾವಾ 70/80(ಹೊಸ) | 11000-11100 |
| ಜಾವಾ 80/90(ಹೊಸ) | 10400-10500 |
| ದಪ್ಪ ಮಧ್ಯಪ್ರದೇಶ(ಹೊಸ) | 9900-10000 |
| ದಪ್ಪ ಗುಜರಾತ್(ಹೊಸ) | 10600-10700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1590 (1590) |
| ಒಂದು ವಾರದ ಡೆಲಿವರಿ | 1585 (1585) |
| ಸೋಯಾ ಕಚ್ಚಾ | 935 (935) |
| ಪಾಮ್ ವಾರದ ಡೆಲಿವರಿ | 839 (844) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 910 (910) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ 61,400 (61,100)

ಬೆಳ್ಳಿ ಕೆ.ಜಿ 74,000 (73,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ಎಫ್‌ಪಿಐ ಒಳಹರಿವಿನ ನಿರೀಕ್ಷೆ

ಪ್ರಜಾವಾಣಿ ವಾರ್ತೆ




**ಬೆಂಗಳೂರು:** ವಿದೇಶಿ ಬಂಡವಾಳ ಹೂಡಿಕೆದಾರರನ್ನು ಮತ್ತೆ ಷೇರುಗಳ ಖರೀದಿಗೆ ಆಕರ್ಷಿಸುವಂತಹ ವಿದ್ಯಮಾನಗಳು ಈಚೆಗೆ ನಡೆಯುತ್ತಿವೆ. ಅದರಲ್ಲಿ ಮುಖ್ಯವಾಗಿರುವುದು ಅಮೆರಿಕದಲ್ಲಿ ಹಣದುಬ್ಬರ ಇಳಿಕೆ ಕಂಡಿರುವುದು ಮತ್ತು ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ಕಡಿಮೆ ಆಗಿರುವುದು.

ಈಚೆಗೆ ಅಮೆರಿಕದಲ್ಲಿ ಹಣದುಬ್ಬರದ ಮಾಹಿತಿ ಬಿಡುಗಡೆ ಆಗಿದ್ದು, ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 3.7ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ ಶೇ 3.2ಕ್ಕೆ ಇಳಿಕೆ ಕಂಡಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆ ಪ್ರವೃತ್ತಿಗೆ ಅಂತ್ಯ ಹಾಡುವ ಭರವಸೆಯನ್ನು ಇದು ನೀಡಿದೆ. ಇನ್ನು, ಅಮೆರಿಕದ 10 ವರ್ಷಗಳ ಬಾಂಡ್ ಮೇಲಿನ ಹೂಡಿಕೆಯಿಂದ ಬರುವ ಲಾಭವು ಅಕ್ಟೋಬರ್‌ನಲ್ಲಿ ಇದ್ದ ಶೇ 5ರ ಗರಿಷ್ಠ ಮಟ್ಟದಿಂದ ಸದ್ಯ ಶೇ 4.44ಕ್ಕೆ ಇಳಿಕೆ ಕಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮಾರಾಟ ಮಾಡುವ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ಗುರುವಾರದ ಮತ್ತು ಶುಕ್ರವಾರದ ವಹಿವಾಟಿನಲ್ಲಿ ಒಟ್ಟು ₹2,880 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಮತ್ತೆ ಅವರು ಹೂಡಿಕೆ ಮಾಡಲಿರುವ ಸೂಚನೆಯನ್ನು ಇದು ನೀಡುತ್ತಿದೆ.

'ಸದ್ಯ ಷೇರುಪೇಟೆಯಲ್ಲಿ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಭರಾಟೆ ಜೋರಾಗಿದೆ. ಹೀಗಾಗಿ ಹೂಡಿಕೆದಾರರು ಅತ್ತ ಗಮನ ಹರಿಸಿರುವುದರಿಂದ ಈ ವಾರ ಲಾಭ ಗಳಿಕೆಯ ವಹಿವಾಟು ನಡೆದು, ಗ್ರಾಹಕ ಬಳಕೆ ವಸ್ತುಗಳು ಮತ್ತು ರಿಯಾಲ್ಟಿ ವಲಯ ನಷ್ಟ ಕಾಣುವಂತಾಯಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

## 'ಅಭ್ಯುದಯ ಕೋ–ಆಪರೇಟಿವ್ ಬ್ಯಾಂಕ್ ಎನ್‌ಪಿಎ ಶೇ 12'

**ಮುಂಬೈ (ಪಿಟಿಐ):** ಅಭ್ಯುದಯ ಕೋ–ಆಪರೇಟಿವ್ ಬ್ಯಾಂಕ್‌ನ ವಸೂಲಾಗದ ಸಾಲದ ಪ್ರಮಾಣವು (ಎನ್‌ಪಿಎ) ಶೇ 12ಕ್ಕೆ ಏರಿಕೆ ಕಂಡಿದೆ ಎಂದು ಮೂಲಗಳು ಹೇಳಿವೆ.

ಬ್ಯಾಂಕ್‌ನ ವೆಚ್ಚ ಮತ್ತು ಆದಾಯದ ನಡುವಣ ಅನುಪಾತವು ಶೇ 80ರವರೆಗೆ ಏರಿಕೆ ಕಂಡಿದೆ ಎಂದೂ ತಿಳಿಸಿವೆ. ಬ್ಯಾಂಕ್‌ನ ಆಡಳಿತ ವ್ಯವಸ್ಥೆಯು ದುರ್ಬಲ ಆಗಿದೆ ಎಂದು ಅದರ ಆಡಳಿತ ಮಂಡಳಿಯನ್ನು ಒಂದು ವರ್ಷದವರೆಗೆ ಆರ್‌ಬಿಐ ಶುಕ್ರವಾರ ಸೂಪರ್‌ಸೀಡ್ ಮಾಡಿದೆ. ಬ್ಯಾಂಕ್‌ನ ಕಾರ್ಯನಿರ್ವಹಣೆಗಾಗಿ ಆಡಳಿತಾಧಿಕಾರಿಯನ್ನೂ ನೇಮಿಸಿದೆ.

ಮೂಲಗಳ ಪ್ರಕಾರ, ಅಧ್ಯಕ್ಷ ಸಂದೀಪ್ ಘನದಾಟ್ ನೇತೃತ್ವದ ಮಂಡಳಿಯು ಮಹಾರಾಷ್ಟ್ರದ ಪರ್ಬಣಿ ಜಿಲ್ಲೆಯಲ್ಲಿ ಜನರ ಮತ ಸೆಳೆಯಲು ಅಗತ್ಯಕ್ಕಿಂತಲೂ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದೆ.

2022–23ನೇ ಹಣಕಾಸು ವರ್ಷದಲ್ಲಿ ಬ್ಯಾಂಕ್ ಕಾರ್ಯಾಚರಣಾ ಲಾಭ ಗಳಿಸಿತ್ತು. ಚಾಲ್ತಿ ಮತ್ತು ಉಳಿತಾಯ ಖಾತೆಯಲ್ಲಿಯೂ ಸಾಕಷ್ಟು ಠೇವಣಿ ಇತ್ತು. ನಗದು ಲಭ್ಯತೆ ಪ್ರಮಾಣವನ್ನೂ ಕಾಯ್ದುಕೊಂಡಿತ್ತು. ಇದೀಗ ಎನ್‌ಪಿಎ ಏರಿಕೆ ಕಂಡಿರುವುದು ಗ್ರಾಹಕರಲ್ಲಿ ಕಳವಳಕ್ಕೆ ಕಾರಣವಾಗಿದೆ.

ಆಡಳಿತಾಧಿಕಾರಿಯ ತಂಡವು ಎನ್‌ಪಿಎ ಸರಿಪಡಿಸುವ ಮತ್ತು ಆಡಳಿತದಲ್ಲಿ ಸುಧಾರಣೆ ತರುವ ಕೆಲಸ ಮಾಡಲಿದೆ ಎಂದೂ ಮೂಲಗಳು ಹೇಳಿವೆ.

**ಖಾದ್ಯ ತೈಲ ಮುಂಬೈ (10 ಕೆಜಿಗೆ)**

| | |
|---|---|
| ಶೇಂಗಾ (ರಿಫೈಂಡ್) | ₹1580 (1580) |
| ಸೋಯಾ (ರಿಫೈಂಡ್) | ₹955 (957) |
| ಸೂರ್ಯಕಾಂತಿ (ರಿಫೈಂಡ್) | ₹950 (960) |
| ಪಾಮೋಲಿನ್ | ₹837 (842) |

**ಎನ್.ಆರ್.ಪುರ ರಬ್ಬರ್**

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹150.50 |
| ಆರ್‌ಎಸ್‌ಎಸ್-5 | ₹146.50 |
| ಗುಡ್ ಲಾಟ್ | ₹130.50 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

ಬೆಂಗಳೂರು

| | |
|---|---|
| 100 ಮೊಟ್ಟೆಗೆ | ₹550 |
| 12 ಮೊಟ್ಟೆಗೆ | ₹75 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹288-458 |
| ದ್ವಿತಳಿ (ಬಿ.ವಿ) | ₹365-609 |

### ಎಂಎಫ್: 45ಕ್ಕೂ ಅಧಿಕ ವಯಸ್ಸಿನವರ ಭಾಗವಹಿಸುವಿಕೆಯೇ ಹೆಚ್ಚು

# ಹೂಡಿಕೆಯತ್ತ ಮಹಿಳೆ ಒಲವು

• ವಿಶ್ವನಾಥ ಎಸ್.







**ಬೆಂಗಳೂರು:** ದೇಶದ ಮ್ಯೂಚುವಲ್ ಫಂಡ್ ಉದ್ಯಮದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುತ್ತಿದೆ. ಮಹಿಳೆಯರಲ್ಲಿ ಆರ್ಥಿಕ ಸಾಕ್ಷರತೆ ಹೆಚ್ಚಾಗುತ್ತಿದೆ. ದುಡಿಯುವ ವರ್ಗಕ್ಕೆ ಸೇರುವವರ ಸಂಖ್ಯೆಯಲ್ಲಿ ಏರಿಕೆ ಆಗುತ್ತಿದೆ. ಈ ಕಾರಣಗಳಿಂದಾಗಿ ಮಹಿಳೆಯರು ಸಾಂಪ್ರದಾಯಿಕ ಹೂಡಿಕೆಯ ಮಾರ್ಗಗಳಿಂದಾಚೆಗೆ ಬರುವಂತೆ ಆಗುತ್ತಿದೆ.

ಕೌಟುಂಬಿಕ ಉಳಿತಾಯ ಆರಂಭ ಆಗುವುದೇ ಮಹಿಳೆಯರಿಂದ. ಅಡುಗೆ ಮನೆಯ ಮಸಾಲೆ ಡಬ್ಬಿಗಳಲ್ಲಿ ಆಗಾಗ್ಗೆ ಅಷ್ಟಿಷ್ಟು ಕೂಡಿಡುತ್ತಿದ್ದ ಅವರ ಪ್ರವೃತ್ತಿಯು ಇದೀಗ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಷ್ಟರ ಮಟ್ಟಿಗೆ ಬೆಳೆದಿದೆ. ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್‌ಐ) ವರದಿಯ ಪ್ರಕಾರ, 2019ರ ಡಿಸೆಂಬರ್‌ನಲ್ಲಿ ಮಹಿಳಾ ಹೂಡಿಕೆದಾರರ ಸಂಖ್ಯೆ 46.99 ಲಕ್ಷ ಇತ್ತು. ಇದು 2022ರ ಡಿಸೆಂಬರ್ ಅಂತ್ಯದ ವೇಳೆಗೆ 74.49 ಲಕ್ಷಕ್ಕೆ ಏರಿಕೆ ಆಗಿದೆ.

'45 ವರ್ಷ ಮತ್ತು ಅದಕ್ಕೂ ಹೆಚ್ಚಿನ ವಯಸ್ಸಿನವರು ಮ್ಯೂಚುವಲ್ ಫಂಡ್‌ಗಳಲ್ಲಿ ಹೆಚ್ಚಾಗಿ ಹೂಡಿಕೆ ಮಾಡುತ್ತಿದ್ದಾರೆ. ಮಕ್ಕಳ ಶಿಕ್ಷಣ, ಮದುವೆಯು ಮಹಿಳಾ ಹೂಡಿಕೆದಾರರ ಪ್ರಮುಖ ಹಣಕಾಸು ಗುರಿಗಳಾಗಿವೆ ಎನ್ನುವುದು ಜಿಯೋಜಿತ್ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದರು.

> **ಮಹಿಳೆ ಎಷ್ಟೇ ವಿದ್ಯಾವಂತೆ ಆಗಿದ್ದರೂ ಹೂಡಿಕೆ ನಿರ್ಧಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳುತ್ತಿಲ್ಲ. ಈಗಲೂ ತಂದೆ, ಪತಿ, ಮಗನ ಮೇಲೆ ಅವಲಂಬಿಸಿದ್ದಾಳೆ**
>
> **ವಿ.ಕೆ. ವಿಜಯಕುಮಾರ್,** ಮುಖ್ಯ ಹೂಡಿಕೆ ತಜ್ಞ, ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್

'ದುಡಿಯುವ ವರ್ಗಕ್ಕೆ ಸೇರುತ್ತಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದಾಗಿ ಮಹಿಳೆಯರ ಆದಾಯದಲ್ಲಿ ಏರಿಕೆ ಆಗುತ್ತಿದೆ. ಈ ಕಾರಣದಿಂದಾಗಿಯೇ ಹೂಡಿಕೆ ಮಾಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ' ಎನ್ನುವುದು ಎಲ್‌ಐಸಿ ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನ ಈಕ್ವಿಟಿ ಸಂಶೋಧನೆಯ ಹಿರಿಯ ವಿಶ್ಲೇಷಕ ಜೈಪ್ರಕಾಶ್ ತೋಶನೀವಾಲಾ ಅವರ ಅಭಿಪ್ರಾಯ ಆಗಿದೆ.

'ಮ್ಯೂಚುವಲ್ ಫಂಡ್ ಉದ್ಯಮವು ನಡೆಸುತ್ತಿರುವ 'ಮ್ಯೂಚುವಲ್ ಫಂಡ್ ಸರಿ ಇದೆ' ಅಭಿಯಾನವೂ ಪರಿಣಾಮಕಾರಿ ಆಗಿದೆ. ಅಂತರ್ಜಾಲದ ವ್ಯಾಪ್ತಿ ವಿಸ್ತರಣೆ ಆಗಿರುವುದು ಮತ್ತು ಸ್ಮಾರ್ಟ್‌ಫೋನ್ ಬಳಕೆ ಹೆಚ್ಚಾಗುತ್ತಿರುವುದರಿಂದ ಮಹಾನಗರಗಳಾಚೆಗೆ ಮತ್ತು ಅರೆ ಪಟ್ಟಣಗಳಲ್ಲಿಯೂ ಮ್ಯೂಚುವಲ್ ಫಂಡ್ ಯೋಜನೆಗಳು ಮಹಿಳೆಯರಿಗೆ ಸುಲಭವಾಗಿ ದಕ್ಕುವಂತಾಗಿದೆ. ವ್ಯವಸ್ಥಿತ ಹೂಡಿಕೆ ಯೋಜನೆಯಲ್ಲಿ (ಎಸ್‌ಐಪಿ) ₹100 ರಿಂದಲೂ ಹೂಡಿಕೆ ಆರಂಭಿಸ ಬಹುದಾಗಿದೆ. ಹೀಗಾಗಿ ಮಹಿಳೆಯರು ಇದರತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ' ಎಂದು ಅವರು ಹೇಳುತ್ತಾರೆ.

### ದೇವದುರ್ಗ ತಾಲ್ಲೂಕಿನ 33 ಗ್ರಾ.ಪಂ. ಗಳಲ್ಲಿ ನಡೆದ ಅಕ್ರಮ

# ಇಒ, ಎಡಿ ವಿರುದ್ಧ ಕ್ರಿಮಿನಲ್ ಪ್ರಕರಣ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ರಾಜ್ಯ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿ ವರದಿ ಆಧರಿಸಿ ಕ್ರಮ
- ಪ್ರಕರಣ ಸಂಬಂಧ ಈವರೆಗೆ 60ಕ್ಕೂ ಹೆಚ್ಚು ಸಿಬ್ಬಂದಿ ಅಮಾನತು

**ಅಂಕಿ-ಅಂಶಗಳು**

- ₹11.64 ಕೋಟಿ — ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವ ಹಣ
- ₹32.51 ಕೋಟಿ — ಕಡತಗಳನ್ನು ನಿರ್ವಹಿಸದೇ ಪಾವತಿಸಿರುವ ಹಣ
- ₹102.32 ಕೋಟಿ — ಶ್ರೀ ಮಾರುತೇಶ್ವರ ಎಂಟರ್‌ಪ್ರೈಸಸ್‌ಗೆ ಪಾವತಿಯಾಗಿರುವ ಹಣ
- ₹5.10 ಕೋಟಿ — ಸರ್ಕಾರಕ್ಕೆ ವಂಚಿಸಿರುವ ತೆರಿಗೆ ಮೊತ್ತ
- ₹49.27 ಕೋಟಿ — ನಕಲಿ ಜಾಬ್‌ಕಾರ್ಡ್‌ದಾರರಿಗೆ ಪಾವತಿಯಾದ ಹಣ

**ದೇವದುರ್ಗ (ರಾಯಚೂರು ಜಿಲ್ಲೆ):** ತಾಲ್ಲೂಕಿನ 33 ಗ್ರಾಮ ಪಂಚಾಯಿತಿಗಳಲ್ಲಿ ನರೇಗಾ ಕಾಮಗಾರಿಗಳಲ್ಲಿ ನಡೆದ ಅಕ್ರಮ ಕುರಿತು ರಾಜ್ಯ ಸಾಮಾಜಿಕ ಲೆಕ್ಕಪರಿಶೋಧನಾ ಸಮಿತಿ ನೀಡಿದ ವರದಿ ಆಧರಿಸಿ ಇಬ್ಬರು ಅಧಿಕಾರಿಗಳ ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿರ್ದೇಶನದ ಮೇರೆಗೆ ನರೇಗಾ ಯೋಜನೆಯ ಸಹಾಯಕ ನಿರ್ದೇಶಕ ಅಣ್ಣಾರಾವ್ ನೀಡಿದ ದೂರಿನಂತೆ ತಾಲ್ಲೂಕು ಪಂಚಾಯಿತಿಯ ಹಿಂದಿನ ಇಒ ಪಂಪಾಪತಿ ಹಿರೇಮಠ, ನಿರ್ಗಮಿತ ನರೇಗಾ ಯೋಜನೆ ಸಹಾಯಕ ನಿರ್ದೇಶಕ ಬಸಣ್ಣ ನಾಯಕ ಹೇಮನೂರು ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 465, 409, 420, 34ರ ಅಡಿ ಪ್ರಕರಣ ದಾಖಲಾಗಿದೆ.

ನರೇಗಾ ಯೋಜನೆಯಡಿ 2020–21, 2021–22 ಹಾಗೂ 2022–23ರವರೆಗೆ ನಡೆದ ಕಾಮಗಾರಿ ಅನುಷ್ಠಾನಗೊಂಡ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿಯಾಗಿ ₹11.64 ಕೋಟಿ ಮತ್ತು ಅನುಷ್ಠಾನಗೊಂಡ ಕಾಮಗಾರಿಗಳ ಕಡತಗಳನ್ನು ನಿರ್ವಹಿಸದೆ ₹32.51 ಕೋಟಿಯನ್ನು ಅಕ್ರಮವಾಗಿ ಪಾವತಿಸಲಾಗಿದೆ. ಈ ಎಲ್ಲ ಪ್ರಕರಣಗಳಲ್ಲಿ ₹102.32 ಕೋಟಿಯನ್ನು ಶ್ರೀ ಮಾರುತೇಶ್ವರ ಎಂಟರ್‌ಪ್ರೈಸಸ್‌ಗೆ ನಿಯಮ ಮೀರಿ ಪಾವತಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

₹5.10 ಕೋಟಿ ರಾಜಧನವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಪಾವತಿಸದೇ ಸರ್ಕಾರಕ್ಕೆ ನಷ್ಟ ಮಾಡಲಾಗಿದೆ. ವೈಯಕ್ತಿಕವಾಗಿ ಕಟ್ಟಿಕೊಂಡ ದನದ ಶೆಡ್‌ಗಳ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಪಾವತಿಸದೆ ನಿಯಮ ಬಾಹಿರವಾಗಿ ಸಾಮಗ್ರಿ ಪೂರೈಕೆದಾರರಿಗೆ ಹಣ ಪಾವತಿಸಲಾಗಿದೆ. ಕಾಮಗಾರಿ ನಡೆದ ಸ್ಥಳಗಳಲ್ಲಿ ನಾಮಫಲಕ ಅಳವಡಿಸದೆ ಮತ್ತು ಹೆಚ್ಚುವರಿಯಾಗಿ ನಕಲಿ ಜಾಬ್ ಕಾರ್ಡ್‌ಗಳನ್ನು ಸೃಷ್ಟಿಸಿ ₹49.27 ಕೋಟಿಯನ್ನು ಸರ್ಕಾರಕ್ಕೆ ನಷ್ಟ ಮಾಡಲಾಗಿದೆ ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕು ಪಂಚಾಯಿತಿ ಇಒ ಆಗಿದ್ದ ಮೊದಲನೇ ಆರೋಪಿ ಪಂಪಾಪತಿ ಹಿರೇಮಠ, ಎರಡನೇ ಆರೋಪಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕು ಇಒ ಬಸಣ್ಣ ನಾಯಕ ಹೇಮನೂರು ಅವರು ದೂರು ದಾಖಲಾಗುತ್ತಿದ್ದಂತೆ ಪರಾರಿಯಾಗಿದ್ದಾರೆ.

ಅಂತಿಮ ವರದಿ ಬಂದ ಬಳಿಕ ಪಿಡಿಒ, ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ, ತಾಂತ್ರಿಕ ಸಿಬ್ಬಂದಿ, ಕಂಪ್ಯೂಟರ್ ಆಪರೇಟರ್ ಸೇರಿದಂತೆ ಅಕ್ರಮದಲ್ಲಿ ಭಾಗಿಯಾದವರ ಮೇಲೂ ಪ್ರಕರಣ ದಾಖಲಿಸಲಾಗುತ್ತದೆ. ಅವ್ಯವಹಾರದ ಸಂಬಂಧ ಈವರೆಗೆ 60ಕ್ಕೂ ಹೆಚ್ಚು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ತೆರಿಗೆ ವಂಚಿಸಿದ್ದ ಶ್ರೀ ಮಾರುತೇಶ್ವರ ಎಂಟರ್‌ಪ್ರೈಸಸ್ ಕಚೇರಿ ಮೇಲೆ ಕಳೆದ ಮೇ 12ರಂದು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದರು.

ಅವ್ಯವಹಾರ ಕುರಿತು ಪ್ರಕರಣ ದಾಖಲಾಗಿರುವ ಬಗ್ಗೆ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಪಾಂಡ್ವೆ ಅವರಿಗೆ ಮೊಬೈಲ್ ಕರೆ ಮಾಡಿದರೂ ಸ್ವೀಕರಿಸಲಿಲ್ಲ.

# ಪ್ರಶಸ್ತಿಗೆ ಝೀಲ್– ಶ್ರೀವಲ್ಲಿ ಸೆಣಸಾಟ

### ಐಟಿಎಫ್ ಮಹಿಳಾ ಟೆನಿಸ್: ಡಬಲ್ಸ್‌ನಲ್ಲಿ ಡಿಲೆಟ್ಟಾ– ಅಂಟೋನಿಯಾಗೆ ಕಿರೀಟ

**ಬೆಂಗಳೂರು:** ಅನುಭವಿ ಋತುಜಾ ಭೋಸಲೆ ವಿರುದ್ಧ ಸೋಲಿನ ಸುಳಿಯಿಂದ ಚೇತರಿಸಿ ಪಂದ್ಯ ಗೆದ್ದ ಝೀಲ್ ದೇಸಾಯಿ ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್‌ನಲ್ಲಿ ಅಮೋಘ ಯಶಸ್ಸಿನ ಓಟವನ್ನು ಮುಂದುವರಿಸಿದರು. ಅವರು ಭಾನುವಾರ ನಡೆಯುವ ಫೈನಲ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಅವರನ್ನು ಎದುರಿಸಲಿದ್ದಾರೆ.

ಶನಿವಾರ ನಡೆದ ಸೆಮಿಫೈನಲ್ ಪಂದ್ಯಗಳ ಫಲಿತಾಂಶ ವಿಭಿನ್ನ ರೀತಿಯದ್ದಾಗಿದ್ದವು. ಝೀಲ್ ಹೋರಾಟ ತೋರಿ 3–6, 6–4, 7–5 ರಿಂದ ಮೂರನೇ ಶ್ರೇಯಾಂಕದ ಋತುಜಾ ಮೇಲೆ ಜಯಗಳಿಸಿದರೆ, ರಶ್ಮಿಕಾ ಇನ್ನೊಂದೆಡೆ ಎರಡನೇ ಶ್ರೇಯಾಂಕದ ಆಟಗಾರ್ತಿ, ಥಾಯ್ಲೆಂಡ್‌ನ ಲನ್ಲಾನಾ ತರಾರುದೀ ಅವರನ್ನು 6–2, 6–1 ರಿಂದ ನೇರ ಸೆಟ್‌ಗಳಲ್ಲಿ ಹಿಮ್ಮೆಟ್ಟಿಸಿದರು.

ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತೆ ರುತುಜಾ ಅವರು, ಶ್ರೇಯಾಂಕ ಆಟಗಾರ್ತಿಯರನ್ನು ಮಣಿಸಿ ಆತ್ಮವಿಶ್ವಾಸದಿಂದ ಇರುವ ಝೀಲ್ ವಿರುದ್ಧ ಮೊದಲ ಸೆಟ್ ಗೆದ್ದು, ಎರಡನೇ ಸೆಟ್‌ನಲ್ಲಿ 3–1 ಮುನ್ನಡೆ ಪಡೆದಿದ್ದರು. ಆದರೆ ಈ ಹಂತದಲ್ಲಿ ತಿರುಗೇಟು ನೀಡಿದ ಅಹಮದಾಬಾದ್ ಆಟಗಾರ್ತಿ, ಋತುಜಾ ದಣಿದಿದ್ದರ ಲಾಭ ಪಡೆದರು. ಏಳು ಮತ್ತು ಒಂಬತನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಸೇರಿದಂತೆ ಸತತ ನಾಲ್ಕು ಗೇಮ್‌ಗಳನ್ನು ಗೆದ್ದ ಝೀಲ್ ಎರಡನೇ ಸೆಟ್ ಹಿಡಿತಕ್ಕೆ ಪಡೆದರು. 27 ವರ್ಷದ ಋತುಜಾ ಅವರಿಗೆ ಟೂರ್ನಿಯ ಆರಂಭದಲ್ಲೇ ಜ್ವರ ಕಾಣಿಸಿಕೊಂಡಿತ್ತು.

ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಮಹಾರಾಷ್ಟ್ರದ ಆಟಗಾರ್ತಿ ಕೆಲವು ಉತ್ತಮ ಪಾಸಿಂಗ್ ಹೊಡೆತಗಳ ಮೂಲಕ ಬೇಗನೇ 3–1 ಮುನ್ನಡೆ ಪಡೆದರು. ಅಷ್ಟೇ ಅಲ್ಲ, ನಂತರ ಎರಡು ಬಾರಿ ಗೆಲುವಿನ ಅವಕಾಶ ಕೈಚೆಲ್ಲಿದರು. ಝೀಲ್ 2–5 ರಲ್ಲಿ ಹಿನ್ನಡೆಯಲ್ಲಿದ್ದು ಏಳನೇ ಗೇಮ್‌ನಲ್ಲಿ 30–40ರಲ್ಲಿದ್ದು ಸೋಲಿನ ಭೀತಿಯಲ್ಲಿದ್ದರು. ಈ ಹಂತದಲ್ಲಿ ಅಮೋಘವಾಗಿ ಚೇತರಿಕೆಯ ಆಟವಾಡಿದ ಝೀಲ್ ಗೇಮ್ ಗೆದ್ದರು. ಋತುಜಾ ಮತ್ತೊಮ್ಮೆ 5–3ರಲ್ಲಿದ್ದಾಗ ಗೆಲುವಿನ ಅವಕಾಶ ಪಡೆದಿದ್ದರು. ಆದರೆ ನಾಲ್ಕು ಬಾರಿ ಡಬಲ್ ಫಾಲ್ಟ್ ಮಾಡಿದ್ದು ದುಬಾರಿಯಾಯಿತು. ಹಿಡಿತ ಕಳೆದುಕೊಂಡಂತೆ ತಪ್ಪುಗಳನ್ನೂ ಎಸಗಿದರು. ಈ ಅವಕಾಶವನ್ನು 24 ವರ್ಷದ ಝೀಲ್ ಚೆನ್ನಾಗಿ ಬಳಸಿಕೊಂಡು ಸೆಟ್ ಮತ್ತು ಪಂದ್ಯ ಗೆದ್ದರು.




ಮಹಿಳಾ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದ ಇಟಲಿಯ ಡಿಲೆಟ್ಟಾ ಚೆರುಬಿನಿ ಮತ್ತು ಜರ್ಮನಿಯ ಅಂಟೋನಿಯಾ ಶ್ಮಿಟ್ —ಪ್ರಜಾವಾಣಿ ಚಿತ್ರ

**ಇಟಲಿ- ಜರ್ಮನಿ ಜೋಡಿಗೆ ಡಬಲ್ಸ್ ಪ್ರಶಸ್ತಿ:** ಇಟಲಿಯ ಡಿಲೆಟ್ಟಾ ಚೆರುಬಿನಿ ಮತ್ತು ಜರ್ಮನಿಯ ಅಂಟೋನಿಯಾ ಶ್ಮಿಟ್ ಅವರು ಮೊದಲ ಸೆಟ್ ಹಿನ್ನಡೆಯಿಂದ ಪುಟಿದೆದ್ದು ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಡಿಲೆಟ್ಟಾ– ಅಂಟೋನಿಯಾ ಜೋಡಿ 4–6, 7–5, 10–4 ರಿಂದ ಥಾಯ್ಲೆಂಡ್‌ನ ಪುನ್ನಿನ್ ಕೊವಾಪಿಟುಕ್ಟೆಡ್– ರಷ್ಯಾದ ಅನ್ನಾ ಉರೆಕೆ ಜೋಡಿಯನ್ನು ಸೋಲಿಸಿತು. ವಿಜೇತ ಜೋಡಿ ₹1.20 ಲಕ್ಷ ಬಹುಮಾನ ಮತ್ತು 50 ಡಬ್ಲ್ಯುಟಿಎ ಪಾಯಿಂಟ್‌ಗಳನ್ನು ಪಡೆಯಿತು. ರನ್ನರ್ ಅಪ್ ಜೋಡಿ ₹60,000 ಮತ್ತು 30 ಡಬ್ಲ್ಯುಟಿಎ ಪಾಯಿಂಟ್‌ಗಳನ್ನು ಪಡೆಯಿತು.

### ರಾಜ್ಯ ಮಟ್ಟದ ರೋಡ್ ಸೈಕ್ಲಿಂಗ್: ಬಾಗಲಕೋಟೆಗೆ ರನ್ನರ್ಸ್ ಅಪ್ ಸ್ಥಾನ

# ವಿಜಯಪುರ ಜಿಲ್ಲಾ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

**ಬಾಗಲಕೋಟೆ:** ವಿಜಯಪುರ ಜಿಲ್ಲೆಯ ತಂಡ, ಇಲ್ಲಿ ಶನಿವಾರ ಮುಕ್ತಾಯವಾದ 14ನೇ ರಾಜ್ಯಮಟ್ಟದ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ 35 ಅಂಕಗಳೊಡನೆ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು. 33 ಅಂಕ ಗಳಿಸಿದ ಬಾಗಲಕೋಟೆ ತಂಡವು ರನ್ನರ್ಸ್ ಅಪ್ ಸ್ಥಾನ ಗಳಿಸಿತು.

**ಫಲಿತಾಂಶಗಳು:** ಪುರುಷರ 30 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್: ಸೌರಭ ಸಿಂಗ್ (ಬೆಂಗಳೂರು)-1, ಸೋಮೇಶ ಜಿ. (ಮೈಸೂರು)–2, ರಾವುತ್ ಚಂಬಾರ, (ಧಾರವಾಡ)–3. 23 ವರ್ಷದೊಳಗಿನವರ 30 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ಪ್ರತಾಪ್ ಪಡಚಿ (ವಿಜಯಪುರ)–1, ಶ್ರೀಶೈಲ್ ವೀರಾಪುರ (ವಿಜಯಪುರ)–2, ಅನಿಲ ಕಾಳಪ್ಪಗೋಳ (ಕ್ರೀ.ಶಾ. ಚಂದರಗಿ)–3.

**14 ವರ್ಷದೊಳಗಿನ ಬಾಲಕರ 10 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್:** ಕರೆಪ್ಪ ಹೆಗಡೆ (ಕ್ರೀಡಾ ನಿಲಯ, ಗದಗ)–1, ಸ್ಟ್ಯಾಲಿನ್ ಗೌಡರ (ಗದಗ)–2, ಹೊನ್ನಪ್ಪ ಧರ್ಮಟ್ಟಿ (ಕ್ರೀಡಾ ಶಾಲೆ, ಚಂದರಗಿ)–3; ಬಾಲಕಿಯರ 10 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್: ದೀಪಿಕಾ ಪಡತಾರೆ (ಕ್ರೀಡಾ ನಿಲಯ, ವಿಜಯಪುರ)–1, ಗಾಯತ್ರಿ ಕಿತ್ತೂರ, (ಬಾಗಲಕೋಟೆ)–2, ಪಲ್ಲವಿ ಹಂಚಿನಾಳ (ಕ್ರೀಡಾ ನಿಲಯ, ವಿಜಯಪುರ)–3. ಮಹಿಳೆಯರ 20 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್:ಸಾವಿತ್ರಿ ಹೆಬ್ಬಾಳಟ್ಟಿ (ಬಾಗಲಕೋಟೆ)–1, ಪ್ರಿಯಾ ಕೃಷ್ಣನ್(ಬೆಂಗಳೂರು)–2, ಸೌಮ್ಯ ಅಂತಾಪುರ (ಬಾಗಲಕೋಟೆ)–3.

**16 ವರ್ಷದೊಳಗಿನ ಬಾಲಕರ 20 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್:** ಯಲ್ಲೇಶ ಹುಡೇದ (ಕ್ರೀಡಾ ಶಾಲೆ, ಚಂದರಗಿ)–1, ನಿತೀಶ್ ಪೂಜಾರಿ (ಕ್ರೀಡಾ ನಿಲಯ, ವಿಜಯಪುರ)–2, ತರುಣ ನಾಯಕ (ಕ್ರೀಡಾ ನಿಲಯ, ಬಾಗಲಕೋಟೆ)–3. 18 ವರ್ಷದೊಳಗಿನ ಬಾಲಕರ 20 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್: ಸುಜಲ್ ಜಾಧವ (ವಿಜಯಪುರ)–1, ರಾಹುಲ್ ರಾಠೋಡ (ವಿಜಯಪುರ)–2, ರಾಘವೇಂದ್ರ ವಂದಾಲ (ಕ್ರೀಡಾ ನಿಲಯ, ವಿಜಯಪುರ)–3.

**16 ವರ್ಷದೊಳಗಿನ ಬಾಲಕಿಯರ 10 ಕಿ.ಮೀ. ವೈಯಕ್ತಿಕ ಟೈಂ ಟ್ರಯಲ್:** ಛಾಯಾ ನಾಗಶೆಟ್ಟಿ (ಕ್ರೀ.ನಿ. ವಿಜಯಪುರ)–1, ಕೋಕಿಲಾ ಚವ್ಹಾಣ (ವಿಜಯಪುರ)–2, ಜ್ಯೋತಿ ರಾಠೋಡ (ವಿಜಯಪುರ)–3. 18 ವರ್ಷದೊಳಗಿನ ಬಾಲಕಿಯರ 20 ಕಿ.ಮೀ ವೈಯಕ್ತಿಕ ಟೈಂ ಟ್ರಯಲ್: ನಂದಾ ಚಿಚಖಂಡಿ (ಬಾಗಲಕೋಟೆ)–1, ಪಾಯಲ್ ಚವ್ಹಾಣ (ವಿಜಯಪುರ)–2, ಅನುಪಮಾ ಗುಳೇದ (ಬಾಗಲಕೋಟೆ)–3.

**16 ವರ್ಷದೊಳಗಿನವರ ಬಾಲಕರ 2 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್:** ಭೀರಪ್ಪ ನವಲಿ (ವಿಜಯಪುರ)–1, ಅರವಿಂದ ರಾಠೋಡ (ವಿಜಯಪುರ)–2, ಮೋಹನ ದಳವಾಯಿ (ಬೆಳಗಾವಿ)–3. ಪುರುಷರ 4 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ನಂದೆಪ್ಪ ಸವದಿ (ಬಾಗಲಕೋಟೆ)–1, ಮಹಾಂತೇಶ ಮದರಖಂಡಿ (ಗದಗ)–2, ಶ್ರೀನಿಧಿ ಉರಲಾ (ಧಾರವಾಡ)–3. 23 ವರ್ಷದೊಳಗಿನವರ ಪುರುಷರ 4 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ಮಧು ಕಾಡಾಪುರ (ಬಾಗಲಕೋಟೆ)–1, ಮನೋಜ ಬಾಟಿ (ಕ್ರೀಡಾ ನಿಲಯ, ಚಂದರಗಿ)–2, ಮಲ್ಲಿಕಾರ್ಜುನ ಯಾದವಾಡ (ಬಾಗಲಕೋಟೆ)–3.

**ಮಹಿಳೆಯರ 2 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್:** ಗಂಗಾ ದಂಡಿನ (ಬೆಳಗಾವಿ)–1, ಸೌಮ್ಯ ಅಂತಾಪುರ (ಬಾಗಲಕೋಟೆ)–2, ಸಾವಿತ್ರಿ ಹೆಬ್ಬಾಳಟ್ಟಿ (ಬಾಗಲಕೋಟೆ)–3 16 ವರ್ಷದೊಳಗಿನವರ ಬಾಲಕಿಯರ 1 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ಕೋಕಿಲಾ ಚವ್ಹಾಣ (ವಿಜಯಪುರ–1), ಛಾಯಾ ನಾಗಶೆಟ್ಟಿ (ವಿಜಯಪುರ)–2, ಸಾವಿತ್ರಿ ರೂಗಿ (ಬಾಗಲಕೋಟೆ)–3, 18 ವರ್ಷದೊಳಗಿನವರ ಬಾಲಕರ 3 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ವರುಣ ಶಿರೂರ (ಬಾಗಲಕೋಟೆ)–1, ಧನಂಜಯ (ಮೈಸೂರು)–2, ರಮೇಶ ಮುಳಗೊಂಡಿ (ವಿಜಯಪುರ)–3. 18 ವರ್ಷದೊಳಗಿನವರ ಬಾಲಕಿಯರ 2 ಲ್ಯಾಪ್ಸ್ ಮಾಸ್ಡ್ ಸ್ಟಾರ್ಟ್: ಪಾಯಲ್ ಚವ್ಹಾಣ (ವಿಜಯಪುರ)–1, ನಂದಾ ಚಿಚಖಂಡಿ (ಬಾಗಲಕೋಟೆ)–2, ಅನುಪಮಾ ಗುಳೇದ (ಬಾಗಲಕೋಟೆ)–3.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

**20ನೇ ವರ್ಷದ ಪುಣ್ಯ ಸ್ಮರಣೆ**



ಎ.ಆರ್. ವೆಂಕಟರಮಣರೆಡ್ಡಿ

ಜನನ: 5.11.1940 ಮರಣ: 26.11.2003

ನಿಮ್ಮ ಮಾರ್ಗದರ್ಶನ ನಮಗೆ ಸದಾ ಸ್ಫೂರ್ತಿ

ಇಂತಿ

ಮಕ್ಕಳಾದ ವಿ.ರಘು, ವಿ.ಸುಂದರ್‌ರಾಮ್ ರೆಡ್ಡಿ, ವಿ. ವಿಜಯಶಂಕರ್ ರೆಡ್ಡಿ ಮತ್ತು ಸೊಸೆಯಂದಿರು ಹಾಗೂ ಮೊಮ್ಮಕ್ಕಳು, ಕೈಕೊಂಡ್ರಹಳ್ಳಿ.

**4ನೇ ವರ್ಷದ ಪುಣ್ಯಸ್ಮರಣೆ**

ಶ್ರೀ ಡಿ.ಎಂ. ನಂಜುಂಡಯ್ಯನವರು

(ಜನನ: 15.05.1950 • ಮರಣ: 26.11.2019)

ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಮಗ: ಉದಯ್ ಎನ್. ಸರಳಶ್ರೀ ಎನ್.

ಮಗಳು: ಉಷಾ ಎನ್. ರಮೇಶ್‌ಬಾಬು ಆರ್,

ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

**ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು**

**ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ**

**ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ**

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

**ಉದ್ಯೋಗಾವಕಾಶ**

**Cook**

ಜಯನಗರ 5ನೇ ಬ್ಲಾಕ್ ನಲ್ಲಿ ವಾಸವಾಗಿರುವ ಒಂದು ಬ್ರಾಹ್ಮಣ ಕುಟುಂಬಕ್ಕೆ ನುರಿತ ಸಸ್ಯಾಹಾರ ತಯಾರಿಸಬಲ್ಲ ಅಡುಗೆಯವರು (ಹೆಂಗಸರು ಮಾತ್ರ) ಬೇಕಾಗಿದ್ದಾರೆ. ಸುತ್ತಮುತ್ತ ವಾಸಿಸುವವರಿಗೆ ಮೊದಲ ಆದ್ಯತೆ. ಸಂಬಳ ಅನುಭವಕ್ಕೆ ತಕ್ಕಂತೆ. ಸಂಪರ್ಕಿಸಿ: ಆರ್. ಶಂಕರ್, ಮೊಬೈಲ್: 9449405317

ತುಳು ಮನೆಗೆ ತುಳು, ಕನ್ನಡ ಮಾತನಾಡುವ ನುರಿತ ಅಡಿಗೆಯ ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ರಾಜರಾಜೇಶ್ವರಿ ನಗರ, ಬೆಂಗಳೂರು. ಸಂಪರ್ಕಿಸಿ: 9844483931

**J S METAL STORAGE SYSTEMS**

Singasandra, Hosur Road, Bengaluru-560068

Workers Required for Steel Factory

| | |
|---|---|
| CO2 Welders : | 5 No's (2 Years Exp) - Male |
| Office Accountance : | 2 No's (2 Years Exp) - Female |
| ITI Fitters : | 10 No's - Male |
| Digital Marketing @ Office : | 2 No's-(4 Years Exp) - Male/Female |
| Tender Execuities : | 2 No's ( 4 Years Exp) - Male/Female |
| Production Manager / Superviour: | 2 No's (3 Years Exp) - Male |
| Auto Cadd Designers, B.E.,: | 2 No's (3 to 4 Years Exp) - Male/Female |
| Factory Helpers : | 10 No's - Male |
| Sales Marketing : | 6 No's (3 Years Exp) - Male/Female |
| Sales Admin : | 2 No's (3 Years Exp) - Male/Female |

Contact : 9900250917, 8217313851

jsmetalstoragesystems@gmail.com

**General**

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

ವೆಜ್ ಹೋಟೆಲ್ಗೆ ದೋಸ ಮಾಸ್ಟರ್, ಟೀ ಮಾಸ್ಟರ್, ಸೌತ್ ಚೆಫ್ ಅಸಿಸ್ಟೆಂಟ್, ಕಟಿಂಗ್, ಗ್ರೈಂಡಿಂಗ್, ಕ್ಲೀನರ್ಸ್, ಕೌಂಟರ್ಸ್ ಬೇಕಾಗಿದ್ದಾರೆ. ಸ್ಥಳ: ಜಯನಗರ, ಬೆಂಗಳೂರು. +91 7019299055/ 8861453552

**Part-Time Jobs**

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

**Wanted**

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ತಿಂಗಳಿಗೆ ವೇತನ 20000 ರಿಂದ 25000/-ವರೆಗೆ. ವಿಳಾಸ : ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 7349494852

**Multiple Vacancy**

REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

**ವ್ಯಾಪಾರ**

**Business Offers**

**Distributors**

ಬೆಂಗಳೂರಿನಾದ್ಯಂತ ರಾಗಿ ತಿಂಡಿ ಮತ್ತು ಧಾನ್ಯಗಳನ್ನು ಮಾರಾಟ ಮಾಡಲು ಎಫ್‌ಎಂಸಿಜಿ ವಿತರಕರನ್ನು ಹುಡುಕುತ್ತಿದೆ. ಸಂಪರ್ಕಿಸಿ 9606021700

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

www.dhclassifieds.com ಬುಕ್ ಮಾಡಿ

ಹೆಸರು ಬದಲಾವಣೆ

ನಿಮ್ಮ ಹೆಸರು ಬದಲಾವಣೆ ಆಗಿದೆಯೇ?

ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

9886213331 | 9901641752

9845114560 | 9900428036

9731810277 | 080- 45557163/164

**ಭವಿಷ್ಯ**

**Astrology**

"ಕೆಲಸ ಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2 ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

**ASTRO YATRA**

ಕೇರಳ–ಕೊಳ್ಳೇಗಾಲದ ಪ್ರಸಿದ್ಧ ಜ್ಯೋತಿಷ್ಯರು

ಫೋನಿನ ಮೂಲಕ ಪರಿಹಾರ

ಸ್ತ್ರೀ ಪುರುಷ, ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ರುಂಡ ಮಾಲಿನಿ ಪೂಜಾ ಶಕ್ತಿಯಿಂದ

ಕೆಲವೇ ದಿನದಲ್ಲಿ ಪರಿಹಾರ

ಸಂಪರ್ಕಿಸಿ : ಪಂಡಿತ್ ಸುರೇಶ್ ಭಟ್ 9686330981

**ವೈವಾಹಿಕ**

**Brides Wanted**

**Hindu**

ವಯಸ್ಸು 30 ರಾಷ್ಟ್ರೀಕೃತ ಬ್ಯಾಂಕನ ಮ್ಯಾನೇಜರ ಹುದ್ದೆಯಲ್ಲಿರುವ ಗಂಗಾಮತ ಸಮಾಜದ ವರನಿಗೆ ಸುಂದರ ಸುಸಂಸ್ಕೃತ ಮನೆತನದ ವಿದ್ಯಾವಂತ ಗಂಗಾಮತ ವಧು ಬೇಕಾಗಿದೆ 7676653165

**ಪ್ರವಾಸ**

**Travel**

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/12 ದಿನಗಳು. 08.12.2023 ಗೋವ,ಕಾರವಾರ, ಗೋಕರಣ,ಮುರುಡೇಶ್ವರ ಕೊಲ್ಲೂರು 8000/-. 18.01.2024 ಅಹೋಬಲ,ನವನರಸಿಂಹ,ಶ್ರೀಶೈಲ ಮಂತ್ರಾಲಯ ಇತ್ಯಾದಿ 8000/-. 13.02.2024 ವೈಷ್ಣೋದೇವಿ ಅಮೃತ್‌ಸರ್ ವಾಘಬಾರ್ಡರ್ ದೆಹಲಿ,ಹರಿದ್ವಾರ,ಮಥುರ ಇತ್ಯಾದಿ 21000/-. 9448390735 9449721678

07.12.2023 ನವಗ್ರಹಗಳು ಕನ್ಯಾಕುಮಾರಿ,ರಾಮೇಶ್ವರ ಮಧುರೈ. 15.12.2023 ಗುಜರಾತ್,ಅಷ್ಟಜ್ಯೋತಿರ್ಲಿಂಗ. 15.02.2024 ನೇಪಾಳ,ಮುಕ್ತಿನಾಥ ಕಾಶಿ,ಅಯೋಧ್ಯ. 10.03.2024 12 ದಿನಗಳ ರಾಜಸ್ಥಾನ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು-70. 9342287551 8050629305

ಶ್ರೀರಾಜರಾಜೇಶ್ವರಿ ಟೂರ್ಸ್ 16.1.24 ರಿಂದ 10ದಿನ, ಗುಜರಾತ್,ಇಂದೋರ್. 17.2.24 ರಿಂದ 8ದಿನ,ಅಮೃತಸರ್, ವೈಷ್ಣೋದೇವಿ,ಕಾಶ್ಮೀರ. 10.3.24 ರಿಂದ 10ದಿನ, ಶಿಮ್ಲ,ಮನಾಲಿ, ವೈಷ್ಣೋದೇವಿ,ಅಮೃತಸರ್. 9739618243.

6 ದಿನಗಳ ದುಬೈ, 7/11 ದಿನಗಳ ಸಿಂಗಪುರ, ಮಲೇಷ್ಯಾ ಥೈಲ್ಯಾಂಡ್, 6 ದಿನಗಳ ಅಂಡಮಾನ್, 10 ದಿನಗಳ ಕಾಂಬೋಡಿಯಾ ವಿಯಟ್ನಾಂ. ಭಟ್ ಟ್ರಾವೆಲ್ಸ್: 9844037295

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

# ಕರ್ನಾಟಕದ ಗ್ಯಾರಂಟಿಗಳ ಮಾರ್ದನಿ...

**ಹೈದರಾಬಾದ್:** ಅದು ಪುಟ್ಟ ಚಹಾ ಅಂಗಡಿ. ಪಾತ್ರೆಯಲ್ಲಿ ಚಹಾ ಕುದಿಯುತ್ತಿತ್ತು. ಬೆಂಚ್ ಮೇಲೆ ಕುಳಿತಿದ್ದ ಭೀಮಾಬಾಯಿ ಹಾಗೂ ಪ್ರತಾಪ್ ಅವರ ನಡುವಿನ ಚರ್ಚೆ ಬಿಸಿಯಾಗಿತ್ತು. ನಾನು ಪ್ರೇಕ್ಷಕನಾಗಿದ್ದೆ. ಕಾರಣ ಇಷ್ಟೆ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದೆ ಎಂದು ಭೀಮಾಬಾಯಿ ಹೇಳಿದರು. ಇದನ್ನು ಪ್ರತಾಪ್ ಅಲ್ಲಗಳೆದರು. ವಾದ–ಪ್ರತಿವಾದ, ಆರೋಪ, ಪ್ರತ್ಯಾರೋಪ ಜೋರಾಯಿತು. ಅಲ್ಲಿದ್ದ ಮತ್ತೊಬ್ಬರು ನನ್ನನ್ನು ಉದ್ದೇಶಿಸಿ, 'ಕರ್ನಾಟಕವಾಳ್ಳು ಅಂಟಾರು, ಮೀರೆ ಚೆಪ್ಪಂಡಿ' ಎಂದರು. ಅಷ್ಟರಲ್ಲಿ ಭೀಮಾಬಾಯಿ 'ಅವರೇನು ಹೇಳುವುದು, ನಾನು ಕಲಬುರಗಿಯ ಚಿತ್ತಾಪುರದವಳು. ನನಗೆ ಎಲ್ಲ ಗೊತ್ತಿದೆ. ಬಸ್ ಫ್ರೀ, ಕರೆಂಟ್ ಫ್ರೀ, ಅಕ್ಕಿ ಜೊತೆಗೆ 75 ರೂಪಾಯಿ, 2 ಸಾವಿರ ರೂಪಾಯಿ...' ಒಂದೊಂದೇ ಬೆರಳುಗಳನ್ನು ಮಡಚುತ್ತಾ ಪಟ್ಟಿ ಕೊಟ್ಟರು. ಇದರಿಂದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಅಭಿಮಾನಿ ಪ್ರತಾಪ್ ತಣ್ಣಗಾದರು. ಭೀಮಾಬಾಯಿ ಗೆಲುವಿನ ನಗೆ ಬೀರಿ, ಬೀದರ್‌ನ ಶರಣಪ್ಪನ ಕಡೆಗೆ ತಿರುಗಿ, 'ನಿಮಗೂ ಗೊತ್ತಿದೆ ಅಲ್ವಾ ಹೇಳಿ' ಎಂದು ಅವರನ್ನೂ ತಮ್ಮ ಬೆಂಬಲಕ್ಕೆ ಎಳೆದುಕೊಂಡರು. ಅವರು ಬಿಆರ್‌ಎಸ್ ಕುರಿತು ಒಲವು ವ್ಯಕ್ತಪಡಿಸುತ್ತಾ, ಒಲ್ಲದ ಮನಸ್ಸಿನಿಂದಲೇ 'ಹೌದು' ಎಂದು ತಲೆ ಆಡಿಸಿದರು. ಭೀಮಾಬಾಯಿ ಗೋದಾಮಿನಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಪ್ರತಾಪ್ ಹಾಗೂ ಶರಣಪ್ಪ ಅವರದು ಟೈಲರಿಂಗ್ ಉದ್ಯೋಗ. ಇದಿಷ್ಟು ನಡೆದಿದ್ದು ಹೈದರಾಬಾದ್–ಪುಣೆ ಹೆದ್ದಾರಿಯಲ್ಲಿರುವ ಇಸ್ನಾಪುರದಲ್ಲಿ.

ಕರ್ನಾಟಕದಲ್ಲಿ ಕಾಂಗ್ರೆಸ್ ಚುನಾವಣೆ ವೇಳೆ ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿತ್ತು. 135 ಸ್ಥಾನಗಳೊಂದಿಗೆ ಭರ್ಜರಿ ಗೆಲುವು ಸಾಧಿಸಿತು. ಇದಕ್ಕೆ ಗ್ಯಾರಂಟಿಗಳೇ ಕಾರಣ ಎನ್ನುವುದು ಕಾಂಗ್ರೆಸ್, ವಿರೋಧ ಪಕ್ಷಗಳು ಹಾಗೂ ಜನರ ಬಲವಾದ ನಂಬಿಕೆ.

ತೆಲಂಗಾಣ ಕಾಂಗ್ರೆಸ್ ಆರು ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ. ಜನರು ಗ್ಯಾರಂಟಿಗಳ ಬಗೆಗೆ ವಿಚಾರಿಸುತ್ತಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾರಿಗೆ ತರುತ್ತದೆ ಎನ್ನುವ ನಂಬಿಕೆ ಬಲಿಯತೊಡಗಿದೆ. ಇದು ಬಿಆರ್‌ಎಸ್‌ನ ತಳಮಳವನ್ನು ಹೆಚ್ಚು ಮಾಡಿದೆ. ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಗ್ಯಾರಂಟಿಗಳ ಕುರಿತು ಪ್ರಸ್ತಾಪಿಸಿದರೆ ಸಾಕು, ಬಿಆರ್‌ಎಸ್‌ನವರು ಕೆಂಡಾಮಂಡಲವಾಗುತ್ತಾರೆ. ಇದರ 'ಪ್ರಭಾವ'ವನ್ನು ತಗ್ಗಿಸಲು ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಹಾಗೂ ಅವರ ಪುತ್ರ, ಸಚಿವ ಕೆ.ಟಿ.ರಾಮರಾವ್ ನಿತ್ಯ ಪ್ರತಿದಾಳಿ ನಡೆಸುತ್ತಿದ್ದಾರೆ. 'ಕರ್ನಾಟಕದಲ್ಲಿ ಗ್ಯಾರಂಟಿಗಳು ಸರಿಯಾಗಿ ಜಾರಿ ಆಗಿಲ್ಲ. ಫಲಾನುಭವಿಗಳಿಗೆ ತಲುಪುತ್ತಿಲ್ಲ' ಎಂದು ಅಬ್ಬರಿಸುತ್ತಿದ್ದಾರೆ. ಇದಕ್ಕೆ ನಿದರ್ಶನ ಎನ್ನುವಂತೆ ಗಡಿಯಲ್ಲಿರುವ ನಾರಾಯಣಪೇಟ ಜಿಲ್ಲೆಯ ಕೋಡಂಗಲ್ (ಟಿಪಿಸಿಸಿ ಅಧ್ಯಕ್ಷ ರೇವಂತ ರೆಡ್ಡಿ ಸ್ಪರ್ಧಿಸಿರುವ ಕ್ಷೇತ್ರ) ನಲ್ಲಿ ಈಚೆಗೆ ಕರ್ನಾಟಕದ ಕೆಲ ರೈತರು 'ಕರ್ನಾಟಕ ಸರ್ಕಾರ ಸುಳ್ಳು ಹೇಳುತ್ತಿದೆ. ರೈತರಿಗೆ ದಿನಕ್ಕೆ ಐದು ಗಂಟೆ ಮಾತ್ರ ವಿದ್ಯುತ್ ಕೊಡುತ್ತಿದೆ. ಗ್ಯಾರಂಟಿಗಳು ಸರಿಯಾಗಿ ಫಲಾನುಭವಿಗಳಿಗೆ ಸಿಕ್ಕಿಲ್ಲ' ಎಂದು ಆರೋಪಿಸಿ ಪ್ರತಿಭಟನೆ ಮಾಡಿದ್ದರು. ಇದರ ಹಿಂದೆ ಬಿಆರ್‌ಎಸ್‌ನ ಕೈವಾಡವಿತ್ತು ಎನ್ನುವುದು ಕಾಂಗ್ರೆಸ್‌ನ ದೂರು.

ಇಂಥ ಆರೋಪಗಳಿಗೆ ಉತ್ತರ ಎನ್ನುವಂತೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಚೆಗೆ ಕಾಮಾರೆಡ್ಡಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಪ್ರಚಾರಸಭೆಯಲ್ಲಿ ಕೆ. ಚಂದ್ರಶೇಖರ ರಾವ್‌ಗೆ ತಿರುಗೇಟು ನೀಡಿ, ಗ್ಯಾರಂಟಿಗಳ ಅನುಷ್ಠಾನ ಕುರಿತು ತಿಳಿದುಕೊಳ್ಳಲು ಕರ್ನಾಟಕಕ್ಕೆ ಬರುವಂತೆ ಪಂಥಾಹ್ವಾನ ನೀಡಿದರು.

ಸಂಗಾರೆಡ್ಡಿ ನಗರದಲ್ಲಿ ಸಿಕ್ಕ ಬಿಆರ್‌ಎಸ್ ಕಾರ್ಯಕರ್ತ ರವಿಶಂಕರ್, ಗ್ಯಾರಂಟಿಗಳ ಬಗೆಗೆ ಮಾತನಾಡುತ್ತಾ, '200 ಯೂನಿಟ್ ವಿದ್ಯುತ್ ಉಚಿತ ಎನ್ನುತ್ತಾರೆ, 24 ಗಂಟೆಯೂ ವಿದ್ಯುತ್ ಕೊಡ್ತಾ ಇದ್ದಾರಾ? 50 ಯೂನಿಟ್ ಕೊಟ್ಟು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ನಾವು 24 ಗಂಟೆ ವಿದ್ಯುತ್ ಕೊಡುತ್ತಿದ್ದೇವೆ' ಎಂದು ಒತ್ತಿ ಒತ್ತಿ ಹೇಳಿದರು.

ಅವರ ಜೊತೆಗಿದ್ದ ವೆಂಕಟೇಶ್, 'ನಮ್ಮ ರೈತ ಬಂಧು, ದಲಿತ ಬಂಧು, ವೃದ್ಧರು, ಅಶಕ್ತರಿಗೆ ಪಿಂಚಣಿ, ಶಾದಿ ಮುಬಾರಕ್‌ನಂತಹ ಹತ್ತಾರು ಯೋಜನೆಗಳು ಕರ್ನಾಟಕದ ಗ್ಯಾರಂಟಿಗಳಿಂತ ಉತ್ತಮವಾಗಿವೆ' ಎಂದು ಅಭಿಮಾನದಿಂದ ಹೇಳಿದರು.

ಐದು ದಿನಗಳ ಹಿಂದೆ ಕರ್ನಾಟಕದ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ ನೇತೃತ್ವದಲ್ಲಿ ನೂರಕ್ಕೂ ಹೆಚ್ಚು ರೈತರು ಇಲ್ಲಿನ ಇಂದಿರಾ ಪಾರ್ಕ್‌ನಲ್ಲಿ ಧರಣಿ ನಡೆಸಿದ್ದರು. 'ಕಾಂಗ್ರೆಸ್', ಕರ್ನಾಟಕದಲ್ಲಿ ಗ್ಯಾರಂಟಿಗಳನ್ನು ಪೂರ್ತಿಯಾಗಿ ಅನುಷ್ಠಾನಗೊಳಿಸಿಲ್ಲ. ಆದ್ದರಿಂದ ತೆಲಂಗಾಣದವರು ಕಾಂಗ್ರೆಸ್‌ನ ಹುಸಿ ಭರವಸೆಗಳಿಗೆ ಮೋಸ ಹೋಗಬೇಡಿ, ಎಚ್ಚರಿಕೆಯಿಂದ ಮತ ಚಲಾಯಿಸಿ' ಎಂದು ಕರೆ ನೀಡಿದರು. ವಿಷಯ ಗೊತ್ತಾಗಿ ಸ್ಥಳಕ್ಕೆ ಬಂದ ಮುಶೀರಾಬಾದ್ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು 'ನೀವು ಕಾಂಗ್ರೆಸ್ ವಿರುದ್ಧ ರಾಜಕೀಯ ಮಾಡುವ ಬದಲು, ಬಿಆರ್‌ಎಸ್ ಪರವಾಗಿಯೇ ಮತ ಕೇಳಿ' ಎಂದು ತರಾಟೆಗೆ ತೆಗೆದುಕೊಂಡಿದ್ದರು.

ಕಾಂಗ್ರೆಸ್‌ನವರು ತಮ್ಮ 'ಗ್ಯಾರಂಟಿ'ಗಳೇ ಮೇಲು ಎಂದು ಬೀಗಿದರೆ, ಬಿಆರ್‌ಎಸ್‌ನವರು ತಮ್ಮ 'ಬಂಧು ಯೋಜನೆ'ಗಳು ಅದ್ಭುತ ಎಂದು ವಾಗ್ವಾದಕ್ಕೆ ಇಳಿಯುತ್ತಿದ್ದರು. ಇದು ಗ್ಯಾರಂಟಿ V/S ಗ್ಯಾರಂಟಿಯಂತೆ ತೋರುತ್ತಿತ್ತು.

ಜಹೀರಾಬಾದ್ ನಗರ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳ ಗಡಿ ಹಂಚಿಕೊಂಡಿದೆ. ಹೈದರಾಬಾದ್‌ನಿಂದ ಜಹೀರಾಬಾದ್‌ಗೆ 115 ಕಿಲೊಮೀಟರ್. ಈ ಹೆದ್ದಾರಿಯಲ್ಲಿ ಸಾಗುವಾಗ ಕೆಲವು ಕಡೆ ಬಸವಣ್ಣನ ಪ್ರತಿಮೆಗಳು ಕಾಣಸಿಗುತ್ತವೆ. ಇದು ಎರಡೂ ರಾಜ್ಯಗಳ ನಡುವಿನ ನಂಟಿನ ಸಂಕೇತದಂತಿದೆ. ಜಹೀರಾಬಾದ್‌ನ ಪಾನ್‌ಶಾಪ್‌ನ ಸಯ್ಯದ್ ಶೋಯಬ್, 'ಗ್ಯಾರಂಟಿಗಳ ಬಗ್ಗೆ ನನಗೂ ಗೊತ್ತು. ಬೀದರ್‌ನಲ್ಲಿ ನಮಗೆ ಸಂಬಂಧಿಕರು ಇದ್ದಾರೆ. ಅವರು ಹೇಳುವುದನ್ನು ಕೇಳಿದ್ದೇನೆ' ಎಂದು ಹೇಳಿದರು.

ನಾಲ್ಕು ದಿನಗಳಲ್ಲಿ ಸುಮಾರು ಒಂದು ಸಾವಿರ ಕಿಲೊಮೀಟರ್‌ಗಳಷ್ಟು ಸುತ್ತಾಡಿದ್ದೇನೆ. ನೂರಾರು ಜನರೊಂದಿಗೆ ಸಂಭಾಷಿಸಿದ್ದೇನೆ. ಈ ಅನುಭವದ ಆಧಾರದ ಮೇಲೆ ಹೇಳುವುದಾದರೆ ಕರ್ನಾಟಕದ ಗ್ಯಾರಂಟಿಗಳು ಗಡಿ ದಾಟಿ ತೆಲಂಗಾಣದಲ್ಲಿ ಮಾರ್ದನಿಸುತ್ತಿವೆ. ಎಷ್ಟೋ ಕಡೆ ಗ್ಯಾರಂಟಿಗಳ ಕುರಿತಾದ ಪ್ರಶ್ನೆ ಕೇಳಿದ ಕಾರಣಕ್ಕಾಗಿ ಇಕ್ಕಟ್ಟಿಗೆ ಸಿಲುಕುವಂತಾಗುತ್ತಿತ್ತು. ಇದನ್ನು ಜಾವೇದ್ ಗುರುತಿಸಿದ್ದ. ಜಾವೇದ್, ಬೀದರ್ ಜಿಲ್ಲೆಯ ಹುಮನಾಬಾದ್ ಸಮೀಪದ ಹಳ್ಳಿಯೊಂದರ ಹುಡುಗ. ನನ್ನ ಕಾರು ಚಾಲಕ. ಈತ ಹೇಳಿದ 'ನೀವು ನಾಲ್ಕು ದಿನಕ್ಕೇ ವಿವರಣೆ ಕೊಟ್ಟು ಸಾಕಾಗಿದೆ ಅಂತಿದ್ದೀರ. ನಾನು ಕರ್ನಾಟಕದವನು ಅಂಥ ಕಸ್ಟಮರ್‌ಗಳಿಗೆ ಗೊತ್ತಾದ ಕೂಡಲೇ ಮೊದಲು ಕೇಳುವುದು ಗ್ಯಾರಂಟಿಗಳ ಬಗೆಗೇ. ಎಲೆಕ್ಷನ್ ಚಾಲೂ ಆದ ದಿನದಿಂದ ಹೈರಾಣಾಗಿ ಹೋಗಿದ್ದೇನೆ' ಎಂದು ನಕ್ಕ.

## ಚುನಾವಣಾ ಕಣದಲ್ಲಿ

- **'ಮೋದಿ ಘೋಷಣೆಗೆ ಕ್ರಮ ಇಲ್ಲ':** ಕರ್ನಾಟಕ ವಿಧಾನಸಭೆ ಚುನಾವಣೆಗೆ ಪ್ರಚಾರ ನಡೆಸುವ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು 'ಜೈ ಬಜರಂಗ ಬಲಿ' ಎಂದು ಘೋಷಣೆ ಕೂಗಿದ್ದರು. ಈ ಕುರಿತು ಮೌನ ಕಾಯ್ದುಕೊಂಡಿದ್ದ ಚುನಾವಣಾ ಆಯೋಗವು ವಿರೋಧಪಕ್ಷಗಳ ಹೇಳಿಕೆ ಕುರಿತು ಕ್ರಮಕ್ಕೆ ಮುಂದಾಗಿದೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚೂರಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಿಪಿಎಂ ಪರ ಪ್ರಚಾರ ನಡೆಸಲು ಹೈದರಾಬಾದ್‌ಗೆ ಆಗಮಿಸಿರುವ ಅವರು ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರು. ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಬೇಕು. ಇಲ್ಲದಿದ್ದರೆ ದೇಶದ ಜಾತ್ಯತೀತ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯವಿಲ್ಲ ಎಂದರು.
- **ರಾಹುಲ್ ವಿರುದ್ಧ ಕ್ರಮಕ್ಕೆ ಆಗ್ರಹ:** ಮತದಾರರನ್ನು ಉದ್ದೇಶಿಸಿ ಮತದಾನದ ದಿನವೇ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಚುನಾವಣಾ ಆಯೋಗಕ್ಕೆ ಶನಿವಾರ ಪತ್ರ ಬರೆದಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷವನ್ನು ಚುನಾಯಿಸುವಂತೆ ಮನವಿ ಮಾಡಿರುವ ರಾಹುಲ್, 'ರಾಜ್ಯವು ಈ ಬಾರಿ ಉಚಿತ ಚಿಕಿತ್ಸೆ, ಕಡಿಮೆ ಬೆಲೆಯ ಅಡುಗೆ ಅನಿಲ ಸಿಲಿಂಡರ್, ಜಾತಿ ಗಣತಿಯನ್ನು ಆಯ್ದುಕೊಳ್ಳುತ್ತದೆ' ಎಂದು ಪೋಸ್ಟ್ ಮಾಡಿದ್ದರು. 'ನಿಮ್ಮ ಪ್ರತಿ ಮತವನ್ನು ಸುಂದರ ಭವಿಷ್ಯಕ್ಕಾಗಿ, ಹಕ್ಕುಗಳಿಗಾಗಿ, ಕಾಂಗ್ರೆಸ್ ನೀಡಿರುವ ಗ್ಯಾರಂಟಿಗಳಿಗಾಗಿ ನೀಡಿ' ಎಂದು ಪ್ರಿಯಾಂಕಾ ಪೋಸ್ಟ್ ಮಾಡಿದ್ದಾರೆ.
- **'ಕಾಂಗ್ರೆಸ್‌ನಿಂದ ಬಿಜೆಪಿಯ ಟೈರ್ ಪಂಕ್ಚರ್':** ತೆಲಂಗಾಣದಲ್ಲಿ ಬಿಜೆಪಿಯ ಎಲ್ಲಾ ನಾಲ್ಕು ಟೈರ್‌ಗಳನ್ನು ಪಂಕ್ಚರ್ ಮಾಡಲಾಗಿದೆ. ದೆಹಲಿಯಲ್ಲೂ ಶೀಘ್ರವೇ ಇದನ್ನು ಪಕ್ಷವು ಮಾಡಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು. ತೆಲಂಗಾಣದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ತಾವು ಓದಿದ ಶಾಲೆ ಮತ್ತು ವಿಶ್ವವಿದ್ಯಾಲಯಗಳು, ತಮ್ಮ ವಿಮಾನಗಳು ಟೇಕ್ ಆಫ್ ಆಗುವ ವಿಮಾನ ನಿಲ್ದಾಣಗಳನ್ನು ನಿರ್ಮಿಸಿದ್ದು ಕಾಂಗ್ರೆಸ್ ಎಂಬುದನ್ನು ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ಅರಿತುಕೊಳ್ಳಬೇಕು ಎಂದರು. ಈ ಬಾರಿಯ ಚುನಾವಣೆಯನ್ನು 'ಊಳಿಗಮಾನ್ಯ ಸರ್ಕಾರ ಮತ್ತು ಪ್ರಜಾ ಸರ್ಕಾರದ ನಡುವಿನ ಯುದ್ಧ' ಎಂದು ಬಣ್ಣಿಸಿದರು.

## 'ರೈತು ಬಂಧು ಯೋಜನೆಗೆ ಅಡ್ಡಿ ಇಲ್ಲ'

**ಹೈದರಾಬಾದ್ (ಪಿಟಿಐ):** ರೈತು ಬಂಧು ಯೋಜನೆಯಡಿ ನೀಡಬೇಕಿರುವ ಧನ ಸಹಾಯದ ಮೊತ್ತವನ್ನು ನವೆಂಬರ್ 28ರ ಒಳಗೆ ವಿತರಿಸಲು ಚುನಾವಣಾ ಆಯೋಗವು(ಇ.ಸಿ) ತೆಲಂಗಾಣ ಸರ್ಕಾರಕ್ಕೆ ಸಮ್ಮತಿ ನೀಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಆಯೋಗ, 'ರೈತು ಬಂಧು ಯೋಜನೆ ಅಡಿ ಹಣ ಹಂಚಿಕೆ ಮಾಡಲು ಆಯೋಗದಿಂದ ಅಡ್ಡಿ ಇಲ್ಲ. ಅಲ್ಲದೇ ನೇರ ಲಾಭ ವರ್ಗಾವಣೆ (ಡಿಬಿಟಿ) ಯೋಜನೆಯ ಕಾರ್ಯಾಚರಣೆಗೆ ಮತದಾನದ ದಿನದಂದೂ ಅಡ್ಡಿಪಡಿಸುವುದಿಲ್ಲ' ಎಂದು ತಿಳಿಸಿದೆ.

ನವೆಂಬರ್ 25, 26 ಮತ್ತು 27ರಂದು ಬ್ಯಾಂಕ್‌ಗಳಿಗೆ ರಜೆ ಇರುವ ಕಾರಣ ಡಿಬಿಟಿ ವಿಧಾನದ ಮೂಲಕ ರೈತರ ಬ್ಯಾಂಕ್ ಖಾತೆಗಳಿಗೆ ರೈತು ಬಂಧು ನೆರವನ್ನು ನೇರವಾಗಿ ವರ್ಗಾಯಿಸಲಾಗುವುದು ಎಂದು ಸರ್ಕಾರದ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

## 'ಮುಸ್ಲಿಂ ಮೀಸಲಾತಿ ಅಸಾಂವಿಧಾನಿಕ'

**ಹೈದರಾಬಾದ್ (ಪಿಟಿಐ):** ತಾವು ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಮೀಸಲಾತಿ ನೀಡಲಾಗುವುದು ಎಂದು ಬಿಆರ್‌ಎಸ್ ಭರವಸೆ ನೀಡಿರುವುದು ಬಿ.ಆರ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನಕ್ಕೆ ಮಾಡಿದ ಅವಮಾನ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿದರು.

ಯೋಗಿ ಆದಿತ್ಯನಾಥ್

ತೆಲಂಗಾಣದ ಅಸಿಫಾಬಾದ್ ಜಿಲ್ಲೆಯಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಮಾತನಾಡಿದ ಯೋಗಿ ಆದಿತ್ಯನಾಥ್, 'ಮುಸ್ಲಿಂ ಮೀಸಲಾತಿ ಅಸಾಂವಿಧಾನಿಕವಾದದ್ದು. ಇದು ಜಾರಿಯಾಗದಂತೆ ನಾವೆಲ್ಲರೂ ನೋಡಿಕೊಳ್ಳಬೇಕು' ಎಂದು ಹೇಳಿದರು.

ವಿಧಾನಸಭೆಯ 199 ಸ್ಥಾನಗಳಿಗೆ ಚುನಾವಣೆ • ಅಭ್ಯರ್ಥಿಗಳ ಭವಿಷ್ಯ ಇವಿಎಂನಲ್ಲಿ ಭದ್ರ

# ರಾಜಸ್ಥಾನ: ಶೇ 69.17 ಮತದಾನ

ಪ್ರಜಾವಾಣಿ ವಾರ್ತೆ

**ಜೈಪುರ:** ರಾಜಸ್ಥಾನದಲ್ಲಿ ವಿಧಾನಸಭೆಯ 200 ಸ್ಥಾನಗಳ ಪೈಕಿ 199 ಸ್ಥಾನಗಳಿಗೆ ಶನಿವಾರ ನಡೆದ ಚುನಾವಣೆಯಲ್ಲಿ ಸಂಜೆ 6ರವರೆಗೆ ಶೇ 69.17 ರಷ್ಟು ಮತದಾನ ಆಗಿದೆ.

ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ ನಡೆಯಿತು. ಒಟ್ಟು 1862 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 2018ರಲ್ಲಿ ನಡೆದ ಚುನಾವಣೆಯಲ್ಲಿ ಶೇ 74.72ರಷ್ಟು ಮತದಾನ ಆಗಿತ್ತು.

ಒಟ್ಟು 5,29,31,152 ಮತದಾರರಿದ್ದು ಇವರಲ್ಲಿ 22,61,008 ಮಂದಿ ಹೊಸ ಮತದಾರರು. ಕನಿಷ್ಠ 3 ಲಕ್ಷ ಮಂದಿ ಅಂಚೆ ಮತಪತ್ರದ ಮೂಲಕ ಈಗಾಗಲೇ ಮತಹಾಕಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಗುರ್ಮೀತ್ ಸಿಂಗ್ ಅವರ ನಿಧನದ ಕಾರಣ ಶ್ರೀಗಂಗಾನಗರದ ಕರಣಪುರ ಕ್ಷೇತ್ರದ ಮತದಾನವನ್ನು ರದ್ದುಪಡಿಸಲಾಗಿದೆ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಮಾಜಿ ಮುಖ್ಯಮಂತ್ರಿ ಬಿಜೆಪಿಯ ವಸುಂಧರಾ ರಾಜೇ, ಕಾಂಗ್ರೆಸ್ ನಾಯಕ ಸಚಿನ್ ಪೈಲಟ್, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ಡೊಟಾಸರಾ, ಬಿಜೆಪಿ ನಾಯಕಿ ದಿಯಾ ಕುಮಾರಿ, ಸಂಸದ ರಾಜ್ಯವರ್ಧನ ರಾಠೋಡ್, ರಾಷ್ಟ್ರೀಯ ಲೋಕತಾಂತ್ರಿಕ ಪಕ್ಷದ ಅಧ್ಯಕ್ಷ ಹನುಮಾನ್ ಬೇನಿವಾಲ್ ಅವರ ಭವಿಷ್ಯವು ಮತಯಂತ್ರಗಳಲ್ಲಿ ಭದ್ರವಾಗಿದೆ.

ಮತದಾನ ಪ್ರಕ್ರಿಯೆ ಸರಾಗವಾಗಿ ನಡೆಯುವಂತೆ ಮಾಡಲು ಹಲವು ವ್ಯವಸ್ಥೆಗಳನ್ನು ಆಯೋಗ ಮಾಡಿತ್ತು. 1.70 ಲಕ್ಷಕ್ಕಿಂತಲೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ರಾಜ್ಯದಾದ್ಯಂತ ನಿಯೋಜಿಸಿತ್ತು.

ರಾಜಸ್ಥಾನದ ಅಜ್ಮೀರ್‌ನಲ್ಲಿ ಮತದಾನದ ಬಳಿಕ ಶಾಯಿ ಹಾಕಿಸಿಕೊಂಡಿರುವುದನ್ನು ಪ್ರದರ್ಶಿಸಿದ ಗ್ರಾಮಸ್ಥರು ಪಿಟಿಐ ಚಿತ್ರ

**ಮುಖ್ಯಾಂಶಗಳು**
- 1.70 ಲಕ್ಷಕ್ಕಿಂತಲೂ ಹೆಚ್ಚು ಭದ್ರತಾ ಸಿಬ್ಬಂದಿ ನೇಮಕ
- ಕೆಲವೆಡೆ ಘರ್ಷಣೆ
- ಡಿ. 3ರಂದು ಮತ ಎಣಿಕೆ

**ಘರ್ಷಣೆ:** ರಾಜ್ಯದ ಕೆಲವೆಡೆ ಘರ್ಷಣೆಗಳು ವರದಿಯಾಗಿವೆ. ಡೀಗ್ ಜಿಲ್ಲೆಯ ಸನ್‌ವ್ಲೇರ್ ಗ್ರಾಮದಲ್ಲಿ ಕಲ್ಲು ತೂರಾಟ ನಡೆಯಿತು. ಪೊಲೀಸ್ ಸಿಬ್ಬಂದಿ ಸೇರಿ ಇಬ್ಬರು ಗಾಯಗೊಂಡರು. ಗುಂಪು ಚದುರಿಸಿ, ಪರಿಸ್ಥಿತಿಯನ್ನು ಸಹಜಗೊಳಿಸಲು ಪೊಲೀಸರು ಗಾಳಿಯಲ್ಲಿ 12 ಸುತ್ತು ಗುಂಡು ಹಾರಿಸಿದರು. ಕೆಲಕಾಲ ಮತದಾನವನ್ನು ನಿಲ್ಲಿಸಲಾಗಿತ್ತು.

ಸಿಕಾರ್‌ನ ಫತೇಪುರದ ಮತಗಟ್ಟೆ ಬಳಿ ಎರಡು ಬಣಗಳ ನಡುವೆ ಘರ್ಷಣೆ ನಡೆಯಿತು. ಕಲ್ಲು ತೂರಾಟದಿಂದಾಗಿ ಯೋಧರೊಬ್ಬರು ಗಾಯಗೊಂಡಿರು. 5–7 ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಾರಿ ಕ್ಷೇತ್ರದ ಮತಗಟ್ಟೆಯೊಂದರ ಬಳಿ ಚುನಾವಣಾ ಏಜೆಂಟ್ ಮತ್ತು ಮತಗಟ್ಟೆ ಹೊರಗಿದ್ದ ವ್ಯಕ್ತಿ ನಡುವೆ ಜಗಳ ನಡೆಯಿತು. ಈ ವೇಳೆ ಎರಡು ವಾಹನಗಳು ಹಾನಿಗೀಡಾಗಿವೆ. ಮತದಾನವನ್ನು ಕೆಲಕಾಲ ನಿಲ್ಲಿಸಿ ಮತ್ತೆ ಆರಂಭಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

**ಇಬ್ಬರು ಮೃತ:** ಪಾಲಿ ಜಿಲ್ಲೆಯಲ್ಲಿ ಬಿಜೆಪಿಯ ಏಜೆಂಟರೊಬ್ಬರು ಮೃತಪಟ್ಟಿದ್ದಾರೆ. ಹೃದಯಾಘಾತದಿಂದ ಈ ಸಾವು ಸಂಭವಿಸಿದೆ ಎಂದು ಶಂಕಿಸಲಾಗಿದೆ.

ಸುಮೇರ್‌ಪುರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜೋರರಾಮ್ ಕುಮಾವತ್ ಅವರ ಏಜೆಂಟ್ ಆಗಿದ್ದ ಶಾಂತಿ ಲಾಲ್ ಅವರು ಕ್ಷೇತ್ರದ ಮತಗಟ್ಟೆ ಸಂಖ್ಯೆ 47ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೇಳೆ ಕುಸಿದುಬಿದ್ದರು. ಅವರನ್ನು ಹತ್ತಿರದ ಆಸ್ಪತ್ರೆಗೆ ನಂತರದಲ್ಲಿ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು.

ಉದಯಪುರ ಜಿಲ್ಲೆಯಲ್ಲಿ 62 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಮೂರು ಬಾರಿ ಮುಖ್ಯಮಂತ್ರಿಯಾಗಿರುವ ಗೆಹಲೋತ್ ಅವರು 156 ಸ್ಥಾನಗಳಲ್ಲಿ ಜಯ ಗಳಿಸುವ ಭರವಸೆ ಹೊಂದಿದ್ದಾರೆ. ಪ್ರತಿ ಐದು ವರ್ಷಗಳಿಗೊಮ್ಮೆ ಸರ್ಕಾರ ಬದಲಾಗುವ ಕ್ರಮವನ್ನು ಈ ಬಾರಿ ಮುರಿಯುವ ವಿಶ್ವಾಸ ಹೊಂದಿದ್ದಾರೆ. 'ಜನರ ಆಶೀರ್ವಾದ ನಮಗಿದೆ. ಈ ಸಲವೂ ಕಾಂಗ್ರೆಸ್ ಸರ್ಕಾರ ರಚಿಸಲಿದೆ' ಎಂದು ಅವರು ಹೇಳಿದರು.

ಏಳು ಸಂಸದರನ್ನು ಕಣಕ್ಕಿಳಿಸಿರುವ ಬಿಜೆಪಿ ಭ್ರಷ್ಟಾಚಾರ, ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಮಹಿಳೆಯರ ರಕ್ಷಣೆಯಂತಹ ವಿಷಯಗಳನ್ನು ಮತದಾರರ ಮುಂದೆ ಪ್ರಮುಖವಾಗಿ ಇರಿಸಿತ್ತು. ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರು ಘೋಷಿಸದೇ ಇರುವುದರಿಂದ, ಆಂತರಿಕ ಕಲಹದಿಂದ ಬಿಜೆಪಿಯು ತನ್ನ ತಾರಾ ಪ್ರಚಾರಕ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಕೆಲ ಮಟ್ಟಿಗೆ ನೆಚ್ಚಿಕೊಳ್ಳಬೇಕಾಯಿತು.

ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರನ್ನು ಕಡೆಗಣಿಸಲಾಗಿದೆ ಎಂದು ಆರಂಭದಲ್ಲಿ ಶಂಕೆ ವ್ಯಕ್ತವಾಗಿದ್ದರೂ ನಂತರದ ಕೆಲ ದಿನಗಳಲ್ಲಿ ಅವರು ಪ್ರಚಾರದಲ್ಲಿ ಪಾಲ್ಗೊಂಡರು.

## ನುಡಿ–ಕಿಡಿ

ಟಿಆರ್‌ಎಸ್ ತನ್ನ ಹೆಸರನ್ನು 'ಬಿಆರ್‌ಎಸ್' ಎಂದು ಮತ್ತು ಯುಪಿಎ ತನ್ನ ಹೆಸರನ್ನು 'ಇಂಡಿಯಾ' ಮೈತ್ರಿಕೂಟ ಎಂದು ಬದಲಿಸಿಕೊಂಡರೂ ಭ್ರಷ್ಟಾಚಾರ ಮತ್ತು ದುರಾಡಳಿತ ಮಾತ್ರ ಎಂದಿಗೂ ಬದಲಾಗದು. ಇವರಲ್ಲಿರುವ ಸಾಮ್ಯತೆ ಎಂದರೆ, ಜನರನ್ನು ವಂಚಿಸಲು ಬೇಕಾದ ಎಲ್ಲಾ ರೀತಿಯ ಕುತಂತ್ರಗಳನ್ನು ಅಳವಡಿಸಿಕೊಂಡಿರುವುದು.

**ನರೇಂದ್ರ ಮೋದಿ,** ಪ್ರಧಾನಮಂತ್ರಿ

ತೆಲಂಗಾಣ ಚುನಾವಣಾ ಪ್ರಚಾರದ ನಡುವೆಯೇ ಕಾಂಗ್ರೆಸ್‌ನ ಕನಿಷ್ಠ ನಾಲ್ವರು ಅಭ್ಯರ್ಥಿಗಳಿಗೆ ತನಿಖಾ ಸಂಸ್ಥೆಗಳು ಸಮನ್ಸ್ ನೀಡಿ, ಅವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿವೆ. ನನಗೆ ತಿಳಿದಿರುವಂತೆ ಬಿಜೆಪಿಯ ಯಾವುದೇ ಅಭ್ಯರ್ಥಿಯ ನಿವಾಸವನ್ನು ಶೋಧಿಸಿಲ್ಲ. ಬಿಜೆಪಿಯ ಎಲ್ಲ ಅಭ್ಯರ್ಥಿಗಳನ್ನು ದೇವರುಗಳೇ ಆಯ್ಕೆ ಮಾಡಿದ್ದು, ಅವರಿಗೆ ದೇವರ ಆಶೀರ್ವಾದ ಇದೆ ಎಂಬುದು ಸ್ಪಷ್ಟ.

**ಪಿ. ಚಿದಂಬರಂ,** ಕಾಂಗ್ರೆಸ್‌ನ ಹಿರಿಯ ನಾಯಕ

## ಬಿಆರ್‌ಎಸ್ ಜೊತೆ ಮೈತ್ರಿ ಇಲ್ಲ: ಸಚಿವ ಅಮಿತ್ ಶಾ

ಪ್ರಜಾವಾಣಿ ವಾರ್ತೆ

**ಹೈದರಾಬಾದ್:** ತೆಲಂಗಾಣದ ಬಿಆರ್‌ಎಸ್ ಸರ್ಕಾರವು ವ್ಯಾಪಕ ಭ್ರಷ್ಟಾಚಾರ ನಡೆಸಿದೆ ಎಂದು ಆರೋಪಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಆ ಪಕ್ಷದ ಜೊತೆ ಬಿಜೆಪಿಯು ಯಾವುದೇ ರೀತಿಯ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತೆಲಂಗಾಣದಲ್ಲಿ ಬದಲಾವಣೆ ತರಲು ಬಿಜೆಪಿಯಿಂದ ಮಾತ್ರ ಸಾಧ್ಯ. ಕಾಂಗ್ರೆಸ್ ಅಥವಾ ಎಐಎಂಐಎಂಗೆ ಹಾಕುವ ಪ್ರತಿ ಮತವೂ ಬಿಆರ್‌ಎಸ್‌ಗೆ ಹೋಗುತ್ತದೆ ಎಂದರು.

'ಎಐಎಂಐಎಂನ ಶಾಸಕರು ಗೆದ್ದಾಗಲೆಲ್ಲಾ ಅವರು ಬಿಆರ್‌ಎಸ್ ಅನ್ನು ಬೆಂಬಲಿಸಿದ್ದಾರೆ. ಕಾಂಗ್ರೆಸ್ ಟಿಕೆಟ್‌ನಲ್ಲಿ ಗೆದ್ದ ಶಾಸಕರು ನಂತರದಲ್ಲಿ ಬಿಆರ್‌ಎಸ್ ಸೇರ್ಪಡೆಯಾಗಿದ್ದಾರೆ. ಹೀಗಾಗಿ ಸರ್ಕಾರ ಬದಲಿಸುವ ಸಲುವಾಗಿ ಈ ಎರಡು ಪಕ್ಷಗಳಿಗೆ ನೀವು ಹಾಕುವ ಮತವು ವ್ಯರ್ಥವಾಗುತ್ತದೆ' ಎಂದರು.


ಅಮಿತ್ ಶಾ

**'ಜನರೇ ಉತ್ತರಿಸಲಿದ್ದಾರೆ':** ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಪನೌತಿ' (ಅಪಶಕುನ) ಎಂದು ಕರೆದ ಕುರಿತು ಪ್ರತಿಕ್ರಿಯಿಸಿದ ಅವರು, 'ಮೋದಿ ಉದ್ದೇಶಿಸಿ ವಿರೋಧಪಕ್ಷಗಳು ಕೀಳು ಮಟ್ಟದ ಭಾಷೆ ಬಳಸಿದಾಗಲೆಲ್ಲಾ ಜನರು ಬಿಜೆಪಿಗೆ ಬಹುಮತ ನೀಡುವ ಮೂಲಕ ತಕ್ಕ ಉತ್ತರ ನೀಡಿದ್ದಾರೆ' ಎಂದರು.

## 'ಹೊಸ ನೀತಿ: 50,000 ಜನರ ಉದ್ಯೋಗಕ್ಕೆ ಕುತ್ತು'

**ನವದೆಹಲಿ (ಪಿಟಿಐ):** 'ಪ್ರಯಾಣಿಕರಿಗೆ ಬೈಕ್ ಟ್ಯಾಕ್ಸಿ ಸೇವೆ ಒದಗಿಸುವವರು ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಹೊಂದುವುದು ಕಡ್ಡಾಯ ಎಂಬ ನೀತಿಯ ಅನುಮೋದನೆಯಿಂದ ಸುಮಾರು 50 ಸಾವಿರ ಮಂದಿ ಉದ್ಯೋಗ ಕಳೆದುಕೊಳ್ಳಲಿದ್ದಾರೆ' ಎಂದು ದೆಹಲಿ ಬೈಕ್ ಟ್ಯಾಕ್ಸಿ ಚಾಲಕರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಮತ್ತು ಎಎಪಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ದೆಹಲಿ ವಾಹನಗಳ ಅಗ್ರಿಗೇಟರ್ ಮತ್ತು ಡೆಲಿವರಿ ಸರ್ವೀಸ್ ಪ್ರೊವೈಡರ್ ಯೋಜನೆ–2023' ಅನ್ನು ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಅನುಮೋದಿಸಿದ್ದಾರೆ. ಈ ಹೊಸ ನೀತಿಯು ಶೀಘ್ರದಲ್ಲೇ ಅಧಿಸೂಚನೆ ಯಾಗುವ ಸಾಧ್ಯತೆ ಇದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಪೋಕ್ಸೊ ಪ್ರಕರಣ: ಜ. 11ಕ್ಕೆ ಆದೇಶ

**ನವದೆಹಲಿ (ಪಿಟಿಐ):** ಭಾರತೀಯ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ, ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದಾಖಲಿಸಿರುವ ಪೋಕ್ಸೊ ಪ್ರಕರಣ ಕೈಬಿಡುವುದಕ್ಕೆ ಸಂಬಂಧಿಸಿ ದೆಹಲಿ ಪೊಲೀಸರು ಸಲ್ಲಿಸಿರುವ ವರದಿ ಬಗ್ಗೆ ಜ.11ರಂದು ಆದೇಶ ಪ್ರಕಟಿಸುವುದಾಗಿ ನ್ಯಾಯಾಲಯ ಹೇಳಿದೆ.

ಅಪ್ರಾಪ್ತ ವಯಸ್ಕ ಕುಸ್ತಿಪಟು, ಬ್ರಿಜ್ ಭೂಷಣ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿದ್ದಾರೆ. ಶುಕ್ರವಾರ ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಛವಿ ಕಪೂರ್, 'ಆದೇಶ ಇನ್ನೂ ಸಿದ್ಧವಾಗಿಲ್ಲ' ಎಂದರು.

**ಹೇಳಿಕೆ ಏನು?:** 'ನ್ಯಾಯಾಧೀಶರ ಕೊಠಡಿಯಲ್ಲಿ ಆಗಸ್ಟ್ 1ರಂದು ನಡೆದ ವಿಚಾರಣೆಗೆ ಈ ಕುಸ್ತಿಪಟು ಹಾಜರಾಗಿದ್ದರು.

ಬ್ರಿಜ್ ಭೂಷಣ್ ಶರಣ್ ಸಿಂಗ್

ಪೊಲೀಸರ ತನಿಖೆ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದಾರೆ. ಜೊತೆಗೆ, ಪ್ರಕರಣವನ್ನು ಮುಕ್ತಾಯಗೊಳಿಸುವ ಬಗ್ಗೆ ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ' ಎಂದು ಸರ್ಕಾರಿ ಅಭಿಯೋಜಕ ಅತುಲ್ ಶ್ರೀವಾಸ್ತವ ಹೇಳಿದ್ದಾರೆ.

ಬ್ರಿಜ್ ಭೂಷಣ್ ವಿರುದ್ಧ ತಾನು ಸುಳ್ಳು ದೂರು ನೀಡಿದ್ದು ವಾಪಸ್ ಪಡೆಯುವುದಾಗಿ ಆಕೆಯ ತಂದೆ ಹೇಳಿದ್ದಾರೆ. ಹಾಗಾಗಿ, ಇದರ ಆಧಾರದ ಮೇಲೆ ಪೋಕ್ಸೊ ಪ್ರಕರಣ ಕೈಬಿಡುವ ಬಗ್ಗೆ ಪೊಲೀಸರು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದಾರೆ.

## ಕೀವ್ : 75 ಡ್ರೋನ್‌ಗಳ ದಾಳಿ

**ಕೀವ್, ಉಕ್ರೇನ್ (ಎಎಫ್‌ಪಿ):** ರಷ್ಯಾ ಸೇನೆ ಹಲವು ದಿನಗಳ ನಂತರ ಶನಿವಾರ ನಂತರ ಏಕಕಾಲಕ್ಕೆ 75 ಡ್ರೋನ್‌ಗಳಿಂದ ಉಕ್ರೇನ್‌ನ ಮೇಲೆ ದಾಳಿ ನಡೆಸಿದೆ. ಈ ಪೈಕಿ 74 ಅನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ಸೇನೆ ತಿಳಿಸಿದೆ.

ರಷ್ಯಾ ಸೇನೆಯು ದಾಖಲೆ ಸಂಖ್ಯೆಯಲ್ಲಿ ಇರಾನ್ ನಿರ್ಮಿತ ಶಾಹೇದ್ ಡ್ರೋನ್ ಬಳಸಿ ದಾಳಿ ನಡೆಸಿದೆ. ಇದರ ಪರಿಣಾಮ, ಕೀವ್ ನಗರದ ವಿವಿಧೆಡೆ ವಿದ್ಯುತ್ ಪೂರೈಕೆ ವ್ಯವಸ್ಥೆ ವ್ಯತ್ಯಯವಾಗಿದೆ ಎಂದು ಸೇನೆ ತಿಳಿಸಿದೆ.

ಕೀವ್‌ನಲ್ಲಿ ಈ ದಾಳಿಯಿಂದಾಗಿ 11 ವರ್ಷದ ಬಾಲಕ ಸೇರಿ ಐವರು ಗಾಯಗೊಂಡಿದ್ದಾರೆ. ಸುಮಾರು 6 ಗಂಟೆ ದಾಳಿ ನಡೆಯಿತು ಎಂದು ಉಕ್ರೇನ್ ವಾಯುಪಡೆಯ ಜನರಲ್ ಮೈಕೊಲ ಒಲೆಶ್‌ಚುಕ್ ತಿಳಿಸಿದರು.

ಡ್ರೋನ್ ಉರುಳಿ ಬಿದ್ದ ಸ್ಥಳದಲ್ಲಿ ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಕೀವ್‌ನ ಮೇಯರ್ ವಿಟಲಿ ಲಿಟ್ಸ್‌ಕೊ ತಿಳಿಸಿದ್ದಾರೆ.

## ಗಾಜಾ ಬಿಕ್ಕಟ್ಟಿನ ಸ್ಥಿತಿಗೆ 26/11ರ ದಾಳಿ ಹೋಲಿಕೆ

**ಮುಂಬೈ (ಪಿಟಿಐ):** ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಬಿಕ್ಕಟ್ಟಿಗೂ, ಮುಂಬೈನಲ್ಲಿ ನಡೆದಿದ್ದ 26/11ರ ಭಯೋತ್ಪಾದಕರ ದಾಳಿ ಕೃತ್ಯಕ್ಕೂ ಹೋಲಿಕೆಯಿದೆ ಎನ್ನುತ್ತಾರೆ ಮೋಶೆ ಹೊಟ್ಜ್ ಬರ್ಗ್.

ಇವರು, 26/11ರ ಉಗ್ರರ ದಾಳಿಯಲ್ಲಿ ತಂದೆ– ತಾಯಿ ಕಳೆದುಕೊಂಡಿದ್ದ 'ಬೇಬಿ ಮೋಶೆ' ಅವರ ಚಿಕ್ಕಪ್ಪ. ಬೇಬಿ ಮೋಶೆ ಈಗ 17ರ ಯುವಕ.

'ಗಾಜಾದಲ್ಲಿ ಹಮಾಸ್ ಬಂಡುಕೋರರು ಹಲವು ಮಕ್ಕಳನ್ನು ಒತ್ತೆ ಇರಿಸಿಕೊಂಡಿದ್ದಾರೆ. ಅದನ್ನು ನೋಡಿ ನನಗೆ ಉಗ್ರ ದಾಳಿ ವೇಳೆ ಹೋಟೆಲ್‌ನಲ್ಲಿ ಸಿಲುಕಿದ್ದ ಬೇಬಿ ಮೋಶೆ ಸ್ಥಿತಿ ನೆನಪಾಯಿತು' ಎಂದು ಹೊಟ್ಜ್ ಸ್ಮರಿಸಿದರು.

26/11ರ ಕೃತ್ಯ ಘಟಿಸಿ 15 ವರ್ಷ ಕಳೆಯುತ್ತಿರುವ ಹೊತ್ತಿನಲ್ಲಿ ಅಮೆರಿಕದಿಂದ ನಗರವೊಂದರಿಂದ ದೂರವಾಣಿಯಲ್ಲಿ ಪಿಟಿಐ ಸುದ್ದಿಸಂಸ್ಥೆ ಜೊತೆಗೆ ಅವರು ಮಾತನಾಡಿದರು.

ಪಾಕ್ ಮೂಲದ ಲಷ್ಕರ್ ಎ ತಯಬಾ ಸಂಘಟನೆಯ ಉಗ್ರರು ಅಂದು ಮುಂಬೈನಲ್ಲಿ ದಾಳಿ ಮಾಡಿದ್ದರು. ವಿದೇಶಿಯರು ಸೇರಿದಂತೆ ಹಲವರು ಅಂದಿನ ದಾಳಿಯಲ್ಲಿ ಮೃತಪಟ್ಟಿದ್ದರು.

ಒತ್ತೆಯಾಳುಗಳ ಮನಸ್ಥಿತಿ, ಅಂತಹ ಪರಿಸ್ಥಿತಿಯು ಭಾರತಕ್ಕೆ ಚೆನ್ನಾಗಿ ಅರ್ಥವಾಗಲಿದೆ. 'ಬೇಬಿ ಮೋಶೆ' ಅಂದು ಉಗ್ರರ ಒತ್ತೆಯಾಳುಗಳಲ್ಲಿ ಒಬ್ಬನಾಗಿದ್ದ. ಈಗ ಹಮಾಸ್ ಬಂಡುಕೋರರು ಒತ್ತೆ ಇರಿಸಿಕೊಂಡಿರುವವರಲ್ಲಿ 12ಕ್ಕೂ ಹೆಚ್ಚು ಮೋಶೆಗಳಿದ್ದಾರೆ.

17ರ ವಯಸ್ಸಿನ ಮೋಶೆ ಈಗ ವಿದ್ಯಾರ್ಥಿ. ಇಸ್ರೇಲ್‌ನಲ್ಲಿ ಇರುವ 'ಬೇಬಿ ಮೋಶೆ'ಗೆ ಸಂದರ್ಭದ ವಸ್ತುಸ್ಥಿತಿ ಗೊತ್ತಿದೆ. ಆತ ಕೇವಲ ಗುಂಡಿನ ಚಕಮಕಿ ಬಗ್ಗೆ ಮಾತನಾಡುವುದಿಲ್ಲ. ಬಾಲ್ಯದಲ್ಲಿ ಅದರ ಜೊತೆಗೆ ಜೀವಿಸಿದ್ದ' ಎಂದರು.

'ಅಲ್ಲದೆ, ಈಗ ದಾಳಿ ಗಾಜಾದ ಮೇಲಷ್ಟೇ ನಡೆಯುತ್ತಿಲ್ಲ. ಟೆಲ್‌ಅವೀವ್, ಇಸ್ರೇಲ್‌ನ ವಿವಿಧೆಡೆಯೂ ಕ್ಷಿಪಣಿ ದಾಳಿ ನಡೆಯುತ್ತಿದೆ. ಅಲ್ಲಿ ಸ್ವಯಂ ರಕ್ಷಣಾ ವ್ಯವಸ್ಥೆ ಇರುವ ಕಾರಣ ಅಲ್ಲಿ ಜನ ಉಳಿದುಕೊಂಡಿದ್ದಾರೆ' ಎಂದು ಹೇಳಿದರು.

ಗಾಜಾಪಟ್ಟಿ: ಒಪ್ಪಂದದಂತೆ 14 ಒತ್ತೆಯಾಳು, 42 ಕೈದಿಗಳ ಬಿಡುಗಡೆಗೆ ತುಸು ಹಿನ್ನಡೆ

# 2ನೇ ಹಂತದಲ್ಲಿ ಒತ್ತೆಯಾಳುಗಳ ಬಿಡುಗಡೆ ವಿಳಂಬ

**ಜೆರುಸಲೇಂ (ಎಎಫ್‌ಪಿ):** ಕದನವಿರಾಮ ಒಪ್ಪಂದದಂತೆ 2ನೇ ಹಂತದಲ್ಲಿ ಒತ್ತೆಯಾಳುಗಳ ಬಿಡುಗಡೆ ಪ್ರಕ್ರಿಯೆಯನ್ನು ಹಮಾಸ್ ವಿಳಂಬ ಮಾಡಿದೆ. ನಿಗದಿಯಂತೆ 14 ಒತ್ತೆಯಾಳುಗಳ ಬಿಡುಗಡೆ ಆಗಬೇಕಿತ್ತು.

ಕದನವಿರಾಮ ಒಪ್ಪಂದ ನಿಯಮಗಳಿಗೆ ಇಸ್ರೇಲ್ ಬದ್ಧವಾಗಿರುವ ಕುರಿತು ಸ್ಪಷ್ಟತೆ ಸಿಗುವವರೆಗೂ ಒತ್ತೆಯಾಳುಗಳ ಬಿಡುಗಡೆ ವಿಳಂಬ ಮಾಡಲಾಗುವುದು ಎಂದು ಹಮಾಸ್ ಶನಿವಾರ ತಿಳಿಸಿದೆ.

ಮಾನವೀಯ ನೆಲೆ ಒದಗಿಸಲು ಗಾಜಾಪಟ್ಟಿಗೆ ಪ್ರವೇಶ ಹಾಗೂ ಇಸ್ರೇಲ್‌ನಿಂದ ಯುದ್ಧ ಕೈದಿಗಳ ಬಿಡುಗಡೆ ಇರುವ ಮಾನದಂಡ ಕುರಿತಂತೆ ಪ್ರಶ್ನೆಗಳಿವೆ ಎಂದು ಹಮಾಸ್‌ನ ಎಜೆಡ್ಡೈನ್ ಅಲ್ ಖಾಸಂ ಬ್ರಿಗೇಡ್ ಹೇಳಿಕೆ ನೀಡಿದೆ.

'ಮಹಿಳೆಯರು ಸೇರಿ 42 ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತದೆ. ಒಬ್ಬ ಒತ್ತೆಯಾಳು ಬಿಡುಗಡೆಗೆ ಪ್ರತಿಯಾಗಿ ಮೂವರು ಕೈದಿಗಳ ಬಿಡುಗಡೆಗೆ ಒಪ್ಪಂದವಾಗಿದೆ' ಎಂದು ಇಸ್ರೇಲ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಬಿಡುಗಡೆಯಾಗುವ 14 ಒತ್ತೆಯಾಳುಗಳ ವಿವರದ ಪಟ್ಟಿ ತಲುಪಿದೆ ಎಂದು ಇಸ್ರೇಲ್‌ನ ಪ್ರಧಾನಮಂತ್ರಿ ಕಚೇರಿ ತಿಳಿಸಿತ್ತು. ಆದರೆ, ಕೊನೆಗಳಿಗೆಯಲ್ಲಿ ಬಿಡುಗಡೆ ವಿಳಂಬವಾಯಿತು.

ಕದನ ವಿರಾಮದ 2ನೇ ದಿನವಾದ ಶನಿವಾರ ದಕ್ಷಿಣ ಗಾಜಾಪಟ್ಟಿಯಲ್ಲಿ ಜನ ಅಡುಗೆ ಅನಿಲ ಸಿಲಿಂಡರ್ ತೆಗೆದುಕೊಂಡು ಹೋಗುತ್ತಿರುವುದು —ಎಎಫ್‌ಪಿ ಚಿತ್ರ

ಗಾಜಾಪಟ್ಟಿಯಲ್ಲಿ ನಿಗದಿಯಂತೆ ರೆಡ್‌ಕ್ರಾಸ್ ಪ್ರತಿನಿಧಿಗಳಿಗೆ ಒತ್ತೆಯಾಳುಗಳ ಹಸ್ತಾಂತರವಾಗಿಲ್ಲ ಎಂದು ಇಸ್ರೇಲ್‌ನ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ಒತ್ತೆಯಾಳುಗಳ ಬಿಡುಗಡೆಯು ಇಸ್ರೇಲ್‌ನಲ್ಲಿ ಕುಟುಂಬ ಸದಸ್ಯರಿಗೆ ಸಮಾಧಾನ ಮೂಡಿಸಿದೆ. ಬಿಡುಗಡೆ ಪ್ರಕ್ರಿಯೆ ವಿಳಂಬವಾಗಿದ್ದರಿಂದ ಕುಟುಂಬ ಸದಸ್ಯರಲ್ಲಿ ಆತಂಕದ ವಾತಾವರಣ ಮೂಡಿತ್ತು. ಪ್ರತ್ಯೇಕ ಒಪ್ಪಂದದ ಅನುಸಾರ, ಥಾಯ್ಲೆಂಡ್‌ನ 10 ಮತ್ತು ಫಿಲಿಪಿನೊದ ಒಬ್ಬ ಪ್ರಜೆಯನ್ನು ಶುಕ್ರವಾರ ಬಿಡುಗಡೆ ಮಾಡಲಾಗಿತ್ತು.

**ಗೆಳೆಯ ಜೀವಂತ, ಯುವತಿಗೆ ಸಂಭ್ರಮ:** ಹಮಾಸ್ ದಾಳಿಯಿಂದ ಮೃತಪಟ್ಟಿದ್ದ 40 ಥಾಯ್ ಪ್ರಜೆಗಳಲ್ಲಿ ಗೆಳೆಯ ಸೇರಿದ್ದಾನೆ ಎಂದು ಭಾವಿಸಿದ್ದ ಬ್ಯಾಂಕಾಕ್ ಯುವತಿ ಕಿಟ್ಟಿಯ ತುಯೆಂಗ್ ಸಯೆಂಗ್‌ಗೆ ಅನಿರೀಕ್ಷಿತ ಸಂಭ್ರಮ.

ಹಮಾಸ್ ಬಿಡುಗಡೆ ಮಾಡಿದ್ದ ಒತ್ತೆಯಾಳುಗಳಲ್ಲಿ ಈಕೆಯ 28 ವರ್ಷದ ಗೆಳೆಯನೂ ಇದ್ದ. 'ನನ್ನ ಕಣ್ಣನ್ನೇ ನಂಬಲಾಗುತ್ತಿಲ್ಲ. ಬೆಳಿಗ್ಗೆ ಆತನ ಜೊತೆಗೆ ಚಾಟ್ ಮಾಡಿದೆ. ಆತನಲ್ಲಿ ನಗುವಿತ್ತು' ಎಂದು ಕಿಟ್ಟಿಯ ಹೇಳಿದರು.

**ಬದುಕಿದ್ದೇನೆ ಎಂದು ಒತ್ತೆಯಾಳು ಸಂದೇಶ:** 'ನಾನು ಬದುಕಿದ್ದೇನೆ. ಅಮ್ಮ ನಿಗೂ ಹೇಳು. ಬರುತ್ತಿದ್ದೇನೆ' ಎಂದು ಬಿಡುಗಡೆಯಾದ ಒತ್ತೆಯಾಳು, ಬ್ಯಾಂಕಾಕ್‌ನ ನಿವಾಸಿ ವೆಟೂನ್ ತನ್ನ ತಮ್ಮ ರೂಂಗರೂನ್‌ಗೆ ಸಂದೇಶ ನೀಡಿದ್ದಾನೆ. ವೆಟೂನ್ 5 ವರ್ಷದಿಂದ ಇಸ್ರೇಲ್‌ನಲ್ಲಿ ನೆಲೆಸಿದ್ದರು. ಹಮಾಸ್ ಬಂಡುಕೋರರು ದಾಳಿ ಬಳಿಕ ಒತ್ತೆಯಾಳಾಗಿ ಕರೆದೊಯ್ದಿದ್ದ 10 ಮಂದಿ ಥಾಯ್ ಪ್ರಜೆಗಳಲ್ಲಿ ಒಬ್ಬರಾಗಿದ್ದರು.

ನಾನು ಬದುಕಿದ್ದೇನೆ, ಸತ್ತಿಲ್ಲ ಎಂದು ಅಣ್ಣ ಉದ್ಗರಿಸಿದ. ಆತ ಉಳಿದಿರುವುದು ಪವಾಡ ಎಂದು ರೂಂಗರೂನ್ ಸಂತಸಪಟ್ಟರು. 'ಗಾಜಾದಲ್ಲಿ ದೇಶದ 20 ಪ್ರಜೆಗಳು ಒತ್ತೆಯಾಳಾಗಿದ್ದಾರೆ' ಎಂದು ಥಾಯ್ಲೆಂಡ್ ಸರ್ಕಾರ ತಿಳಿಸಿದೆ.

## ಇಸ್ರೇಲ್ ಹಡಗು ಗುರಿಯಾಗಿಸಿ ಡ್ರೋನ್ ದಾಳಿ

**ದುಬೈ (ಎ.ಪಿ):** ಇಸ್ರೇಲ್ ಉದ್ಯಮಿಯೊಬ್ಬರ ಮಾಲೀತ್ವದ ಸರಕುಸಾಗಣೆ ಹಡಗಿನ ಮೇಲೆ ಅರಬ್ಬಿ ಸಮುದ್ರದಲ್ಲಿ, ಶಂಕಿತ ಇರಾನಿಯರಿಂದ ಡ್ರೋನ್ ದಾಳಿ ನಡೆದಿದೆ.

ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ಯುದ್ಧದ ಹಿನ್ನೆಲೆಯಲ್ಲಿ ದಾಳಿ ನಡೆದಿರಬಹುದು ಎಂದು ಅಮೆರಿಕದ ರಕ್ಷಣಾ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಅಮೆರಿಕದ ಅಧಿಕಾರಿಯೊಬ್ಬರು, ಯೂರೋಪ್‌ನ ದ್ವೀಪರಾಷ್ಟ್ರ ಮಾಲ್ಟಾದಿಂದ, ಸಿಎಂಎ ಸಿಜಿಎಂ ಸಿಮಿ ಹೆಸರಿನ ಈ ಹಡಗು ಹೊರಟಿತ್ತು ಎಂದರು.

'ಬಾಂಬ್ ಅಳವಡಿಸಿದ್ದ ಶಹೀದ್ 136 ಡ್ರೋನ್ ದಾಳಿ ನಡೆದಿದೆ. ಡ್ರೋನ್ ಸ್ಫೋಟವಾಗಿ, ಹಡಗಿಗೆ ಭಾಗಶಃ ಹಾನಿಯಾಗಿದೆ. ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ' ಎಂದು ವಿವರಿಸಿದರು.

ಇರಾನ್ ಬೆಂಬಲಿತ ಹೆಜ್ಬಲ್ಲಾ ಜೊತೆಗೆ ಗುರುತಿಸಿಕೊಂಡಿರುವ ಅರಬ್‌ನ ಟಿ.ವಿ ವಾಹಿನಿ ಅಲ್ ಮಯಾದೀನ್ ಈ ಕುರಿತು ವರದಿ ಮಾಡಿದೆ. ಆದರೆ, ಸುದ್ದಿಯ ಮೂಲವನ್ನು ಉಲ್ಲೇಖಿಸಿಲ್ಲ.

ಮನೋಹರ ದೃಶ್ಯಕಾವ್ಯ 11

ಪ್ರಯೋಗಸುಖಿ ಬಹುಮುಖಿ 12

ವನ್ಯಾಲಯದ ದಿವ್ಯಾನುಭವ 13



# ರಿಯಾಲಿಟಿ ಶೋ ಹೊರಳು, ಮರುಳು

ರಿಯಾಲಿಟಿ ಶೋಗಳ ಜಾಯಮಾನ ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ. ಹಿಂದೆ ಸುಪ್ತ ಪ್ರತಿಭೆಯೊಂದೇ ವೇದಿಕೆಗಳಿಗೆ ಬೇಕಿತ್ತು. ಈಗ ಅವರ ವೈಯಕ್ತಿಕ ಬದುಕಿನ ಕಥನಗಳೂ ಬೇಕು. ಇನ್ನು 'ಬಿಗ್ ಬಾಸ್' ಈ ಬಾರಿ ತೆರೆದಿಡುತ್ತಿರುವ ಮಾದರಿಯಂತೂ ಚರ್ಚೆಗೆ ಒಳಪಟ್ಟಿದೆ.

**ಸುಮಾ ಬಿ.**

'ರಿಯಾಲಿಟಿ ಶೋ...'– ಬಹುತೇಕರ ಕಣ್ಣರಳಿಸುವಂತೆ, ಕಿವಿ ನಿಮಿರಿಸುವಂತೆ ಮಾಡುವ ಪದಪುಂಜ. ಪ್ರತಿಭೆಯನ್ನು ಒರೆಗೆ ಹಚ್ಚಿ, ಸಾಣೆ ಹಿಡಿದು ಹೊರಜಗತ್ತಿಗೆ ಪರಿಚಯಿಸುವ ವೇದಿಕೆ. ಪುಟ್ಟ ಪರದೆ ಮೇಲೆ ಪ್ರೇಕ್ಷಕರಿಗೆ ಬಹುದೊಡ್ಡ ಮನರಂಜನೆ ನೀಡುವ ಉಮೇದು. ಇಲ್ಲಿ ಬೆಳಕು ಕಂಡ ಅನೇಕ ಪ್ರತಿಭೆಗಳ ಭವಿತವ್ಯವೂ ಹಸನಾಗಿದೆ. ಹಲವರು ಈ ವೇದಿಕೆ ಮೂಲಕವೇ ಬದುಕಿನ ಪಯಣದ ದಿಕ್ಕನ್ನೂ ಬದಲಿಸಿಕೊಂಡಿದ್ದಾರೆ.

ನಗರದ ನಂಟು ಇರದ, ಸಂಗೀತದ ತಾಳ– ಲಯದ ಅರಿವಿರದ, ತನ್ನಷ್ಟಕ್ಕೆ ತಾನು ಹಾಡಿಕೊಳ್ಳುತ್ತಿದ್ದ ಕುಗ್ರಾಮದ ಪ್ರತಿಭೆಯೊಂದು ಟಿ.ವಿ ಪರದೆ ಮೇಲೆ ಇನ್ನಿಲ್ಲದ ಹೆಸರು ಮಾಡಿತು. ಶಾಲಾ ವಾರ್ಷಿಕೋತ್ಸವಕ್ಕೆ ಸೀಮಿತವಾಗಬೇಕಿದ್ದ ಹಲವು ಮಕ್ಕಳ ಕಲಾವಂತಿಕೆ ದೊಡ್ಡ ವೇದಿಕೆಯಲ್ಲಿ ಮಿನುಗುವಂತೆ ಮಾಡಿದ ಹೆಗ್ಗಳಿಕೆಯೂ ರಿಯಾಲಿಟಿ ಶೋಗಳದ್ದು.

ಇಂತಹ ಹಲವು ಹೊಳಹುಗಳ ನಡುವೆಯೂ ಅನೇಕರಲ್ಲಿ ಬೇಸರ ತುಂಬಿದ, ಹಿಂಸೆ ಉಣಿಸಿದ ಕುಖ್ಯಾತಿಯನ್ನೂ ರಿಯಾಲಿಟಿ ಶೋಗಳು ಅಂಟಿಸಿಕೊಂಡಿವೆ.

ಮೆಲ್ಲಗೆ ಮಗ್ಗಲು ಹೊರಳಿಸುವ ರಿಯಾಲಿಟಿ ಶೋಗಳು ಸ್ಪರ್ಧಿಗಳಲ್ಲಿ ಕಣ್ಣೀರಿನ ಕಥೆಗಳನ್ನು ಹುಡುಕುತ್ತಿವೆ ಎನ್ನುವ ಭಾವವೊಂದು ವ್ಯಕ್ತವಾಗುತ್ತಿದೆ. ವೀಕ್ಷಕರು ಬಯಸುವುದೂ ಅದನ್ನೇ ಅಲ್ಲವೇ ಎನ್ನುವ ಧ್ವನಿಯೂ ಕಿವಿಗಪ್ಪಳಿಸುತ್ತದೆ. ಸಂಗೀತ ಪ್ರತಿಭೆಯನ್ನು ಹುಡುಕುವ ರಿಯಾಲಿಟಿ ಶೋಗಳಲ್ಲಿ ಈಗ ಹಿನ್ನೆಲೆಯ ಕಥೆಯೊಂದು ಇರಲೇಬೇಕು. ಸ್ಪರ್ಧಿಯ ವೈಯಕ್ತಿಕ ಬದುಕು ಮುನ್ನೆಲೆಗೆ ಬಂದಾಗಲೇ ಆ ಕಾರ್ಯಕ್ರಮಕ್ಕೊಂದು ವೀಕ್ಷಕ ವಲಯ ಸೃಷ್ಟಿಯಾಗುತ್ತದೆ. ಭಾವೋದ್ವೇಗದ, ಕಣ್ಣೀರಿನ, ಅಸಹಾಯಕತೆಯ ಕಥೆ ಇದ್ದರೆ ಆ ಶೋ ಅತಿ ಹೆಚ್ಚು ವೀಕ್ಷಕರನ್ನು ಪಡೆಯುತ್ತದೆ.

'ಬಿಗ್ ಬಾಸ್' 10ನೇ ಆವೃತ್ತಿಯಲ್ಲಿ ಸ್ಪರ್ಧಿಯೊಬ್ಬರಿಗೆ ಶಿಕ್ಷೆಯ ರೂಪದಲ್ಲಿ ಸಗಣಿ ನೀರನ್ನು ಎರಚಲಾಯಿತು. ಅದನ್ನು ಉಳಿದ ಸ್ಪರ್ಧಿಗಳು ಆಡಿಕೊಂಡು ಖುಷಿಪಟ್ಟರು. ಈ ಎಪಿಸೋಡ್ ಸಾಮಾಜಿಕ ಜಾಲತಾಣದಲ್ಲಿಯೂ ವೈರಲ್ ಆಯಿತು. ಮತ್ತೊಬ್ಬರಿಗೆ ಹಿಂಸೆ ಕೊಡುತ್ತಲೇ, ಮನರಂಜನೆಯ ಭಾಗವಾಗಿ ಆ ಎಪಿಸೋಡ್ ವಿಜೃಂಭಿಸಿತು. 'ಹುಲಿ ಉಗುರು', 'ಜಾತಿ ನಿಂದನೆ'ಯ ಕಾರಣಕ್ಕೆ ಎರಡು ಪ್ರಕರಣಗಳು ಈ ಬಾರಿಯ 'ಬಿಗ್ ಬಾಸ್' ಸ್ಪರ್ಧಿಗಳ ವಿರುದ್ಧ ಪೊಲೀಸ್ ಠಾಣೆ ಮೆಟ್ಟಿಲೇರಿದ್ದನ್ನೂ ಕಂಡೆವು. ಇಂತಹ ಹಲವು ವಿವಾದಗಳನ್ನು ಹೊತ್ತಿರುವ 'ಬಿಗ್ ಬಾಸ್' ತನ್ನ ಹಿಂದಿನ ಎಲ್ಲ ಆವೃತ್ತಿಗಳಿಗಿಂತಲೂ ಅತಿ ಹೆಚ್ಚು ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡು ಮುನ್ನುಗ್ಗುತ್ತಿದೆ. ವಾರಾಂತ್ಯವಲ್ಲದೇ, ವಾರದ ದಿನಗಳಲ್ಲೂ ಟಿಆರ್‌ಪಿಯಲ್ಲಿ (ಟೆಲಿವಿಷನ್ ರೇಟಿಂಗ್ ಪಾಯಿಂಟ್) ಮೇಲ್ಮುಖ ಚಲನೆ ಕಾಣುತ್ತಿರುವುದು ಗಮನಾರ್ಹ. ಹಾಗಾದರೆ ವೀಕ್ಷಕರೂ ಇಂತಹದ್ದನ್ನೇ ಕಣ್ತುಂಬಿಕೊಳ್ಳಲು ಬಯಸುತ್ತಿದ್ದಾರೆಯೇ ಎನ್ನುವ ಪ್ರಶ್ನೆಯೊಂದು ಮೊಳಕೆಯೊಡೆಯುತ್ತದೆ.

ಜಿಯೋ ಸಿನಿಮಾದಲ್ಲಿ ಇದೇ ನವೆಂಬರ್‌ನಿಂದ 'ಟೆಂಪ್ಟೇಶನ್ ಐಲ್ಯಾಂಡ್' ರಿಯಾಲಿಟಿ ಶೋ ಆರಂಭವಾಗಿದೆ. 'ಪ್ಯಾರ್ ಕಿ ಪರೀಕ್ಷಾ' ಎನ್ನುವ ಟ್ಯಾಗ್‌ಲೈನ್ ಅಂಟಿಸಿಕೊಂಡಿರುವ ಈ ಶೋ, ಪ್ರೇಮಿಗಳ ನಡುವೆ ವ್ಯಕ್ತಿಯೊಬ್ಬರನ್ನು ಬಿಟ್ಟು ಪ್ರೀತಿಯನ್ನು ಪರೀಕ್ಷೆಗೊಳಪಡಿಸುತ್ತದೆ. ಶೋ ಆರಂಭವಾದ ಮೂರ್ನಾಲ್ಕು ವಾರಗಳಲ್ಲೇ ಹಲವು ಸ್ಪರ್ಧಿಗಳು ಕಣ್ಣೀರು ಹಾಕಿದ್ದಾರೆ. ತಮ್ಮ ಪ್ರೀತಿಯ ಬಗ್ಗೆ ಅನುಮಾನಗೊಂಡು ಕುಸಿದಿದ್ದಾರೆ. ನಿರ್ಮಲ ಪ್ರೀತಿಯನ್ನು ಪಣಕ್ಕೊಡ್ಡುವ ಇಂತಹ ರಿಯಾಲಿಟಿ ಶೋಗಳು ಸಮಾಜಕ್ಕೆ ನೀಡುವ ಸಂದೇಶವಾದರೂ ಏನು ಎನ್ನುವ ಪ್ರಶ್ನೆಯೂ ಈಗ ಎದ್ದಿದೆ.

1972ರಲ್ಲಿ ಬೋರ್ನ್‌ವೀಟಾ ರಸಪ್ರಶ್ನೆ ಸ್ಪರ್ಧೆಯೊಂದನ್ನು ಡೆರೆಕ್ ಒಬ್ರಿಯಾನ್ ನಡೆಸಿದರು. ಝೀ ವಾಹಿನಿ ಹಾಗೂ ದೂರದರ್ಶನದಲ್ಲಿ ಪ್ರಸಾರಗೊಂಡ ಇದು ಭಾರತದ ಮೊದಲ ರಿಯಾಲಿಟಿ ಶೋ ಎಂದೆನಿಸಿಕೊಂಡಿದೆ. ಮಕ್ಕಳಲ್ಲಿ ಸ್ಪರ್ಧಾ ಮನೋಭಾವ ಬೆಳೆಸುವುದರ ಭಾಗವಾಗಿ ಆರಂಭವಾದ ರಿಯಾಲಿಟಿ ಶೋಗಳು ಈಗ ಬೇರೊಬ್ಬರ ಖಾಸಗೀತನವನ್ನು ಬಹಿರಂಗಗೊಳಿಸಲು ಸ್ಪರ್ಧೆಗಿಳಿದಂತೆ ಭಾಸವಾಗುತ್ತಿವೆ. ಇದನ್ನೇ ವೀಕ್ಷಕ ವಲಯ ಒಪ್ಪಿಕೊಳ್ಳುತ್ತಿದೆ, ಅಪ್ಪಿಕೊಳ್ಳುತ್ತಿದೆ.

**ಜನರ ಅಭಿರುಚಿಗೆ ಕನೆಕ್ಟ್ ಆದಾಗ ಯಾವುದೇ ಕಾರ್ಯಕ್ರಮಗಳು ಯಶಸ್ವಿಯಾಗಲು ಸಾಧ್ಯ. ಅದೇ ರೀತಿ 10ನೇ ಆವೃತ್ತಿ 'ಹ್ಯಾಪಿ ಬಿಗ್ ಬಾಸ್' ಎನ್ನುವ ಥೀಮ್ ಅನ್ನು ಜನ ಸ್ವೀಕರಿಸಿದ್ದಾರೆ. ಈ ಬಾರಿ ಸೆಲೆಬ್ರಿಟಿಗಳಿಗಿಂತ ಭಿನ್ನ ವ್ಯಕ್ತಿತ್ವ ಹೊಂದಿರುವ ಸ್ಪರ್ಧಿಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇದು ಕೂಡ ದೊಡ್ಡ ಯಶಸ್ಸಿಗೆ ಕಾರಣವಾಗಿದೆ. 'ಹುಲಿ ಉಗುರು' ಧರಿಸುವುದು ತಪ್ಪು ಎಂಬ ಜಾಗೃತಿಯನ್ನು ಈ ಬಾರಿಯ 'ಬಿಗ್ ಬಾಸ್' ಮನೆ ಮೂಡಿಸಿದೆ.**

**ಪ್ರಶಾಂತ್ ನಾಯಕ್**
ಬಿಸಿನೆಸ್ ಹೆಡ್, ಕಲರ್ಸ್ ಕನ್ನಡ



## ಕಂಟೆಂಟ್ ಕಡಿಮೆ; ಮಸಾಲ ಜಾಸ್ತಿ

ಈಗಿನ ಯಾವುದೇ ರಿಯಾಲಿಟಿ ಶೋ ಇರಲಿ, ಅದು ಕಥೆಯೊಂದನ್ನು ಹುಡುಕುತ್ತದೆ. ಸ್ಪರ್ಧಿಯ ಅಸಹಾಯಕತೆಯನ್ನೇ ಬಂಡವಾಳವಾಗಿಸಿಕೊಳ್ಳುತ್ತದೆ. ಅಪ್ಪಟ ಪ್ರತಿಭೆ ಬೆಳಕಿಗೆ ಬರುವುದು ಇತ್ತೀಚೆಗೆ ಕಡಿಮೆಯಾಗುತ್ತಿದೆ. ಒಂದು ಉತ್ಪನ್ನ ಮಾರಾಟ ಮಾಡಬೇಕೆಂದರೆ ಗ್ರಾಹಕರ ಬೇಡಿಕೆಗೆ ತಕ್ಕಂತೆ ಉತ್ಪಾದಿಸುವುದು ಅನಿವಾರ್ಯ. ಅದೇ ರೀತಿ ವೀಕ್ಷಕ ವಲಯ ಬಯಸೋದನ್ನೇ ಶೋಗಳು ನೀಡುತ್ತಿವೆ. ಪರಿಣಾಮ ಕಂಟೆಂಟ್ ಕಡಿಮೆ; ಮಸಾಲ ಜಾಸ್ತಿ ಆಗುತ್ತಿದೆ. ಮೊದಲು ನಾವು ನಮ್ಮ ಜವಾಬ್ದಾರಿಯನ್ನು ಮರೆಯಬೇಕು. ಯಾವುದನ್ನು ಮಕ್ಕಳ ಜತೆ ಕೂತು ನೋಡುತ್ತಿದ್ದೇವೆ, ಅದು ಮಕ್ಕಳ ಮೇಲೆ ಬೀರುವ ಪರಿಣಾಮ ಏನು? ಅನ್ನುವುದರ ಅರಿವಿರಬೇಕು. ಈ ಕಾರಣಕ್ಕೇ ಈಚೆಗೆ 'ಮಕ್ಕಳೊಂದಿಗೆ ಬಿಗ್ ಬಾಸ್ ನೋಡಬೇಡಿ' ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ವಯಸ್ಸಿನ ಮಿತಿ ಎನ್ನುವುದು ಪ್ರತಿ ಶೋಗೂ ಇರುತ್ತದೆ. ಟಿ.ವಿ.ಗಳಲ್ಲಿ ಹಾಗಲ್ಲ. ಯಾರು ಬೇಕಾದರೂ ನೋಡಬಹುದು. ಹಾಗಾಗಿ, ಪೋಷಕರಾದ ನಾವು ಮಕ್ಕಳ ಬೆಳವಣಿಗೆಗೆ, ನನ್ನ ಮನೆಯ ಸ್ವಾಸ್ಥ್ಯಕ್ಕೆ ಯಾವುದು ಮುಖ್ಯ, ಯಾವುದು ಅಲ್ಲ ಎನ್ನುವುದನ್ನು ನಿರ್ಧರಿಸಬೇಕು.

ಈಗೀಗ 'ಎನಿ ಪಬ್ಲಿಸಿಟಿ ಈಸ್ ಗುಡ್ ಪಬ್ಲಿಸಿಟಿ' ಎನ್ನುವ ಭಾವನೆ ಅನೇಕರಲ್ಲಿ ಅವಿತಿದೆ. ಸಕಾರಾತ್ಮಕ ಅಂಶಗಳಿಂದಲೇ ಪ್ರಚಾರ ಸಿಗಬೇಕೆಂದೇನೂ ಇಲ್ಲ. ಒಟ್ಟಿನಲ್ಲಿ ಪ್ರಚಾರ ಸಿಕ್ಕರೆ ಸಾಕು ಎನ್ನುವ ಭಾವ ಬಹುತೇಕರದ್ದು. ಈ ಕಾರಣಕ್ಕೇ ರಿಯಾಲಿಟಿ ಶೋಗಳಲ್ಲಿ ಡಬಲ್ ಮೀನಿಂಗ್ ಪದ ಬಳಕೆ, ಪರಸ್ಪರ ಬೈದುಕೊಳ್ಳುವುದು, ಹೊಡೆದಾಡಿಕೊಳ್ಳುವುದು ಹೆಚ್ಚಾಗುತ್ತಿದೆ.

**ಕಾವ್ಯಾ ಶಾಸ್ತ್ರಿ,** ನಟಿ, ಬಿಗ್‌ಬಾಸ್ 4ನೇ ಆವೃತ್ತಿಯ ಸ್ಪರ್ಧಿ

## ಆಯ್ಕೆಯ ಸ್ವಾತಂತ್ರ್ಯ ಪ್ರೇಕ್ಷಕರದು

ಟಿ.ವಿ ಶೋ, ಒಟಿಟಿಯಲ್ಲಿನ ವೆಬ್ ಸರಣಿಗಳಿಗೆ ಸೆನ್ಸಾರ್ ಇಲ್ಲ. ಆದರೆ ಸಿನಿಮಾಗಳಿಗೆ ಮಾತ್ರ ಸೆನ್ಸಾರ್ ಇದೆ. ಹಲವು ವಿಷಯ– ವಸ್ತುಗಳನ್ನು ತೋರಿಸದಿರುವುದರ ನಡುವೆ ನಾವು ಸಿನಿಮಾ ಮಾಡಬೇಕು. ಟಿ.ವಿ. ಶೋಗಳಿಗೆ ಇದಾವುದರ ಕಟ್ಟುಪಾಡು ಇಲ್ಲ. ಕಟ್ಟುಪಾಡುಗಳು ಇರುವುದರಿಂದಲೇ ಸಿನಿಮಾಗಳು ಮೌಲ್ಯಗಳನ್ನು ಉಳಿಸಿಕೊಂಡಿವೆ. ಬದಲಾವಣೆ ಎಲ್ಲ ಕ್ಷೇತ್ರಗಳಲ್ಲೂ ಆಗುತ್ತಿದೆ. ಈಗಿನ ವೀಕ್ಷಕ ಬಯಸಿದ್ದನ್ನು ಟಿ.ವಿ. ಶೋಗಳು ನೀಡುತ್ತಿವೆ. ನೋಡುಗರಾದ ನಾವು ನಮ್ಮ ಪ್ರಜ್ಞೆ ಮರೆಯಬಾರದು. ಇಂಥದ್ದು ಬೇಕು, ಬೇಡ ಎನ್ನುವುದು ಆಯಾ ವ್ಯಕ್ತಿಯ ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಆ ಮನಃಸ್ಥಿತಿ ಬಯಸೋದನ್ನೇ ಪುಟ್ಟ ಪರದೆ ತೋರಿಸುತ್ತದೆ ಅಷ್ಟೇ.

ನಾನು ಸ್ಪರ್ಧಿಸಿದ 'ಬಿಗ್ ಬಾಸ್' ಮೊದಲ ಸರಣಿಗೂ ಈಗಿನದ್ದಕ್ಕೂ ಬಹಳ ವ್ಯತ್ಯಾಸವಿದೆ. ಹಾಗೆಯೇ ಆಗಿನ ವೀಕ್ಷಕ ವಲಯಕ್ಕೂ ಈಗಿನದ್ದಕ್ಕೂ ತುಂಬಾ ಭಿನ್ನತೆ ಇದೆ. ಮನೋರಂಜನೆ ಈಗ ದೊಡ್ಡ ಪರದೆಯಿಂದ ಅಂಗೈಗೆ ಬಂದು ಕುಳಿತಿದೆ. ಆ ಅಂಗೈ ಈಗ ಕಂಟೆಂಟ್ ಕ್ರಿಯೇಟ್ ಮಾಡುತ್ತದೆ. ಅದರಲ್ಲಿ ಉತ್ತಮ ಅಂಶಗಳೂ ಇವೆ. ಕೆಟ್ಟ ಅಂಶಗಳು ಇರುತ್ತವೆ. ಯಾವುದನ್ನು ಆಯ್ದುಕೊಳ್ಳಬೇಕು ಎಂದು ನಾವು ನಿರ್ಧರಿಸಬೇಕು. ಇರೋದನ್ನು ಇದ್ದ ಹಾಗೇ ಹೇಳುವ ಮನಃಸ್ಥಿತಿ ಎಷ್ಟು ಬೇಗ ಶುರುವಾಗುತ್ತೋ ಅಷ್ಟು ಬೇಗ ಎಲ್ಲರೂ ಸುಧಾರಿಸುತ್ತಾರೆ.

**ವಿಜಯ್ ರಾಘವೇಂದ್ರ,**
ನಟ, ರಿಯಾಲಿಟಿ ಶೋ ತೀರ್ಪುಗಾರ

## ರಂಗಭೂಮಿಯತ್ತ ಮಕ್ಕಳ ಒಲವು

ಜನರ ಭಾವನೆಗಳನ್ನು ರಿಯಾಲಿಟಿ ಶೋಗಳು ಬಂಡವಾಳವನ್ನಾಗಿಸಿಕೊಂಡಿವೆ. ಸೋತ ಸ್ಪರ್ಧಿಗಳು ಖಿನ್ನತೆಗೆ ಒಳಗಾಗುವುದು, ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ನಮ್ಮ ಎದುರಿಗಿವೆ. ಇದರ ಬೆನ್ನಲ್ಲೇ ಶೋಗಳಲ್ಲಿ ಎಲೆಮರೆ ಕಾಯಿಯಂತಿದ್ದ ಸ್ಪರ್ಧಿಗಳಿಗೆ ದೊಡ್ಡ ವೇದಿಕೆಯನ್ನೂ ಒದಗಿಸುತ್ತಿವೆ, ಅವರ ಬದುಕಿಗೆ ದಾರಿ ತೋರಿಸುತ್ತಿವೆ ಎನ್ನುವುದೂ ಸತ್ಯ. ಇಂತಹದ್ದರ ನಡುವೆ ಇದನ್ನು ಬಿಡಬೇಕೋ, ಬೇಡವೋ ಎನ್ನುವ ಜಿಜ್ಞಾಸೆ ಶುರುವಾಗುತ್ತದೆ. ಈಗ ಪ್ರತಿಭೆಗಿಂತ ಪ್ರಚಾರ ಮುಖ್ಯ. ಆ ಪ್ರಚಾರಕ್ಕೆ ಎಲ್ಲರೂ ಹಪಹಪಿಸುತ್ತಿದ್ದಾರೆ. ಮಾಡಿದ್ದು ಸಣ್ಣದೇ ಆದರೂ ಪ್ರಚಾರ ದೊಡ್ಡದಾಗಿ ಕೊಡುತ್ತಾರೆ. ಸಮಾಜದ ಎಲ್ಲ ಬಗೆಯ, ಎಲ್ಲ ವಯೋಮಾನದ ವೀಕ್ಷಕರನ್ನೂ ಸೆಳೆಯುವ ಅನಿವಾರ್ಯ ಟಿ.ವಿ. ಶೋಗಳದ್ದು. ಹಾಡಿನ ರಿಯಾಲಿಟಿ ಶೋನಲ್ಲಿ ಈಗ ಸ್ಪರ್ಧಿಯ ಹಿನ್ನೆಲೆ ಮುಖ್ಯವಾದರೂ ಅಳಿವಿನ ಅಂಚಿನಲ್ಲಿರುವ ಜೋಗಿ ಪದಗಳು, ಗೀಗಿ ಪದಗಳಿಗೂ ಇಲ್ಲಿ ವೇದಿಕೆ ಒದಗಿಸಲಾಗುತ್ತಿದೆ. ಮರೆಯಾಗುತ್ತಿರುವ ಜನಪದ ಕಲೆಯನ್ನು ಯುವ ಮನಸಿಗೆ ದಾಟಿಸುವ ಕಾರ್ಯವೂ ಇಲ್ಲಿ ನಡೆಯುತ್ತಿದೆ. ಇಂಥವು ಸಮಾಧಾನದ ಸಂಗತಿಗಳು. 'ಡ್ರಾಮಾ ಜೂನಿಯರ್ಸ್' ರಿಯಾಲಿಟಿ ಶೋ ಶುರುವಾದ ಬಳಿಕ ನಾಟಕ ತರಬೇತಿಗೆ ಸೇರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. 'ನಾಟಕ'ದಲ್ಲೂ ಭವಿಷ್ಯವಿದೆ ಎನ್ನುವುದು ಪೋಷಕರ ಅರಿವಿಗೆ ಬಂದಿದೆ. ಇದು ಸಹ ಆಶಾದಾಯಕ ಬೆಳವಣಿಗೆ.

**ಮಂಜುನಾಥ್ ಎಲ್. ಬಡಿಗೇರ್,**
ರಂಗಕರ್ಮಿ, 'ಡ್ರಾಮಾ ಜೂನಿಯರ್ಸ್' ರಿಯಾಲಿಟಿ ಶೋ ಸ್ಪರ್ಧಿಗಳಿಗೆ ರಂಗ ತರಬೇತಿ ನೀಡುವವರು

ಹಿಂದೆ ಗಿರೀಶ್ ಪಣಿಕ್ಕರ್ ಆಗಿದ್ದು, ಆಮೇಲೆ ಮಾಲಿಕಾ ಆಗಿ ಬದಲಾದ ಅಪರೂಪದ ಭರತನಾಟ್ಯ ಕಲಾವಿದೆ ಇತ್ತೀಚೆಗೆ ಬೆಂಗಳೂರಿನಲ್ಲಿ ನೃತ್ಯ ಪ್ರದರ್ಶನ ನೀಡಿ ಹೋದರು. ಅವರ ಬದುಕಿನ ಪುಟಗಳನ್ನು ಚಕಚಕನೆ ತಿರುವಿದಂತೆ ಭಾಸವಾಗುವಂತಿರುವ ಸಂದರ್ಶನ ಇಲ್ಲಿದೆ.

# ಮಾಲಿಕಾ ಎಂಬ ಸಿರಿಮಲ್ಲಿಗೆ

**ಸಂದರ್ಶನ: ದಾದಾಪೀರ್ ಜೈಮನ್**

ಇಷ್ಟು ವರ್ಷಗಳ ನಿಮ್ಮ ಕಲಾಜೀವನವನ್ನೊಮ್ಮೆ ಹಿಂತಿರುಗಿ ನೋಡಿದಾಗ ನಿಮಗೆ ಏನನಿಸುತ್ತದೆ ಎನ್ನುವ ಪ್ರಶ್ನೆಯೊಂದಿಗೆ ಮಾತು ಪ್ರಾರಂಭಿಸಿದಾಗ, ಮಾಲಿಕಾ ಪಣಿಕ್ಕರ್ ತಮ್ಮ ಎಂದಿನ ಶಾಂತ, ಗಂಭೀರ, ಲವಲವಿಕೆ ಮತ್ತು ಜೀವನ್ಮುಖಿ ದನಿಯಲ್ಲಿ ಉತ್ತರ ಹೇಳಲಾರಂಭಿಸಿದರು.

'ಈಗ ಕಲೆಯೇ ಜೀವನ ಎಂದು ಬದುಕುವ ಜನರಿಲ್ಲ. ಕಲೆ ಎನ್ನುವುದು ದಿನನಿತ್ಯದ ಹತ್ತರಲ್ಲಿ ಹನ್ನೊಂದರ ಹಾಗೆ ಈ ತಲೆಮಾರಿನ ಮಕ್ಕಳ ಬದುಕಿನಲ್ಲಿ ಹಾಜರಿ ಹಾಕುತ್ತಿದೆಯಷ್ಟೇ. ಈಗಿನ ಕಾಲಕ್ಕೆ ತಕ್ಕಂತೆ ನಾವೇ ಬದಲಾಗಬೇಕೋ ಅಥವಾ ಈ ತಲೆಮಾರಿನ ಜೀವನಶೈಲಿಯಲ್ಲಿಯೇ ಆ ದೋಷವಿದೆಯೋ ತಿಳಿಯುವುದಿಲ್ಲ' ಎನ್ನುತ್ತಾ ಮಾತು ಶುರುಮಾಡಿದ ಅವರು, ಥಟ್ಟನೆ ಈ ಕಾಲದ ವೇಗವೂ ಅವರ ಮೇಲೊಂದು ಹೊರೆ ಹೊರೆಸಿಟ್ಟಿದೆಯೇನೋ ಎನ್ನುವ ಕಾರಣವನ್ನೂ ನೀಡಿದರು. ಇಪ್ಪತ್ತೆಂಟು ವರ್ಷಗಳ ಕಾಲ ಸಾವಿರಾರು ಮಕ್ಕಳಿಗೆ ನೃತ್ಯ ಕಲಿಸಿದ ಗುರುವಾಗಿ, ಕಲೆಯ ಆರಾಧಕಿಯಾಗಿ, ತಮ್ಮ ಸೃಜನಶೀಲ ಯೋಚನೆಗಳಿಂದ ಪರಿಪೂರ್ಣತೆ ಮತ್ತು ಶ್ರೇಷ್ಠತೆಗೆ ಸದಾ ಹಾತೊರೆಯುವ ಮಾಲಿಕಾ ಪಣಿಕ್ಕರ್ 'ತಂತ್ರಜ್ಞಾನ ಕ್ಷೇತ್ರ ಇಷ್ಟೊಂದು ಮುಂದುವರೆದಿರುವ ಈ ಕಾಲದಲ್ಲಿ ಈಗಿನ ನೃತ್ಯ ನಿರ್ದೇಶಕರು ಮಾಡುವ ಹೊಸ ಹೊಸ ಪ್ರಯೋಗಗಳನ್ನು ನಾನು ಆ ಕಾಲಕ್ಕೆ ಮಾಡಿಬಿಟ್ಟಿದ್ದೇನೆ' ಎಂದು ಹೇಳುವಾಗ ಅವರ ದನಿಯಲ್ಲೊಂದು ಗರ್ವ ಮತ್ತು ಆತ್ಮವಿಶ್ವಾಸ ಎದ್ದು ಕಾಣುತ್ತದೆ.

ಗಿರೀಶ್ ಪಣಿಕ್ಕರ್ ಆಗಿದ್ದ ಮಾಲಿಕಾ ಅವರು ತಮ್ಮ ಏಳನೇ ವಯಸ್ಸಿನಲ್ಲಿಯೇ ನೃತ್ಯಾಭ್ಯಾಸ ಪ್ರಾರಂಭಿಸಿದರು. ಅವರು ಲಿಂಗತ್ವ ಮರುಹೊಂದಿಸುವಿಕೆ ಶಸ್ತ್ರಚಿಕಿತ್ಸೆಗೆ ತಮ್ಮನ್ನು ಒಡ್ಡಿಕೊಂಡದ್ದು ಅವರ 39ನೆಯ ವಯಸ್ಸಿನಲ್ಲಿ. ಅದನ್ನೂ ಅವರು 'ಈಗೆಲ್ಲಾ ಆಯುಷ್ಯದ ಗುರಿ 80 ಆಗಿಹೋಗಿದೆ. ಹಾಗೆ ನೋಡಿದರೆ ಹೆಚ್ಚುಕಡಿಮೆ ನನ್ನ ಅರ್ಧ ವಯಸ್ಸಿಗೆ ಹೆಣ್ಣಾಗಿ ರೂಪಾಂತರಗೊಂಡೆ. ಮರುಹುಟ್ಟೇ ನನ್ನ ನಿಜದ ಹುಟ್ಟಾದ್ದರಿಂದ ಈಗ ನನಗೆ ಕೇವಲ ಹನ್ನೆರಡು ವರ್ಷವಷ್ಟೆ!' ಎಂದು ತಮ್ಮ ಜೀವನದ ಮಹತ್ವದ ನಿರ್ಧಾರವನ್ನು ಯಾವುದೇ ಹಾಸ್ಯಲೇಪಿತ ಮಾತುಗಳಲ್ಲಿ ದಾಟಿಸಿದರು.

ಮಾಲಿಕಾ ಪಣಿಕ್ಕರ್

ಟ್ರಾನ್ಸಿಶನ್‌ಗೆ ಒಳಗಾಗುವಾಗ ಕುಟುಂಬದವರ ಬೆಂಬಲ ಹೇಗಿತ್ತು ಎಂದು ಕೇಳಿದಾಗ, 'ಟ್ರಾನ್ಸಿಶನ್ ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ನಾನಾಗಲೇ ನನ್ನ ಕ್ಷೇತ್ರದಲ್ಲಿ ಹೆಸರು ಮಾಡಿದ್ದೆ. ಹಾಗಾಗಿ ನನಗೆ ತೊಂದರೆಯೇನೂ ಆಗಲಿಲ್ಲ' ಎಂದು ಉತ್ತರಿಸಿದರು.

12ನೇ ಪುಟಕ್ಕೆ...

# ಐಟಿ ಸಿಟಿಯಲ್ಲಿ ಕಂಬಳದ ಸೀಟಿ

**ಅಬ್ದುಲ್ ರಹಿಮಾನ್**

ಕರಾವಳಿಯ ಕಂಬಳ ಈಗ ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಕರ್ಷಣೆಯಾಗಿದೆ. ಇಂಥದೊಂದು ಸಾಂಸ್ಕೃತಿಕ ಸಂಭ್ರಮವನ್ನು ಇಲ್ಲಿ ರಂಗೇರುವಂತೆ ಮಾಡಿದ ಪ್ರಕ್ರಿಯೆ ಆಸಕ್ತಿಕರ.

ತುಳುನಾಡಿನ ಸಾಂಪ್ರದಾಯಿಕ 'ಕಂಬುಲ' (ಕಂಬಳ) ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಘಟ್ಟ ಏರಿ ಬಂದಿರುವ ಕರಾವಳಿಯ ಕೋಣಗಳು ಬೆಂಗಳೂರಿನ 'ಕಂಬಳದ ಕರೆ'ಯಲ್ಲಿ ಸಾಮರ್ಥ್ಯ ಪ್ರದರ್ಶಿಸುತ್ತಿವೆ. ಅರಮನೆ ಮೈದಾನದ ತುಂಬೆಲ್ಲಾ ಕರಾವಳಿ ಸಂಸ್ಕೃತಿಯ ಪ್ರತಿಫಲನ. ಇಡೀ ಮೈದಾನ ಗುರುತೇ ಸಿಗದಂತೆ ಬದಲಾಗಿಬಿಟ್ಟಿದೆ. ಕಂಬಳ ಸಮಿತಿಯ ನಾಲ್ಕೈದು ತಿಂಗಳ ಪರಿಶ್ರಮ, ಮಿನಿ ತುಳುನಾಡನ್ನೇ ಸೃಷ್ಟಿಸಿದೆ. ಚೆಂಡೆ, ಮದ್ದಳೆ, ಕಹಳೆಗಳ ಸದ್ದು ಸಂಭ್ರಮವನ್ನು ಮತ್ತಷ್ಟು ರಂಗೇರಿಸಿದೆ.

ಬೆಂಗಳೂರಿನಲ್ಲಿ ಕಂಬಳ ನಡೆಸಬೇಕೆನ್ನುವ ತುಳುವರ ಹಲವು ವರ್ಷಗಳ ಕನಸು ಸಾಕಾರಗೊಂಡಿದೆ. ಬೆಂಗಳೂರು ತುಳುಕೂಟಕ್ಕೆ 50 ವರ್ಷ ತುಂಬಿದ ಸಂಭ್ರಮಕ್ಕಾಗಿ ಕಂಬಳ ಆಯೋಜಿಸಲಾಗಿದೆ. ಈ ಹಿಂದೆ ಬೆಂಗಳೂರಿನಲ್ಲಿ ಕಂಬಳ ನಡೆಸಲು ತಯಾರಿಗಳು ನಡೆದು, ನಗರದ ಹೊರವಲಯದ ದೊಡ್ಡ ಆಲದ ಮರದ ಸಮೀಪ ಸ್ಥಳವನ್ನು ಅಂತಿಮಗೊಳಿಸಿ, 30 ಜೋಡಿ ಕೋಣಗಳನ್ನು ಗೊತ್ತುಪಡಿಸಲಾಗಿತ್ತು. ಆದರೆ, ಕೋವಿಡ್ ಹಾಗೂ ಇನ್ನಿತರ ಸಮಸ್ಯೆಗಳಿಂದಾಗಿ ನಡೆಸಲು ಸಾಧ್ಯವಾಗಿರಲಿಲ್ಲ.

ಹೀಗೊಂದು ಕಂಬಳ ನಡೆಸಲು ಒಂದು ವರ್ಷದ ಹಿಂದೆ ಯೋಜನೆ ಹಾಕಿಕೊಳ್ಳಲಾಗಿತ್ತು. ಸಿದ್ಧತೆಗಳೂ ಭರದಿಂದ ಸಾಗಿದ್ದವು. ಈ ನಡುವೆ ವಿಧಾನಸಭೆ ಚುನಾವಣೆಯಿಂದಾಗಿ ವಿಳಂಬವಾಯಿತು. ಅಶೋಕ್ ರೈ ಶಾಸಕರಾದ ಬಳಿಕ ಅದಕ್ಕೊಂದು ರೂಪುರೇಷೆ ತಯಾರಿಸಿ, ಈ ಹಂತಕ್ಕೆ ಬಂದು ನಿಂತಿದೆ ಎನ್ನುವುದು ಬೆಂಗಳೂರು ತುಳುಕೂಟದ ಅಧ್ಯಕ್ಷ ಸುಂದರ್ ರಾಜ್ ರೈ ಅವರ ಮಾತು.

ಸ್ಥಳ ಸ್ವಾರಸ್ಯ

ಮೊದಲು ಬೆಂಗಳೂರು ಅರಮನೆಯ ಹಿಂಭಾಗದ 27 ಎಕರೆ ಪ್ರದೇಶದಲ್ಲಿ ಕಂಬಳ ನಡೆಸಲು ಅನುಮತಿ ಕೊಡಬೇಕು ಎಂದು ಮಾಲೀಕರಾದ ಮೈಸೂರು ರಾಜಮನೆತನದವರನ್ನು ಕಂಬಳ ಆಯೋಜಕರು ಕೋರಿದ್ದರು. ಆದರೆ ಅಶ್ವಗಳು ಸಾಕುವ ಪ್ರದೇಶದಲ್ಲಿ ಎಮ್ಮೆ, ಕೋಣಗಳ ಜಾತಿಗೆ ಸೇರಿದ ಪ್ರಾಣಿಗಳನ್ನು ಇರಿಸುವಂತಿಲ್ಲ ಎನ್ನುವ ನಂಬಿಕೆಯಿಂದಾಗಿ ಮೊದಲು ಅನುಮತಿ ದೊರೆಯಲಿಲ್ಲ. ಸತತ ವಿನಂತಿಯ ಬಳಿಕ, ರಾಜಮನೆತನದವರು ರಾಜಪುರೋಹಿತರ ಬಳಿ ಸಮಾಲೋಚನೆ ನಡೆಸಿದರು. ಅನುಮತಿ ಕೇಳಿದ ಪ್ರದೇಶದಲ್ಲಿ ನಾಗಬೀದಿ ಇದ್ದು, ಅಲ್ಲಿ ಕಂಬಳ ನಡೆಸಲು ಆಗದು ಎಂದೂ, ಈಗ ಗೊತ್ತುಪಡಿಸಿದ ಜಾಗದಲ್ಲಿ ಕಂಬಳ ನಡೆದರೆ ರಾಜಮನೆತನಕ್ಕೆ ಶ್ರೇಯ ಲಭಿಸುವುದೆಂದೂ ರಾಜಪುರೋಹಿತರು ಒಪ್ಪಿಗೆ ನೀಡಿದ ಬಳಿಕ ಕಂಬಳ ನಡೆಸಲು ಒಪ್ಪಿಗೆ ಲಭಿಸಿತು. ಕಂಬಳ ಸಂಘಟಕರೇ ತಮ್ಮ ಈ ಅನುಭವವನ್ನು ಹಂಚಿಕೊಂಡರು.

ಬೆಂಗಳೂರಿನಲ್ಲಿ ಕಂಬಳ ನಡೆಯಲಿದೆ ಎನ್ನುವ ವಿಚಾರ ಕೇಳಿಯೇ, ಕೋಣದ ಮಾಲೀಕರು ಸ್ವಯಂ ಪ್ರೇರಿತವಾಗಿ ತಯಾರಾಗಿದ್ದರು. ಆದರೆ 300-450 ಕಿ.ಮೀ. ದೂರಕ್ಕೆ ಕೋಣಗಳನ್ನು ಸಾಗಿಸುವುದೇ ದೊಡ್ಡ ಸವಾಲಾಗಿತ್ತು. ಮೊದಲು ರೈಲಿನಲ್ಲಿ ಕೋಣಗಳನ್ನು ಕರೆತರುವ ಚರ್ಚೆ ನಡೆಯಿತು. ಕೋಣಗಳ ಲಾರಿಯನ್ನು ರೈಲಿಗೆ ಜೋಡಿಸಲು ಮಂಗಳೂರಿನ ನಿಲ್ದಾಣದಲ್ಲಿ ಅವಕಾಶ ಇದೆಯಾದರೂ, ಅವುಗಳನ್ನು ಇಳಿಸಲು ಬೆಂಗಳೂರಿನ ಯಾವುದೇ ನಿಲ್ದಾಣಗಳಲ್ಲಿ ವ್ಯವಸ್ಥೆ ಇಲ್ಲ. ಅಲ್ಲದೆ ಪ್ರಯಾಣದುದ್ದಕ್ಕೂ ಕೋಣಗಳು ನಿಂತೇ ಇದ್ದರೆ, ಸ್ಪರ್ಧೆಯ ದಿನ ಅವುಗಳ ದೈಹಿಕ ಕ್ಷಮತೆ ಮೇಲೆಯೂ ಪರಿಣಾಮ ಬೀರುತ್ತದೆ. ಕೋಣಗಳು ಕೋಪಗೊಂಡರೆ ಪರಸ್ಪರ ಕಾದಾಟಕ್ಕೆ ನಿಲ್ಲುತ್ತವೆ. ಮಾಲೀಕನ ಮೇಲೂ ಎರಗುತ್ತವೆ. ಹೀಗಾಗಿ ಲಾರಿಗಳಲ್ಲೇ ಕೋಣಗಳನ್ನು ಬೆಂಗಳೂರಿಗೆ ಕರೆತಂದರು.

11ನೇ ಪುಟಕ್ಕೆ...

'ಬೆಂಗಳೂರು ಕಂಬಳ ನಮ್ಮ ಕಂಬಳ'... ರಾಜಧಾನಿಯಲ್ಲಿ ಕರಾವಳಿ ಸಂಸ್ಕೃತಿಯ ಬಿಂಬ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

# ಸುಮನೋಹರ ದೃಶ್ಯಕಾವ್ಯ

ಜಾಹ್ನವೀರಾಮ

ಸಾಹಿತಿ ಹಂಪ ನಾಗರಾಜಯ್ಯನವರ ದೇಸೀ ಮಹಾಕಾವ್ಯ 'ಚಾರುವಸಂತ' ಹಲವು ಭಾರತೀಯ ಭಾಷೆಗಳಿಗೆ ಈಗಾಗಲೇ ಅನುವಾದಗೊಂಡಿರುವ ಮತ್ತು ಅನುವಾದಗೊಳ್ಳುತ್ತಿರುವ ಮಹಾಕಾವ್ಯ. ಅದಕ್ಕೆ ನಾಟಕ ರೂಪಾಂತರವನ್ನು ನೀಡಿದವರು ಸಾಹಿತಿ, ನಾಟಕಕಾರ ನಾ.ದಾಮೋದರ ಶೆಟ್ಟರು. ಶೆಟ್ಟರೇ ಹೇಳುವಂತೆ 'ನಾಗರಹಾವು ಕೇರೆ ಹಾವಾಗದಂತೆ' ಮೂಲಕೃತಿಯ ಕಾವ್ಯಾತ್ಮಕ ಹದಕ್ಕೆ ಧಕ್ಕೆ ಬರದಂತೆ ಅವರು ರೂಪಾಂತರಿಸಿದ್ದಾರೆ. ಇದನ್ನು ಪ್ರಾಯೋಗಿಕವಾಗಿ ರಂಗಸಾಕ್ಷಾತ್ಕರಿಸಿದವರು ರಂಗ ನಿರ್ದೇಶಕ ಜೀವನ್‌ರಾಮ್ ಸುಳ್ಯ.

'ಚಾರುವಸಂತ' ನಾಟಕ ಕರ್ನಾಟಕದ ಪ್ರಮುಖ ರಂಗಕೇಂದ್ರಗಳಲ್ಲಿ ದಶ ಪ್ರದರ್ಶನಗಳನ್ನು ಕಾಣುವಲ್ಲಿ ಇಂಬಾದವರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಕಲಾಪೋಷಕ ಡಾ. ಎಂ. ಮೋಹನ್ ಆಳ್ವರು.

ಮೂಡುಬಿದಿರೆಯ 'ಆಳ್ವಾಸ್ ರಂಗ ಅಧ್ಯಯನ ಕೇಂದ್ರ'ದಲ್ಲಿ ರೂಪುವಡೆದ ಈ ನಾಟಕವು ಕನ್ನಡದ ಪ್ರಸಿದ್ಧ ರಂಗನಟರು ಹಾಗೂ ಆಳ್ವಾಸ್ ರಂಗಭೂಮಿಯ ವಿದ್ಯಾರ್ಥಿಗಳ ಸಂಗಮದಿಂದ ಅಪೂರ್ವ ದೃಶ್ಯಕಾವ್ಯವಾಗಿ ಹೊರಹೊಮ್ಮಿ ರಂಗಸಹೃದಯರ ಮನಗೆದ್ದಿತು.

ನಾಟಕದಲ್ಲಿ ಭಾಗವತ ಕಥಾನಿರೂಪಕನಾಗಿ ತಾನೇ ಪಾತ್ರವಾಗಿ ಕಥೆಯನೊರೆವ ಸಂವಿಧಾನವಿದೆ. ರೇವುಪಟ್ಟಣ ಚಂಪಾನಗರಿಯ ವಣಿಜ ಭಾನುದತ್ತಶೆಟ್ಟಿ ಮತ್ತು ಆತನ ಮಡದಿ ದೇವಿಲೆಯರ ಪುರಪ್ರದಕ್ಷಿಣೆ, ದಾನಧರ್ಮದಾರತೆಯ ದೃಶ್ಯದೊಂದಿಗೆ ನಾಟಕವು ಅನಾವರಣಗೊಳ್ಳುತ್ತದೆ. ಆಧುನಿಕ ಸಮಾಜದ ಸಾಂವಿಧಾನಿಕ ಆಶಯವಾದ 'ಮಲಹೊರುವ ಪದ್ಧತಿ'ಯ ನಿಷೇಧದ ದೃಶ್ಯ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಈ ದೃಶ್ಯಾವಳಿಯಲ್ಲಿ ನಾಟಕದ ನಾಯಕಪಾತ್ರ ಚಾರುದತ್ತನ ಜನ್ಮೋತ್ಸವ, ಚಾರುದತ್ತನ ಬಾಲ್ಯ-ಚಾರುದತ್ತನ ಮಿತ್ರರ 'ಹಿಂಸೆಯಿಂದ ಅಹಿಂಸೆಯೆಡೆಗಿನ ಸಂಕ್ರಮಣ', ಖೇಚರನ ನರಕದರ್ಶನ ಹಾಗೂ ವಿಮೋಚನೆ, ಚಾರುದತ್ತ-ಮಿತ್ರಾವತಿಯರ ಕಲ್ಯಾಣೋತ್ಸವ, ಚಾರುದತ್ತನಿಂದ ವೇಶ್ಯಾಗೃಹದ ಸಂದರ್ಶನ, ವೇಶ್ಯೆ ಅನಾಮಿಕೆಯ ಮಗಳಾದ ವಸಂತತಿಲಕೆ-ಚಾರುದತ್ತರ ಪ್ರಣಯೋನ್ಮಾದ....ಹೀಗೆ ಬಿಡುವಿರದಂತೆ ಹಾಗೂ ಪ್ರೇಕ್ಷಕರು ಎವೆಯಿಕ್ಕದಂತೆ ಸಾಗಿಬರುತ್ತವೆ. ಒಂದೊಂದು ದೃಶ್ಯವೂ ಹದವಡೆದ ಪರಿಪಾಕವಾಗಿ ಪ್ರೇಕ್ಷಕರನ್ನು ತಣಿಸುವ ಬಗೆ ಅನನ್ಯ.

ಅರಮನೆ, ವೇಶ್ಯಾಗೃಹ, ಮುನಿಗಳ ಆಶ್ರಮ, ಸಮುದ್ರ-ಚಂಡಮಾರುತ-ಅಲೆಗಳ ಅಲ್ಲೋಲಕಲ್ಲೋಲ, ಪಾದರಸದ ಬಾವಿ, ಉಡ, ಪುಷ್ಪಕವಿಮಾನ....ಈ ಎಲ್ಲವೂ ಅತ್ಯಂತ ಅಚ್ಚುಕಟ್ಟಾಗಿ ತಾಂತ್ರಿಕ ಪರಿಪೂರ್ಣತೆಯೊಂದಿಗೆ ಸಾದರಗೊಂಡವು. ಇಡಿಯ ನಾಟಕ ಯಾವ ಹಂತದಲ್ಲೂ ಜಡವಾಗದಂತೆ ತುಂಬು ಉಲ್ಲಾಸದಿಂದ ಸಾಗಿದ ಪರಿ ವಿಶೇಷವಾಗಿದೆ. ರಂಗವಿನ್ಯಾಸ, ಪರಿಕರಗಳ ಸಂಯೋಜನೆ-ಪಲ್ಲಟಗಳು, ರಂಗಕ್ರಿಯಾಭಿನಯ ಇವೆಲ್ಲವನ್ನೂ ನಟರು ಅರೆಕೊರೆಯಾಗದಂತೆ ನಿಭಾಯಿಸಿದ ವೈಖರಿ ಶ್ಲಾಘನೀಯ.

**ದುಃಖ ಅದುಮಿಟ್ಟು ಅಭಿನಯ**

ಮೂಡುಬಿದಿರೆಯಲ್ಲಿ ನಡೆದ ನಾಟಕದ ಎರಡನೆಯ ಪ್ರದರ್ಶನದ ದಿನ ಮಿತ್ರಾವತಿಯಾಗಿ ಅಭಿನಯಿಸಿದ್ದ ರಕ್ಷಿತಾ ಗೌಡ ಟಿ.ಎಲ್ ಅವರು ತಮ್ಮ ಪ್ರೀತಿಯ ಅಜ್ಜಿಯ ವಿಯೋಗವಾರ್ತೆಯ ದುಃಖವನ್ನೂ ಅದುಮಿಟ್ಟು ತೋರಿದ ರಂಗಬದ್ಧತೆ-ಪ್ರಬುದ್ಧ ಅಭಿನಯ ಅತ್ಯಂತ ಪ್ರಶಂಸನೀಯ.

'ಚಾರುವಸಂತ' ನಾಟಕದ ದೃಶ್ಯ

ಚಾರುವಸಂತ ಮಹಾಕಾವ್ಯವೆಂತೋ ಅಂತೆಯೇ ಅದರ ರಂಗರೂಪವೂ ಅತ್ಯಂತ ಸಮಕಾಲೀನವಾದ ರಂಗಕೃತಿಯಾಗಿದೆ. ತನ್ನ ಬಂಧುವರ್ಗದ ಕನ್ಯೆ ಮಿತ್ರಾವತಿಯನ್ನು ಮದುವೆಯಾದ ಚಾರುದತ್ತನಿಗೆ ಓದಿನದೇ ಗೀಳಾಗಿ ತನ್ನ ಪತ್ನಿಯನ್ನು ರಮಿಸುವ ಗೊಡವೆ ಇರದೆ ಇದ್ದಾಗ, ತಾಯಿ ದೇವಿಲೆಯು ಅನಿವಾರ್ಯವಾಗಿ ಕುಟಿಲೋಪಾಯ ನಿಷ್ಣಾತನಾದ ತನ್ನ ಸಹೋದರ ರುದ್ರದತ್ತನ ಮೂಲಕ ಮಗನನ್ನು ಭೋಗಾಸಕ್ತನಾಗುವಂತೆ ಪರಿವರ್ತಿಸಲು ಹೇಳುತ್ತಾಳೆ. ಹೀಗೆ ರುದ್ರದತ್ತನ ಮೂಲಕ ಚಾರುದತ್ತ ವೇಶ್ಯಾಗೃಹ ತಲುಪಿದರೂ ಆರಂಭದಲ್ಲಿ ಅಲ್ಲಿನ ವಾತಾವರಣಕ್ಕೆ ಒಗ್ಗಲು ನಿರಾಕರಿಸಿದರೂ ಕ್ರಮೇಣ ತನ್ನ ಮಡದಿ-ಮನೆಯ ಮರೆತು ವಸಂತತಿಲಕೆಯ ಸಂಗದಲ್ಲಿ ಮೈಮರೆಯುತ್ತಾನೆ. ಚಾರುದತ್ತನನ್ನು ಮನೆಗೆ ಮರಳಿ ತರಿಸಿಕೊಳ್ಳುವ ಯತ್ನಗಳೂ ವಿಫಲವಾಗಿ ಕೊನೆಗೆ ಭಾನುದತ್ತ ತನ್ನ ಮಗನ ಕಾರಣದಿಂದ ವ್ಯಂಗ್ಯಮಾತುಗಳನ್ನು ಕೇಳಿ ಹೈರಾಣಾಗುತ್ತಾನೆ.

ವಸಂತ ತಿಲಕೆಯ ತಾಯಿ ಅನಾಮಿಕೆ ಚಾರುದತ್ತನನ್ನು ಅಮಲುಣಿಸಿ ಮೈಮರೆಯಿಸಿ ತಿಪ್ಪೆಗೆಸೆಯುತ್ತಾಳೆ. ಎಚ್ಚರಗೊಂಡ ಚಾರುದತ್ತನಿಗೆ ಏನಾಯಿತೆಂಬುದು ತಿಳಿದು ಅವನು ಮನೆಗೆ ಮರಳಿದರೆ, ಅಲ್ಲಿ ಮನೆ ಅನ್ಯರ ಪಾಲಾಗಿರುತ್ತದೆ. ತಂದೆ ಭಾನುದತ್ತನು ವಿರಾಗಿಯಾಗಿ ಮುನಿದೀಕ್ಷೆ ಪಡೆದ ಬಳಿಕ ಮನೆವಿಭವ ತೊರೆದು ಗುಡಿಸಲವಾಸಿಗಳಾದ ತನ್ನ ಮಡದಿ-ತಾಯಿಯನ್ನು ಭೇಟಿ ಮಾಡಿ ಅಪರಾಧಕ್ಕಾಗಿ ಪಶ್ಚಾತ್ತಾಪಪಡುತ್ತಾನೆ.

ಇತ್ತ ವಸಂತತಿಲಕೆ ಚಾರುದತ್ತನಿಂದ ಗರ್ಭಿಣಿಯಾಗಿ ಅವನಿಗಾಗಿ ಹಂಬಲಿಸಿ ವಿರಹಿಯಾಗಿ ಅನ್ನಾಹಾರ ತೊರೆದು ಬಸವಳಿದಾಗ ಅವಳ ತಾಯಿ ಅನಾಮಿಕೆಗೆ ಮನಃಪರಿವರ್ತನೆಯಾಗುತ್ತದೆ. ತನ್ನ ಮಗಳು ತಾಯಿಯಾಗುವ ಸ್ಥಿತಿಯಲ್ಲಿರುತ್ತಾ ಅವಳನ್ನು ನರಳಿಸುವುದು ಅವಳಿಗೆ ಸಾಧ್ಯವಾಗಿ ಕೊನೆಗೆ ತನ್ನ ತಪ್ಪೊಪ್ಪಿ 'ಚಾರದತ್ತನೇ ಈ ಮನೆಗೆ ಅಳಿಯ' ಎಂದು ಸಾರುತ್ತಾಳೆ. ಆದರೆ ಚಾರುದತ್ತನು ವೇಶ್ಯಾಗೃಹಕ್ಕೆ ಮತ್ತೆ ಬರಲು ನಿರಾಕರಿಸಿದಾಗ ಆತನ ಎಲ್ಲ ಸಂಪತ್ತಿನೊಂದಿಗೆ ಮಗಳನ್ನೂ ಕರೆದೊಯ್ಯಲು ಮನಮಾಡುತ್ತಾಳೆ. ಮಿತ್ರಾವತಿಯ ಔದಾರ್ಯದಿಂದ ವಸಂತತಿಲಕೆ ಸವತಿಯಾಗಿ ಚಾರುದತ್ತನ ಮನೆಗೆ ಬರುತ್ತಾಳೆ. ಚಾರುದತ್ತ ಮಹತಿಯಿಂದ ಮತ್ತೆ ಸಂಪದವನ್ನು ಗಳಿಸಿ ಮನೆಗೆ ಮರಳುತ್ತಾನೆ.

'ಚಾರುವಸಂತ' ನಾಟಕ ಅತ್ಯಂತ ಪ್ರಶಾಂತವಾದ ಆವರಣವಿರುವ, ಮಾನವೀಯ ಮೌಲ್ಯಗಳಿಂದ ಪರಿಪುಷ್ಟವಾಗಿ ಪ್ರೇಕ್ಷಕರ ಅಂತಃಕರಣವನ್ನು ದೀಪ್ತಗೊಳಿಸುವ ಸುಮನೋಹರ ದೃಶ್ಯಕಾವ್ಯ.



ಮೊದಲು ಈ ನಾಟಕದ ಅವಧಿ ಮೂರು ಗಂಟೆಯಾಗಿತ್ತು. ಬಳಿಕ ಇದು ಎರಡೂಕಾಲು ಗಂಟೆಯ ಅವಧಿಗೆ ಇಳಿಸಲಾಯಿತು.

ನಿರ್ದೇಶಕ ಜೀವನ್‌ರಾಮ್ ಸುಳ್ಯ ತುಂಬಾ ಸವಾಲಿನ ಹೊಣೆಯೊಂದನ್ನು ಸ್ವೀಕರಿಸಿ, ಚಾರುವಸಂತ ನಾಟಕವನ್ನು ಗೆಲ್ಲಿಸಿದ್ದಾರೆ. ಒಟ್ಟೂ ನಾಟಕದ ಸಂಗೀತ ಅತಿಶಯವಾಗಿದೆ. ರಂಗಪರಿಕರಗಳು ಪರಿಪೂರ್ಣವೂ ಸುಸಜ್ಜಿತವೂ ಆಗಿವೆ.

ಪಾತ್ರವರ್ಗದಲ್ಲಿ ನವೀನ್ ಕಾಂಚನ, ಸುಮನಾ ಪ್ರಸಾದ್, ಹಾರಂಬಿ ಯತೀನ್ ಮಡಿಕೇರಿ, ತೃಷಾಶೆಟ್ಟಿ ಮಂಗಳೂರು, ರಾಜೇಂದ್ರಪ್ರಸಾದ್ ವಿ.ಜೆ. ಮಂಡ್ಯ, ರಕ್ಷಿತಾ ಟಿ.ಎಲ್.ರಾಮನಗರ, ನಾಗರಾಜ ಜೆ.ಕಾಸಂಗಿ ಹಾವೇರಿ, ಚೈತ್ರ ಖುಶಿ ಚನ್ನಪಟ್ಟಣ, ಜೋಶಿತ್ ಶೆಟ್ಟಿ ಮೂಡುಬಿದಿರೆ, ವಸಂತಲಕ್ಷ್ಮೀ ಪುತ್ತೂರು ಮುಂತಾದವರು ಬಹುಸಮೀಚೀನವಾಗಿ ನಟಿಸಿದ್ದಾರೆ. ಸಹ ನಿರ್ದೇಶಕರಾಗಿ ನಾಟಕದ ಯಶಸ್ಸಿಗೆ ಸಾಥಿಯಾದವರು ರಂಗನಿರ್ದೇಶಕ ನಟ ಪ್ರಶಾಂತ್ ಶೆಟ್ಟಿ, ಕೋಟ. ನಾಟಕಕ್ಕೆ ಬೆಳಕಿನ ನಿರ್ವಹಣೆಯನ್ನು ಮಾಡಿದ ಶಂಕರ್ ಶಿವಮೊಗ್ಗ, ಸಯ್ಯದ್ ಆಲಿ ಶಿವಮೊಗ್ಗ ರಂಗಾಯಣ ಹಾಗೂ ಪ್ರದೀಪ್ ಮೈಸೂರು ರಂಗಾಯಣ ಹಾಗೂ ರಂಗಸಜ್ಜಿಕೆಯಲ್ಲಿ ಪರಿಶ್ರಮಿಸಿದ ಸಾತ್ವಿಕ್ ಇವರೆಲ್ಲರೂ ಅಭಿನಂದನೀಯರು.

# ಶಾಂತಿ-ಪ್ರೀತಿಯ ಬಿಂಬಗಳು

ಸಾವಿತ್ರಿ ಪಡಸಾಲಿ

'ರವಿ ಕಾಣದ್ದನ್ನು ಕವಿ ಕಂಡ...' ಅನ್ನುವ ಮಾತಿದೆ. ಅದನ್ನೇ ಮುಂದುವರಿಸಿ, ಕವಿ ಕಂಡಿದ್ದನ್ನು ತನ್ನ ಕುಂಚದಲ್ಲಿ ಲೋಕಕ್ಕೆ ಅನಾವರಣ ಮಾಡುವವನನ್ನು ಕಲೆಗಾರ ಅನ್ನಬಹುದೇನೋ. ಕಲಾವಿದನ ಕೈಚಳಕದಿಂದ ಹೊರಹೊಮ್ಮುವ ಕಲೆಗೆ, ಕಲ್ಪನೆಗೆ ಅವನೇ ಸಾಟಿ. ತನ್ನ ಅಮೂರ್ತ ಕಲ್ಪನೆಗೆ ಮೂರ್ತ ರೂಪ ನೀಡುವ ಸೃಜನಶೀಲ ಕಲಾವಿದರೊಬ್ಬರು 19 ವರ್ಷಗಳಿಂದ ಅದನ್ನೇ ಆರಾಧಿಸುತ್ತಿದ್ದಾರೆ.

ಚಿತ್ರಕಲಾವಿದ ಗಣೇಶ ಪಿ. ದೊಡ್ಡಮನಿ ಬೆಳಗಾವಿ ಜಿಲ್ಲೆಯ ರಾಮದುರ್ಗದವರು. ಚಿಕ್ಕ ವಯಸ್ಸಿನಿಂದಲೂ ಅವರಿಗೆ ಚಿತ್ರಕಲೆಯಲ್ಲಿ ಆಸಕ್ತಿ. ಚಿತ್ರಕಲೆಯಲ್ಲೇ ಪದವಿ ಪೂರೈಸಿದ ಅವರು ತಮ್ಮ ಗುರು ಶಂಕರ್ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಕುಂಚದ ಜಗತ್ತಿನಲ್ಲಿ ಪಯಣ ಆರಂಭಿಸಿದರು. ತಮ್ಮದೇ ಆದ ಬಣ್ಣ ವೈವಿಧ್ಯವನ್ನು ರೂಢಿಸಿಕೊಂಡಿರುವ ಅವರು, ಕ್ಯಾನ್ವಾಸ್‌ನಲ್ಲಿ ಭಾರತೀಯ ಪರಂಪರೆಯ ಸಾಂಪ್ರದಾಯಿಕ ಶೈಲಿಯಲ್ಲಿ ತಮ್ಮ ಸೃಜನಶೀಲತೆಯನ್ನು ಅಭಿವ್ಯಕ್ತಗೊಳಿಸುತ್ತಾರೆ. ಶಾಂತಿ, ಪ್ರಕೃತಿಯನ್ನು ಮರುಕಾಣಿಸುವ ಅವರ ಕಣ್ನೋಟ ವರ್ತಮಾನದಲ್ಲಿ ಹೆಚ್ಚು ಪ್ರಸ್ತುತ. ಸಾಂಪ್ರದಾಯಿಕ ಜೀವನ ಪದ್ಧತಿ, ಸಂಸ್ಕೃತಿಯ ಚೌಕಟ್ಟನ್ನು ದಾಟುವ ಅವರ ಚಿಂತನೆ ವಿಶ್ವಮಾನವ ಸಂಬಂಧವನ್ನು ಬೆಸೆಯಲು ತುಡಿಯುವಂತೆ ಗೋಚರಿಸುತ್ತದೆ.



ಗಣೇಶ್ ಪಿ. ದೊಡ್ಡಮನಿ ಅವರ 'ಪೆಟ್ರಿಚೋರ್' ಸರಣಿಯ ವರ್ಣಚಿತ್ರಗಳು

ಸುಮಾರು ಹದಿನೈದು ವರ್ಷಗಳ ಕಾಲ ಬುದ್ಧನ ಪ್ರತಿರೂಪ ಮೂಡಿಸುತ್ತಾ ಬಂದ ಅವರು ಒಂದು ದಿನ ಬುದ್ಧನನ್ನು ವೈಯಕ್ತಿಕವಾಗಿ ತಾನು ಅನುಸರಿಸುತ್ತೇನಾ ಎಂದು ತಮ್ಮನ್ನು ಪ್ರಶ್ನಿಸಿಕೊಂಡರು. ಆಗ ಅವರಿಗೆ ದಕ್ಕಿದ್ದು ವರ್ಷದ ಮೊದಲ ಮಳೆಯ ಅನುಭವ. ಬೇಸಿಗೆಯ ನಂತರ ಬೀಳುವ ವರ್ಷಧಾರೆಯಿಂದ ಹೊಮ್ಮುವ ಮಣ್ಣಿನ ಸುವಾಸನೆ ಮೂಗಿಗೆ ಅಡರಿದೆ. ಅದರಿಂದಲೋ ಏನೋ ಪುಳಕಿತರಾಗಿದ್ದಾರೆ. ಅದೇ ಭಾವವನ್ನು ಕಳೆದ ಆರು ವರ್ಷಗಳಿಂದ ಮೂಡಿಸುತ್ತಿರುವುದಾಗಿ ಹೇಳುತ್ತಾರೆ ಅವರು.

ಕೆಲವೇ ಸೆಕೆಂಡ್‌ಗಳಲ್ಲಿ ಇವರು ತಮ್ಮ ಕಲ್ಪನೆಯನ್ನು ಕಲೆಯಾಗಿ ಮೂಡಿಸಬಲ್ಲರು. ಚಿತ್ರಕಲೆಯ ಮೇಲಿನ ಪ್ರೇಮ ಅವರನ್ನು ವಿಶ್ವದ ಹಲವು ದೇಶಗಳನ್ನು ಸುತ್ತಾಡಿಸಿದೆ.

ಗಣೇಶ ಅವರಿಗೆ ಮೊದಲು ಚಿತ್ರಕಲೆ ಅಭ್ಯಾಸಕ್ಕೆ ಹಣದ ತೊಂದರೆ ಆಗಿತ್ತು. ಅದು ಈ ಕಾಲದ ಕೆಲವರಿಗಾದರೂ ಆಗದೇ ಇರಲಿ ಎಂದೇ ಅವರು ತಮ್ಮ ಹೆತ್ತ ತಾಯಿ ಮಾಲಾ ಹಾಗೂ ಹೊಟ್ಟೆ ತುಂಬಿಸಿದ ತಾಯಿ ಕಲಾ ಇವರಿಬ್ಬರ ಹೆಸರಿನಲ್ಲಿ 'ಕಲಾಮಾಲಾ ಫೌಂಡೇಶನ್' ಅನ್ನು ಕಳೆದ ವರ್ಷ ಪ್ರಾರಂಭಿಸಿದರು. ಪ್ರತಿ ವರ್ಷ ಈ ಫೌಂಡೇಶನ್‌ನಿಂದ ಚಿತ್ರಕಲಾ ವಿಭಾಗದ ಅಂತಿಮ ವರ್ಷದ ಐವರು ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಗೆ ಏಪ್ರಿಲ್ 4ರಂದು ತಲಾ 20 ಸಾವಿರ ರೂಪಾಯಿ ನೀಡುತ್ತಾರೆ. ವಿದೇಶದಲ್ಲಿ ಚಿತ್ರಕಲಾ ವಿದ್ಯಾಭ್ಯಾಸಕ್ಕೆ ತಮಗೆ ಸಿಕ್ಕ ಅವಕಾಶವು ಹಣದ ಕೊರತೆಯಿಂದಾಗಿ ಕೈತಪ್ಪಿತ್ತು. ಹಾಗೆ ಯಾರಿಗೂ ಆಗಕೂಡದೆನ್ನುವುದು ಗಣೇಶ ಅವರ ಆಶಯ.

**@50 ಪ್ರದರ್ಶನ**

ಗಣೇಶ ಪಿ. ದೊಡ್ಡಮನಿ ಅವರ ಚಿತ್ರಕಲಾ ಪ್ರದರ್ಶನವು ಬೆಂಗಳೂರಿನ ಚಿತ್ರಕಲಾ ಪರಿಷತ್‌ನ ಗ್ಯಾಲರಿ 3ರಲ್ಲಿ ಪ್ರದರ್ಶಿತವಾಗುತ್ತಿದೆ. ಅವರಿಗೆ 50ವರ್ಷಗಳು ತುಂಬಿದ ಬೆನ್ನಲ್ಲೇ ಅವರ 84ನೇ ಚಿತ್ರಕಲಾ ಪ್ರದರ್ಶನವನ್ನು ನವೆಂಬರ್ 26ರವರೆಗೂ ಹಮ್ಮಿಕೊಳ್ಳಲಾಗಿದ್ದು, ಚಿತ್ರಗಳನ್ನು ಕಣ್ತುಂಬಿಕೊಳ್ಳಬಹುದು.

## ಮೀರಾ ಮೆಚ್ಚುಗೆ

ಚಿತ್ರಕಲೆಗಳ ಪ್ರದರ್ಶನ ವೀಕ್ಷಣೆಗೆ ಬಂದಿದ್ದಂತಹ ಹಿರಿಯ ಚಿತ್ರಕಲಾ ಕಲಾವಿದೆ ಮೀರಾ ಗ್ಯಾನ್‌ಚಂದ್, 'ಗಣೇಶ ಅವರಿಗೆ ಅವರೇ ಸಾಟಿ. ಪ್ರತಿಯೊಂದು ಚಿತ್ರದಲ್ಲಿಯೂ ಅವರು ಹಲವಾರು ಬಣ್ಣಗಳನ್ನು ಬಳಸಿದ್ದಾರೆ. ನಾನು ನನ್ನ ಚಿತ್ರಗಳಲ್ಲಿ ಇಷ್ಟೊಂದು ಬಣ್ಣಗಳನ್ನು ಎಂದೂ ಬಳಸಿಲ್ಲ. ಅವರ ಚಿತ್ರಗಳು ಮನಸ್ಸಿಗೆ ಮುದ ನೀಡುತ್ತವೆ' ಎಂದು ಶ್ಲಾಘಿಸಿದ್ದು ಒಂದು ರೀತಿಯಲ್ಲಿ ಒಳ್ಳೆಯ ಸರ್ಟಿಫಿಕೇಟೇ ಹೌದು.

# ಐಟಿ ಸಿಟಿಯಲ್ಲಿ...

10ನೇ ಪುಟದಿಂದ...

ಕೋಣಗಳ ಆಹಾರ, ಹುಲ್ಲನ್ನು ಮಾಲೀಕರೇ ತಂದಿದ್ದಾರೆ. ಬೆಂಗಳೂರಿನ ನೀರು ಗಡಸು. ಆ ನೀರನ್ನು ಕುಡಿದರೆ ಕೋಣಗಳಿಗೆ ಅನಾರೋಗ್ಯವಾಗುವ ಸಾಧ್ಯತೆ ಇದೆ. ಹೀಗಾಗಿ ಕುಡಿಯುವ ನೀರನ್ನೂ ಅವರೇ ತಂದಿದ್ದಾರೆ. 200 ಜೋಡಿ ಕೋಣಗಳು ಕಂಬಳದಲ್ಲಿ ಭಾಗಿಯಾಗಿವೆ.

**ಕೆರೆ ನಿರ್ಮಾಣದ ಸವಾಲು:** ಕೋಣಗಳನ್ನು ಓಡಿಸುವ ಟ್ರ್ಯಾಕ್‌ಗೆ 'ಕಂಬಳ ಕೆರೆ' ಎನ್ನುತ್ತಾರೆ. ಸಮತಟ್ಟಾದ ಪ್ರದೇಶದಲ್ಲಿ ಐದರಿಂದ ಆರು ಅಡಿ ಆಳಕ್ಕೆ ತೋಡಿ, ಮಣ್ಣು ಹಾಗೂ ಮರಳನ್ನು ಬಳಸಿ ಇದನ್ನು ನಿರ್ಮಾಣ ಮಾಡುತ್ತಾರೆ. ಕರಾವಳಿಯಲ್ಲಿ ಹೆಚ್ಚಿನ ಕಂಬಳಗಳು ನದಿ ತಟದಲ್ಲಿ ನಡೆಯುತ್ತವೆ. ಅಲ್ಲಿನದ್ದು ಜೇಡಿ ಮಣ್ಣು. ಬೆಂಗಳೂರಿನ ಗಟ್ಟಿ ಮಣ್ಣನ್ನು ಪೀಣ್ಯ ಹಾಗೂ ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಿ, ಕಂಬಳಕ್ಕೆ ಪೂರಕವಾಗಿದೆ ಎಂದು ವರದಿ ಬಂದ ಬಳಿಕವೇ ಕರೆ ನಿರ್ಮಾಣ ಕಾರ್ಯಗಳು ಪ್ರಾರಂಭವಾದದ್ದು.

ಕಂಬಳ ಕೆರೆ ನಿರ್ಮಾಣದಲ್ಲಿ ಸುಮಾರು 50 ವರ್ಷಗಳ ಅನುಭವ ಇರುವವರು ಅಪ್ಪಣ್ಣ ಎಂದೇ ಹೆಸರುವಾಸಿಯಾಗಿರುವ ಜಾನ್ ಸಿರಿಲ್ ಡಿಸೋಜಾ. ಅವರೇ ಈ ಕಂಬಳದ ಕರೆಯನ್ನು ನಿರ್ಮಾಣ ಮಾಡಿದ್ದಾರೆ. ಕಸ-ಕಡ್ಡಿ ತುಂಬಿಕೊಂಡಿದ್ದ ಮಣ್ಣನ್ನು ತೆಗೆದು, ಹೊಸ ಮಣ್ಣು ಹಾಕಿ, ಎಂ-ಸ್ಯಾಂಡ್ ಬಳಸಿ, ಕ್ರಶರ್‌ಗಳನ್ನು ತರಿಸಿ, ನೀರಿನ ಮಟ್ಟ ಇಟ್ಟು ಅಳೆದು ಸಮತಟ್ಟಾದ ಕೆರೆ ಸೃಷ್ಟಿಸಲಾಗಿದೆ.

ಬೆಂಗಳೂರು ತುಳು ಕೂಟಕ್ಕೆ 50 ವರ್ಷದ ತುಂಬಿದ್ದನ್ನು ಸಾಂಕೇತಿಕವಾಗಿ ಸೂಚಿಸಲು 151 ಮೀಟರ್ ಉದ್ದದ ಕೆರೆ ನಿರ್ಮಿತವಾಗಿದೆ. ಇದು ಕಂಬಳದ ಇತಿಹಾಸದಲ್ಲೇ ಅತಿ ದೊಡ್ಡ ಕೆರೆ ಎಂದೂ ಸಂಘಟಕರು ಮಾಹಿತಿ ಕೊಟ್ಟರು. 30 ಮಂದಿ ಕಾರ್ಮಿಕರು ಸುಮಾರು ಒಂದು ತಿಂಗಳು ಕೆರೆ ನಿರ್ಮಾಣಕ್ಕಾಗಿ ಕೆಲಸ ಮಾಡಿದ್ದಾರೆ. ಇದೊಂದೇ ಕಾರ್ಯಕ್ಕೆ ಅಂದಾಜು ₹15-20 ಲಕ್ಷ ಖರ್ಚಾಗಿದೆ.

**ಯಾವ ದಿಕ್ಕಿಗೆ ಓಟ?:** ಕಂಬಳದ ಕೆರೆಗೆ 'ರಾಜ-ಮಹರಾಜ' ಎಂದು ಹೆಸರಿಡಲಾಗಿದೆ. ಕರಾವಳಿಯ ಕಂಬಳಗಳ ಕೆರೆಗೆ ಸೂರ್ಯ-ಚಂದ್ರ, ಲವ-ಕುಶ, ಕೋಟಿ-ಚನ್ನಯ್ಯ, ಕಾಂತಬಾರೆ-ಬೂದಬಾರೆ, ವಿಜಯ-ವಿಕ್ರಮ, ಮೂಡು-ಪಡು, ನೇತ್ರಾವತಿ-ಫಲ್ಗುಣಿ, ವೀರ-ವಿಕ್ರಮ ಮುಂತಾದ ಹೆಸರುಗಳನ್ನು ಕಾಣಬಹುದು.

ಉತ್ತರದಿಂದ ದಕ್ಷಿಣಕ್ಕೆ ಅಥವಾ ದಕ್ಷಿಣದಿಂದ ಉತ್ತರಕ್ಕೆ ನಿರ್ಮಾಣ ಮಾಡಲಾಗಿರುವ ಕೆರೆಗಳಲ್ಲಿ ಕೋಣಗಳು ಓಡುತ್ತವೆ. ಬೆಂಗಳೂರಿನ ಕೆರೆ ದಕ್ಷಿಣದಿಂದ ಉತ್ತರಕ್ಕೆ ಇದೆ. ಇದರಿಂದ ಕೋಣಗಳು ಹಾಗೂ ನೋಡುಗರ ಕಣ್ಣಿಗೆ ಸೂರ್ಯ ರಶ್ಮಿ ಚುಚ್ಚುವುದಿಲ್ಲ.

ನಾಗಾರಾಧನೆ ಹಾಗೂ ಕಂಬಳಕ್ಕೆ ವಿಶೇಷ ನಂಟಿದೆ. ಕಂಬಳ ಆರಂಭವಾಗುವುದಕ್ಕೂ ಮುನ್ನ ಸಮೀಪದ ನಾಗಬನಕ್ಕೆ ತೆರಳಿ, ಅಲ್ಲಿ ಪೂಜೆ ಮಾಡಿ ತಂದ ಪ್ರಸಾದವನ್ನು ಕಂಬಳ ಕರೆಗೆ ಸಮರ್ಪಿಸುವುದು ವಾಡಿಕೆ. ತುಳುವರ ನಂಬಿಕೆಯ ಪ್ರಕಾರ ನಾಗ ಫಲವಂತಿಕೆಯ ಸಂಕೇತ ಕೂಡ. ಬೆಂಗಳೂರಿನ ಕಂಬಳದ ಆರಂಭಿಕ ಕೆಲಸದ ವೇಳೆ ಅಲ್ಲಿ ನಾಗರ ಹಾವುಗಳು ಪತ್ತೆಯಾಗಿದ್ದೂ ಸಂಘಟಕರ ಗಮನಕ್ಕೆ ಬಂದಿದೆ. ಈಗ ಕೆರೆ ನಿರ್ಮಾಣವಾಗಿರುವ ಸಮೀಪವೇ ಹಾವಿನ ಹುತ್ತವೊಂದು ಇದ್ದು, ಅದರ ಸುತ್ತಲೂ ಕಟ್ಟೆ ಕಟ್ಟಿ ರಕ್ಷಣೆ ಮಾಡಲಾಗಿದೆ. ಇಲ್ಲಿ ಕಂಬಳ ನಡೆಯುವುದು ದೇವರ ಇಚ್ಛೆಯಾಗಿತ್ತು ಎನ್ನುವುದರ ಸಂಕೇತವಿದೆನ್ನುವುದು ಸಂಘಟಕರ ನಂಬಿಕೆ.

'ಬೆಂಗಳೂರು ಕಂಬಳ ನಮ್ಮ ಕಂಬಳ'ದ ಜೋಡುಕರೆಯಲ್ಲಿ ಓಡುತ್ತಿರುವ ಕೋಣಗಳು

**ಆಚರಣೆ ಈಗ ಕ್ರೀಡೆ**

ಕಂಬಳವು ಈಗ ಜಾನಪದ ಕ್ರೀಡೆ ಎಂದು ಗುರುತಿಸಿಕೊಂಡಿದ್ದರೂ, ಅದು ಮೂಲತಃ ಕೃಷಿಕರ ಒಂದು ಆಚರಣೆಯಾಗಿತ್ತಷ್ಟೇ. ಕೊಯ್ಲು ಮುಗಿದ ಬಳಿಕ ಕೋಣಗಳನ್ನು ಗದ್ದೆಯಲ್ಲಿ ನಡೆಸುತ್ತಿದ್ದರು. ಬಳಿಕ ಗದ್ದೆಯಲ್ಲಿ ಓಡಿಸಲು ಪ್ರಾರಂಭ ಮಾಡಿದರು. ಕಾಲ ಕಳೆದಂತೆ ಅದು ಈಗಿನ ಕಂಬಳದಂತೆ ಪರಿವರ್ತನೆಗೊಂಡಿತು. ಮೊದಲೆಲ್ಲ ಒಂದು ಕೆರೆಯಲ್ಲಿ ಸ್ಪರ್ಧೆ ನಡೆಯುತ್ತಿತ್ತು. ಈಗ ಜೋಡಿ ಕೆರೆಗಳಲ್ಲಿ ಕೋಣಗಳನ್ನು ಓಡಿಸಲಾಗುತ್ತದೆ. ಈಗ ಕಂಬಳಕ್ಕೆ ಆಧುನಿಕ ಸ್ಪರ್ಶ ಬಂದಿದ್ದು, ಸಂಪ್ರದಾಯವು ಕ್ರೀಡೆಯಾಗಿ ಮಾರ್ಪಾಡು ಹೊಂದಿದೆ. ವಂಡಾರು ಅರಸು ಕಂಬಳದಲ್ಲಿ ಈಗಲೂ ಕೋಣಗಳನ್ನು ನಡೆಸುವ ಸಾಂಪ್ರದಾಯಿಕ ಕಂಬಳ ನಡೆಯುತ್ತಿದೆ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಹೇಳಿದರು.

**ಕಂಬಳಕ್ಕುಂಟು ತರಬೇತಿ ಅಕಾಡೆಮಿ**

ಕಂಬಳದ ರಕ್ಷಣೆ, ನಿರ್ವಹಣೆ ಹಾಗೂ ತರಬೇತಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯಾರು ಎಂಬಲ್ಲಿ ಕಂಬಳ ಅಕಾಡೆಮಿ ಇದೆ. ಇಲ್ಲಿ ಕಂಬಳ ಜಾಕಿಗಳಿಗೆ 12 ದಿನಗಳ ವಿಶೇಷ ಉಚಿತ ತರಬೇತಿ ನೀಡಲಾಗುತ್ತದೆ. ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್) ನೀಡುವಷ್ಟೇ ಗುಣಮಟ್ಟದ ತರಬೇತಿಯನ್ನು ಇಲ್ಲಿ ನೀಡಲಾಗುತ್ತದೆ. ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ, ವ್ಯಕ್ತಿತ್ವ ವಿಕಸನದ ತರಬೇತಿಗಳನ್ನೂ ನೀಡಲಾಗುತ್ತದೆ. ಕಂಬಳ ಹಾಗೂ ಕೋಣಗಳ ಆರೈಕೆಗೆ ಸಂಬಂಧಿತ ಎಲ್ಲ ಕೌಶಲಗಳನ್ನೂ ಕಲಿಸಲಾಗುತ್ತದೆ ಎನ್ನುತ್ತಾರೆ ಕಂಬಳ ಸಮಿತಿಯ ಸಂಸ್ಥಾಪಕ ಕಾರ್ಯದರ್ಶಿ ಗುಣಪಾಲ ಕಡಂಬ.

**"ಕಂಬಳಕ್ಕೆಂದೇ ಅರಮನೆ ಮೈದಾನದಲ್ಲಿ ಎರಡು ಬೋರ್‌ವೆಲ್ ಕೊರೆಸಲಾಗಿದ್ದು, 400 ಅಡಿ ಆಳದಲ್ಲೇ ಉತ್ತಮ ನೀರು ಸಿಕ್ಕಿದೆ. ಸುತ್ತಮುತ್ತ ಇಷ್ಟು ಕಡಿಮೆ ಆಳದಲ್ಲಿ ನೀರು ಸಿಕ್ಕಿಲ್ಲ. ಇದು ಕಂಬಳಕ್ಕೆ ಇರುವ ದೈವೀಕ ಶಕ್ತಿ.**

**ಸುಂದರ್ ರಾಜ್ ರೈ,** ಬೆಂಗಳೂರು ತುಳು ಕೂಟದ ಅಧ್ಯಕ್ಷ

**ಜಾತಿ, ಧರ್ಮಗಳ ವ್ಯತ್ಯಾಸವಿಲ್ಲದೆ ಎಲ್ಲರೂ ಕಂಬಳದಲ್ಲಿ ಭಾಗವಹಿಸುತ್ತಾರೆ. ಕರಾವಳಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಧಾರ್ಮಿಕ ಕಾರ್ಯಕ್ರಮಕ್ಕೆ ಸೋಕಿರುವ 'ಕೋಮುವಾದದ ಸೋಂಕು' ಕಂಬಳಕ್ಕೆ ಇನ್ನೂ ಅಡರಿಲ್ಲ. ಮುಸ್ಲಿಂ ಸಮುದಾಯಕ್ಕೆ ಸೇರಿದವರು ಆರು ಜೋಡಿ, ಕ್ರಿಶ್ಚಿಯನ್ ಸಮುದಾಯದವರು ನಾಲ್ಕು ಜೋಡಿ ಕೋಣಗಳನ್ನು ತಂದಿದ್ದಾರೆ.**

**ಅಶೋಕ್ ಕುಮಾರ್ ರೈ,**
ಬೆಂಗಳೂರು ಕಂಬಳದ ಅಧ್ಯಕ್ಷ ಹಾಗೂ ಪುತ್ತೂರು ಶಾಸಕ

**ತೀರ್ಪುಗಾರರು, ಜಾಕಿಗಳು:** ಸುಮಾರು 30 ಮಂದಿ ತೀರ್ಪುಗಾರರು ಬೆಂಗಳೂರು ಕಂಬಳದಲ್ಲಿ ಭಾಗಿಯಾಗಿದ್ದಾರೆ. ಓಟದ ನಿಖರ ಸಮಯ ದಾಖಲಿಸಲು 'ಫೇಸ್ ಫಿನಿಶಿಂಗ್' ತಂತ್ರಜ್ಞಾನ ಬಳಸಲಾಗಿದೆ. ಕೋಣದ ಮಾಲೀಕರೊಂದಿಗೆ ಅದನ್ನು ಓಡಿಸುವವರು (ಕಂಬಳ ಜಾಕಿಗಳು) ಕೂಡ ಬಂದಿದ್ದಾರೆ. ಜಾಕಿಗಳಿಗೂ ಕಂಬಳದಲ್ಲಿ ವಿಶೇಷ ಗೌರವ. ಓಡಿಸಿದ ಕೋಣಗಳು ಬಹುಮಾನ ಗಳಿಸಿದರೆ, ಅವರಿಗೂ ಸನ್ಮಾನ, ಪಾರಿತೋಷಕಗಳು ಸಲ್ಲುತ್ತವೆ. ಈ ಕಂಬಳದಲ್ಲಿ ಪ್ರಥಮ ಬಹುಮಾನ ಪಡೆದ ಕೋಣಗಳನ್ನು ಓಡಿಸಿದರವರಿಗೆ 4 ಗ್ರಾಂ ಚಿನ್ನ ನೀಡಲಾಗುತ್ತದೆ. ಇದಲ್ಲದೆ, ಕಂಬಳದ ಋತುವಿನ ನಾಲ್ಕು ತಿಂಗಳಿನಲ್ಲಿ ಅವರು ಸುಮಾರು ₹7 ಲಕ್ಷದವರೆಗೂ ಸಂಪಾದಿಸುತ್ತಾರೆ.

2020ರಲ್ಲಿ ಕಕ್ಕೆಪದವು ಕಂಬಳದಲ್ಲಿ 100 ಮೀಟರ್ ಓಟದ ಕರೆಯಲ್ಲಿ 8.78 ಸೆಕೆಂಡುಗಳಲ್ಲಿ ಕೋಣಗಳನ್ನು ಓಡಿಸಿ ಶ್ರೀನಿವಾಸಗೌಡ ದಾಖಲೆ ಬರೆದು, ಕಂಬಳ ಗದ್ದೆಯ ಉಸೇನ್ ಬೋಲ್ಟ್ ಎಂದು ಖ್ಯಾತಿ ಪಡೆದಿದ್ದರು. ಇದಾದ ಬಳಿಕ ಕಂಬಳ ಜಾಕಿಗಳಿಗೆ ಬೇಡಿಕೆ ಹೆಚ್ಚಳವಾಗುವುದರ ಜತೆಗೆ ಹೆಚ್ಚಿನ ಪ್ರಸಿದ್ಧಿಯನ್ನೂ ಪಡೆದರು.

## ಮುನ್ನೋಟ 26-11-2023 ರಿಂದ 02-12-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

**ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ**

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1
ಬಂಧುಗಳ ನಡುವೆ ನಿಮ್ಮ ವೈಭವವನ್ನು ತೋರಿಸಿಕೊಳ್ಳಲು ಪ್ರಯತ್ನಪಡುವಿರಿ. ಹಣದ ಒಳಹರಿವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ಶತ್ರುಗಳನ್ನು ಹೆಚ್ಚು ಮಾಡಿಕೊಳ್ಳುವಿರಿ. ಹೈನುಗಾರಿಕೆ ಮಾಡಲು ಬಹಳ ಆಸಕ್ತಿಯನ್ನು ತೋರುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಕಡಿಮೆ ಇರುತ್ತದೆ. ವೃತ್ತಿಯಲ್ಲಿ ನೀವು ಸಂತೋಷಪಡುವ ಸಂದರ್ಭಗಳು ಬರುತ್ತವೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ತಂತ್ರಗಳು ಫಲಿಸಿ ಹೆಚ್ಚು ಲಾಭ ಬರುತ್ತದೆ. ಪಾಲುದಾರರು ನಿಮ್ಮ ಮಾತಿಗೆ ಬೆಲೆ ಕೊಡುತ್ತಾರೆ. ಸರ್ಕಾರ ಅಥವಾ ಸಂಸ್ಥೆಗಳ ಜೊತೆ ಮಾಡಿಕೊಂಡ ಒಪ್ಪಂದಗಳಿಂದ ನಿಮಗೆ ಅನುಕೂಲವಾಗುತ್ತದೆ. ಸಂಗೀತಗಾರರಿಗೆ ಹೆಚ್ಚು ಅವಕಾಶಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಹೈನುಗಾರಿಕೆ ಮತ್ತು ಕುಕ್ಕುಟೋದ್ಯಮವನ್ನು ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭದಲ್ಲಿ ಯಾವುದೋ ಒತ್ತಡಕ್ಕೆ ಸಿಲುಕಿದಂತೆ ಭಾಸವಾಗುವುದು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಹರಿತವಾದ ಆಯುಧಗಳಿಂದ ದೂರವಿರಿ. ಕಣ್ಣಿನ ರಕ್ತ ಪರಿಚಲನೆಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಕೂಡಲೇ ಚಿಕಿತ್ಸೆ ಪಡೆಯುವುದು ಒಳಿತು. ಕೊಂಡುಕೊಂಡಿದ್ದ ಭೂಮಿಗೆ ಹಣಕೊಡಲು ಸಮಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಫಲಿತಾಂಶವಿರುತ್ತದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ
ಹಂಗಾಮಿ ಉದ್ಯೋಗ ಮಾಡುತ್ತಿರುವ ಕೆಲವರಿಗೆ ಈಗ ಉದ್ಯೋಗ ಕಾಯಂ ಆಗುವ ಲಕ್ಷಣಗಳಿವೆ. ಧನ ಆದಾಯವು ಉತ್ತಮವಾಗಿರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಸ್ವಲ್ಪ ಹಣ ಖರ್ಚಾಗಬಹುದು. ನಿಮ್ಮ ಚಟುವಟಿಕೆಗಳಲ್ಲಿ ಆಲಸೀತನವನ್ನು ಕಾಣಬಹುದು. ಸ್ಥಿರಾಸ್ತಿ ಕೊಳ್ಳುವ ಯೋಚನೆ ಸದ್ಯಕ್ಕೆ ಬೇಡ. ಸರ್ಕಾರಿ ಮಟ್ಟದ ಕೆಲಸ ಕಾರ್ಯಗಳಲ್ಲಿ ಪ್ರಗತಿ ಇರುತ್ತದೆ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆಡಳಿತಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರಿಗೆ ಹೆಚ್ಚು ಯಶಸ್ಸು ಸಿಗುವ ಸಾಧ್ಯತೆ ಇದೆ. ಕೆಲವರಿಗೆ ಹಣಕಾಸಿನ ವ್ಯವಹಾರಗಳಲ್ಲಿ ಲಾಭವಿರುತ್ತದೆ. ತಂದೆಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಶೀತಬಾಧೆಗಳು ಸ್ವಲ್ಪ ತೊಂದರೆ ಕೊಡಬಹುದು. ಸಂಸಾರದಲ್ಲಿ ಸ್ವಲ್ಪ ಕಾವೇರಿದ ವಾತಾವರಣ ಇರುತ್ತದೆ. ವಿದೇಶಿ ಕಂಪನಿಗಳಿಗೆ ಕಚ್ಚಾಮಾಲನ್ನು ಪೂರೈಸುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದೊಡ್ಡ ಮನುಷ್ಯರಂತೆ ತೋರಿಸಿಕೊಳ್ಳಲು ಹೋಗಿ ನಗೆಪಾಟಲಾಗುವಿರಿ. ನಿಮ್ಮ ನಡವಳಿಕೆ ಅಥವಾ ಕಾರ್ಯಗಳಿಂದ ಹಿರಿಯರ ಕೆಂಗಣ್ಣಿಗೆ ಗುರಿಯಾಗುವಿರಿ. ವಿದ್ಯಾರ್ಥಿಗಳಿಗೆ ಆಸಕ್ತ ವಿಷಯಗಳಲ್ಲಿ ಉತ್ತಮ ಫಲಿತಾಂಶ ಬರುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಸಂಗಾತಿಯ ಸುಳ್ಳಿನ ಕಂತೆಗಳು ಮುಜುಗರ ತರುವ ಸಾಧ್ಯತೆಗಳಿವೆ.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಬಗ್ಗೆ ನಿಮಗೆ ಮೊದಲು ನಂಬಿಕೆ ಇರಲಿ. ಹಣದ ಒಳಹರಿವು ನಿರೀಕ್ಷಿತ ಮಟ್ಟಕ್ಕೆ ಇರುತ್ತದೆ. ನಿಮ್ಮ ಮಾತಿನ ಬಗ್ಗೆ ಗಮನ ಇರಲಿ. ನಿಮ್ಮ ನಡವಳಿಕೆಗಳ ಬಗ್ಗೆ ಟೀಕೆಗಳು ಕೇಳಿಬರಬಹುದು. ಆಸ್ತಿ ಕೊಳ್ಳಲು ಹೊಸ ದಾರಿಗಳು ಈಗ ಗೋಚರಿಸುತ್ತವೆ. ಮಕ್ಕಳಿಂದ ನಿರೀಕ್ಷಿತ ಗೌರವ ದೊರೆಯುವುದಿಲ್ಲ. ದೇವರ ಮೂರ್ತಿಗಳನ್ನು ಎರಕಹೊಯ್ಯುವವರಿಗೆ ಬೇಡಿಕೆ ಹೆಚ್ಚಾಗುತ್ತದೆ.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ
ಅತಿಯಾದ ಆತ್ಮಗೌರವವಿರುತ್ತದೆ. ಕೆಲವೊಂದು ದೃಢ ನಿರ್ಧಾರಗಳನ್ನು ತೆಗೆದುಕೊಂಡು ಮುನ್ನಡೆಯುವಿರಿ. ಮಾತಿನಲ್ಲಿ ಬಹಳ ಜಾಣ್ಮೆಯನ್ನು ಕಾಣಬಹುದು. ಗುರುಗಳು ಮತ್ತು ಹಿರಿಯರ ಮೇಲೆ ಗೌರವ ಹೆಚ್ಚುತ್ತದೆ. ನಿಮ್ಮ ಶತ್ರುಗಳಲ್ಲೊಬ್ಬನನ್ನು ನಿಮ್ಮವನನ್ನಾಗಿ ಮಾಡಿಕೊಂಡು ಉಳಿದವರನ್ನು ಮಣಿಸುವಿರಿ. ಕೃಷಿಕರು ಹೆಚ್ಚಿನ ಅಭಿವೃದ್ಧಿಯನ್ನು ಕಾಣಬಹುದು ಹಾಗೂ ಆದಾಯ ಹೆಚ್ಚುತ್ತದೆ.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಮಾಜದಲ್ಲಿ ಮತ್ತು ಬಂಧುಗಳಲ್ಲಿ ನಿಮಗೆ ಹೆಚ್ಚಿನ ಗೌರವ ದೊರೆಯುತ್ತದೆ. ಹಾಡುಗಾರರಿಗೆ ಮತ್ತು ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ನ್ಯಾಯವಾದಿಗಳಿಗೆ ಉತ್ತಮ ದಾವೆಗಳು ದೊರೆತು ಹೆಚ್ಚು ಸಂಪಾದನೆಯಾಗುತ್ತದೆ. ವಾಹನ ತಯಾರಿಕಾ ಕ್ಷೇತ್ರದಲ್ಲಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ನಿರೀಕ್ಷಿತ ತಯಾರಿಕಾ ಆದೇಶಗಳು ದೊರೆಯುತ್ತವೆ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಪ್ರೇಮ ಪ್ರಕರಣಗಳಿಗೆ ಹಿರಿಯರ ಒಪ್ಪಿಗೆ ದೊರೆಯುತ್ತದೆ. ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಉದ್ಯಮಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವವರ ಬೇಡಿಕೆ ಹೆಚ್ಚಾಗುತ್ತದೆ. ಧನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಸಂಸಾರದಲ್ಲಿ ಸಾಕಷ್ಟು ಸಂತೋಷವಿರುತ್ತದೆ. ವ್ಯಾಪಾರದಲ್ಲಿ ಇದ್ದ ಸರ್ಕಾರದ ತೊಡಕುಗಳು ನಿವಾರಣೆಯಾಗುತ್ತವೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಮನಸ್ಸಿನಲ್ಲಿ ಸ್ಥಿರತೆ ಇರುತ್ತದೆ. ಹಿರಿಯರು ತಮ್ಮ ಗುರಿಗಳತ್ತ ಗಮನಹರಿಸಿ ಯಶಸ್ಸನ್ನು ಸಾಧಿಸುವರು. ಧರ್ಮಭೋದನೆ ಮಾಡುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಸ್ಥಿರ ಆಸ್ತಿಗಾಗಿ ಒಟ್ಟು ಮಾಡಿದ್ದ ಹಣ ಬೇರೊಂದಕ್ಕೆ ಖರ್ಚಾಗಬಹುದು. ತಾಯಿಯಿಂದ ದೊರೆಯುವ ಸಹಾಯಗಳು ನಿಲ್ಲುವ ಸಾಧ್ಯತೆಗಳಿವೆ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಆದಾಯ ಕಡಿಮೆಯಾಗಬಹುದು.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ಬೇಜವಾಬ್ದಾರಿಯ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಗೆ ತಕ್ಕಂತೆ ಇರುತ್ತದೆ. ಭಾಷಾ ವಿಮರ್ಶಕರಿಗೆ ಉತ್ತಮ ಗೌರವ ದೊರೆಯುವ ಸಾಧ್ಯತೆ ಇದೆ. ಹಿರಿಯರ ಆಸ್ತಿಯಲ್ಲಿ ಹೊಸ ಸಮಸ್ಯೆಗಳು ಹುಟ್ಟಬಹುದು. ಸಂಗೀತ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಖಂಡಿತ ಇರುತ್ತದೆ. ಸರ್ಕಾರಿ ಸಂಸ್ಥೆಗಳಲ್ಲಿ ನಿಮ್ಮ ದಾಖಲಾತಿಗಳ ಬಗ್ಗೆ ಹೊಸ ಗೊಂದಲಗಳು ಹುಟ್ಟಿಕೊಳ್ಳಬಹುದು.

## ಪದಬಂಧ 2817



**ಮೇಲಿನಿಂದ ಕೆಳಕ್ಕೆ**

1.ಹಸುಗಳ ವಂಶದ ಪಟ್ಟಣದಿಂದ ಕೃಷ್ಣ ನಿರ್ಗಮಿಸಿದ 3
2. ಯಾವ ಕಡೆಯಿಂದ ನೋಡಿದರೂ ಇದು ಹೊಸತು 3
3. ಒಮ್ಮೊಮ್ಮೆ ಉತ್ತರಗಳು ಗಾಳಿಯಲ್ಲಿ ತೂರುತ್ತವೆ 3
4. ರಾಜನ ಆಸ್ಥಾನದಲ್ಲಿ ನಡೆಯುವ ಅಧಿಪತ್ಯದ ಕಲಾಪ 3
6. ಇವನೊಬ್ಬ ಶ್ರೋತೃ 3
9. ಎಣಿಕೆಗೆ ಬೇಕಾಗುವ ಮಂದಿ 2
10. ಬರಹಕ್ಕೆ ರೂಪ ಕೊಡುವ ಅಕ್ಷರ 2
11. ಸಮೀರನ ದಾರಿಗೆ ಹತ್ತಿರ 3
12. ಆತಂಕ ಮತ್ತು ತವಕದಿಂದ ಓಡು 3
14. ಕಷ್ಟವಿಲ್ಲದೆ ಆರಾಮದಿಂದ ಸಂತೋಷಪಡು 3
15. ಮದುಮಗನ ಆಲಾಪನೆಯಿಂದ ಆರಂಭವಾಗುವ ರಾಗವೇ ಇದು? 3
17. ದೂಷಣನ ಸೋದರ 2
18. ನಾಶಕ್ಕೆ ಸಮೀಪ, ವೃದ್ಧಿಗೆ ವಿರೋಧವಾದುದು 2
20. ಜಳದಿಂದ ಮಾಡುವ ಸ್ನಾನ 3
21. ಉಪವಾಸಕ್ಕೆಂದೇ ಕಟ್ಟುವ ಸಾಲು 3
22. ಪೂರ್ವ ಜನ್ಮದಲ್ಲಿ ಮಾಡಿರಬಹುದಾದ ಒಳ್ಳೆಯ ಕರ್ಮ 3
23. 'ಅ' ಯಿಂದ 'ಕ್ಷ' ವರೆಗೆ ಅವಿನಾಶಿಯಾದ ಭಾಷೆಯ ಮೂಲ 3
24. ಚಾಕು ಚೂರಿಯಿಂದ ಚುಚ್ಚುವಿಕೆ 3

**ಎಡದಿಂದ ಬಲಕ್ಕೆ**

1. ಹಸುಕರುಗಳನ್ನು ವೃದ್ಧಿಪಡಿಸುವ ಶ್ರೀಕೃಷ್ಣನ ಬೆಟ್ಟ 4
3. ನಗೆಪಾಟಲಾಗುವುದಕ್ಕೆ ಎಡೆಮಾಡಿದ್ದು 4
5. ಪರಾಕ್ರಮ ಸಿಂಹ 5
7. ಮಾನಮರ್ಯಾದೆ ಏನೂ ಇಲ್ಲದವ 4
8. ಇದನ್ನು ತೆಗೆದಲ್ಲೇ ಚೆಲ್ಲಿ ಹರಿಯ ವರ ಪಡೆಯಿರಿ ಎಂಬುದು ದಾಸವಾಣಿ 4
9. ಹರಟೆಗೆ ಹೆಸರುವಾಸಿಯಾದ ಮನೆಯಂಗಳದ ಕಟ್ಟೆ 3
11. ನಿಜವನ್ನುಳಿಸಲು ಮಾಡುವ ರಾಜಿ 5
13. ಜಿಪುಣರಲ್ಲಿ ಜಿಪುಣನಾದ ಆರಾಧ್ಯಮೂರ್ತಿ 5
16. ಉತ್ತುಂಗಕ್ಕೇರಿರುವ ಸಂತೃಪ್ತಿ ಸಮಾಧಾನ 5
18. ಹೊದೆಯುವುದಕ್ಕೆ ಬೆಚ್ಚಗಿದ್ದರೂ ನಡೆಯುವುದಕ್ಕೆ ಇದು ಚೆನ್ನ 5
19. ರಜೆಯಲ್ಲಿ ಮೂಡುವ ಶಶಿ 3
21. ಆದರಿಸಿ ಆತಿಥ್ಯ ನೀಡು 4
23. ತೀರಾ ಕೆಳಮಟ್ಟಕ್ಕೆ ಇಳಿದ ಅವಸ್ಥೆ 4
25. ಕರುಣೆಯ ನೋಟದಿಂದ ಸಿಗುವ ಆಶೀರ್ವಾದ 5
26. ದಿಕ್ಕಿನಲ್ಲಿ ಮುಳುಗಿ ಹೋದವ 4
27. ವಿರಾಮದಲ್ಲಿ ಪೂತನಿಯ ಜೊತೆ ಬರುವ ಭಾರತದ ವೀರ 4

## ಪದಬಂಧ ಉತ್ತರ -2816

**ಮೇಲಿಂದ ಕೆಳಕ್ಕೆ**

1.ನೇಸರ 2.ನವನವೀನ 3.ವಿಶಿಷ್ಟಾದ್ವೈತ 4.ಸರಸವಿರಸ 7.ಸುಪ್ತಸಾಗರ 10.ನೀನಾಸಂ 11.ವರಾಹರೂಪ 12.ಕಮಲವದನ 15.ರಕ್ತಚಂದನ 16.ಮಡಿವಂತಿಕೆ 18.ಹಿರೀಕ

**ಎಡದಿಂದ ಬಲಕ್ಕೆ**

1.ನೇತ್ರದಾನ 3.ವಿಕಾಸ 5.ವನರಾಶಿ 6. ರಕ್ಷಿಸು 8.ರಸಾಯನ 9.ನವನೀತಚೋರ 11.ವಣಿಕ 13.ಸದರ 14.ಮಧುರಸಂಗಮ 17.ವಂಶವಾಹಿ 19.ಪರದ 20.ದಮಯಂತಿ 21.ನರ್ತನ 22.ಕೆಟ್ಟಪಾಕ

# ಪ್ರಯೋಗಸುಖಿ ಬಹುಮುಖಿ

ವಿವೇಕ ಶಾನಭಾಗ

ಸಂಭ್ರಮ

ಯಾವ ಉಪಮೆಯಿಂದಲೂ ಎಸ್. ದಿವಾಕರ್ ಅವರನ್ನು ವರ್ಣಿಸಲು ಸಾಧ್ಯವಿಲ್ಲ. ಕವಿ, ಕತೆಗಾರ, ಸಂಪಾದಕ, ಚಿತ್ರಕಾರ, ಅನುವಾದಕ, ಅಂಕಣಕಾರ, ಸಂಗೀತಪ್ರಿಯ, ಸಂಗೀತಾಭ್ಯಾಸಿ, ಚಲನಚಿತ್ರ ನಿರ್ದೇಶಕ ಮತ್ತು ಅತ್ಯಂತ ವಿಶೇಷ ಓದುಗ–ಹೀಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಅವರಿಗೆ ಅವರೇ ಹೋಲಿಕೆ. ದಿವಾಕರ್ ಜೊತೆ ಮಾತಿಗೆ ಕೂತರೆ ಅಥವಾ ಅವರ ಲೇಖನ ಸರಣಿಗಳನ್ನು ಗಮನಿಸಿದರೆ ಅವರು ಒಂದಕ್ಕೊಂದು ಕುಣಿಕೆ ಹಾಕುವ ಸಂಗತಿಗಳು ವಿವಿಧ ರಂಗಗಳಲ್ಲಿ ಅವರಿಗಿರುವ ಒಳನೋಟಗಳಿಂದ ಬೆಳಗುತ್ತ, ಫಾರ್‌ಸ್ಟರ್ ಹೇಳಿದ 'ಓನ್ಲಿ ಕನೆಕ್ಟ್' ಅನ್ನುವುದಕ್ಕೆ ಒಂದು ಪ್ರಾತ್ಯಕ್ಷಿಕೆಯಂತೆ ಇರುತ್ತವೆ.

ಜಾಗತಿಕ ಸಾಹಿತ್ಯದ ಎಂಥ ವಿಸ್ತಾರವಾದ ಓದೇ ಇರಲಿ ಅದನ್ನು ಕನ್ನಡದ ಮನಸ್ಸಿನಿಂದ, ಕನ್ನಡದ ಒಳಗೆ ಇಟ್ಟು ನೋಡದ ಹೊರತು ಅದು ಹೋಗದೂರಿನ ಹಾದಿ ತಿಳಿದಷ್ಟೇ ಪ್ರಯೋಜನಕರ. ಅಂಥ ಅರ್ಥಪೂರ್ಣ ಸಂವಾದ ಸಾಧ್ಯವಾಗಲು ಕನ್ನಡದ ಓದು ಕೂಡ ಗಾಢವಾಗಿಯೇ ಇರಬೇಕು. ಈ ಎರಡೂ ಕರಗತವಾಗಿರುವ ದಿವಾಕರರಿಗೆ ಸಂಗೀತ ಹಾಗೂ ಆಧುನಿಕ ಕಲಾಪ್ರಕಾರಗಳ ಆಳವಾದ ಜ್ಞಾನ ಕೂಡ ಇದೆ. ಅವರ ಬರವಣಿಗೆಯೊಳಗೆ, ಅಗೋ ಅಲ್ಲಿ ನೋಡು, ಇಲ್ಲಿ ನೋಡು ಎಂದು ಸಹಯಾತ್ರಿಗೆ ಬೊಟ್ಟು ಮಾಡಿ ಸೂಚಿಸುತ್ತ, ಜೊತೆಯಾಗಿ ಆ ವಿಶೇಷ ದೃಶ್ಯವನ್ನು ಸವಿಯುವ ಪಯಣಿಗನಂತೆ ಅವರು ಕಾಣಿಸುತ್ತಾರೆ. ಹಾಗೆ ಗಮನ ಸೆಳೆಯದೇ ಹೋಗಿದ್ದರೆ, ನಾವು ನಿಂತ ಕನ್ನಡದ ಜಾಗದಿಂದ ಎಷ್ಟೊಂದನ್ನು ಕಾಣದೇ ಹೋಗುತ್ತಿದ್ದೆವಲ್ಲ ಎಂಬುದು ಹೊಳೆಯುತ್ತದೆ. ಹೀಗೆ ಕಾಣಿಸಲು ವಿಭಿನ್ನ ಬಗೆಯ ಸೃಜನಶೀಲತೆ ಮತ್ತು ಸಾಹಿತ್ಯವನ್ನು ಪ್ರಾಂಜಲವಾದ ಮನಸ್ಸಿನಿಂದ ಆನಂದಿಸುವ ಗುಣ ಅತ್ಯವಶ್ಯ. ಹಂಚಿಕೊಳ್ಳುವ ಸಂತೋಷವಲ್ಲದೇ ಬೇರೆ ಯಾವುದೂ ಮುಖ್ಯವಲ್ಲವೆನ್ನುವ ನಿಲುವು ಬೇಕಾಗುತ್ತದೆ. ಇವೆಲ್ಲವೂ ದಿವಾಕರರಲ್ಲಿ ಧಾರಾಳವಾಗಿ ಇರುವುದರಿಂದ ಅವರ ಒಡನಾಟ ಮತ್ತು ಬರವಣಿಗೆ ನಮ್ಮಲ್ಲೊಂದು ಬಗೆಯ ಹೊಸ ತಿಳಿವಳಿಕೆಯನ್ನು ಮೂಡಿಸಿ, ಕೃತಜ್ಞತೆಯ ಭಾವನೆಯನ್ನು ಹುಟ್ಟಿಸುತ್ತದೆ.

ದಿವಾಕರ್ ಕಟ್ಟಿಕೊಡುವ, ಮೌಖಿಕ ಪರಂಪರೆಯಿಂದ ಸತ್ವ ಪಡೆದ, ಓದುಗ ಕೇಂದ್ರಿತ ಸಾಹಿತ್ಯ ಚರಿತ್ರೆಗೆ ವಿಶೇಷ ಸ್ವಾರಸ್ಯವಿದೆ. ಅವರದೇ ಅಭಿರುಚಿಯ, ಆಯ್ಕೆಯ ಸ್ಪರ್ಶವಿರುವ ಅದು ಬಿಡಿಬಿಡಿಯಾಗಿ ಲೇಖನದಲ್ಲೋ ಸಾಹಿತ್ಯಪ್ರಿಯರ ಜೊತೆ ಹೂಡಿದ ಹರಟೆಯಲ್ಲೋ ಮೈದಳೆಯುತ್ತದೆ. ಈ ಹೊತ್ತಿಗೆ ಥಟ್ಟನೆ ನೆನಪಾಗುವ ಹೆಸರುಗಳೆಂದರೆ ಕುರ್ತಕೋಟಿ ಮತ್ತು ಕಿ.ರಂ. ನಾಗರಾಜ. ಕುರ್ತಕೋಟಿಯವರು ಸಂಸ್ಕೃತ, ಕನ್ನಡ, ಇಂಗ್ಲಿಷ್ ಸಾಹಿತ್ಯದ ತಮ್ಮ ಅಪಾರವಾದ ಜ್ಞಾನದಿಂದ ಕನ್ನಡವನ್ನು ಬೆಳಗಿದರು. ಕಿ.ರಂ. ತಮ್ಮ ಕಾವ್ಯಪ್ರೀತಿಯಿಂದ, ಸಂಗೀತದಲ್ಲಿರುವ ಅಭಿರುಚಿಯಿಂದ ಮತ್ತು ವಿಸ್ತಾರವಾದ ಓದಿನಿಂದ ಕನ್ನಡ ಸಾಹಿತ್ಯದ ಮೆರುಗು ಹೆಚ್ಚಿಸಿದರು. ಅಂತೆಯೇ ದಿವಾಕರ್ ಆಧುನಿಕ ವಿಶ್ವಸಾಹಿತ್ಯದ ನೆಲೆಯಿಂದ ಕನ್ನಡವನ್ನು ಕಂಡು ಹೊಸ ಓದಿನ ಸಾಧ್ಯತೆಗಳನ್ನು ತೋರಿಸಿದರು. ಈ ಮೂವರೂ ಸ್ವಾರಸ್ಯಕರ ಸಾಹಿತ್ಯ ಸಂದರ್ಭಗಳನ್ನು, ಸಾಹಿತಿಗಳ ಒಡನಾಟವನ್ನು ಕಥಿಸುವುದರಲ್ಲಿ ಸಿದ್ಧಹಸ್ತರು. ಹರಟೆಯಲ್ಲಿ ನಿಸ್ಸೀಮರು. ಕಾವ್ಯಮೋಹಿಗಳು ಹಾಗೂ ಅತ್ಯಪರೂಪದ ಜ್ಞಾಪಕಶಕ್ತಿಯ ವರ ಪಡೆದವರು. ವಿಶೇಷವೆಂದರೆ, ತೀರಾ ಹಟಕ್ಕೆ ಬಿದ್ದ ಹೊರತು ಈ ಮೂವರನ್ನೂ ಯಾವುದೇ ಒಂದು ನಿರ್ದಿಷ್ಟ ಸಾಹಿತ್ಯಿಕ ಚಳವಳಿಯ ಚೌಕಟ್ಟಿನಲ್ಲಿ ಕೂರಿಸುವುದು ಕಷ್ಟ. ಅವರು ಯಾವುದಕ್ಕೂ ಅತಿಯಾಗಿ ಅಂಟಿಕೊಂಡವರಲ್ಲ. ತಮ್ಮ ತುಸು ಸಾಂಪ್ರದಾಯಿಕ ಗುಣದಿಂದ, ಅಥವಾ ಕ್ಲಾಸಿಕಲ್ ರುಚಿ ಎಂದೂ ಅನ್ನಬಹುದೇನೋ, ಇವರಿಗೆ ಹೀಗೆ ಅತೀತವಾಗುವುದು ಸಾಧ್ಯವಾಗಿದೆ. ಆದ್ದರಿಂದಲೇ ಇವರ ಗ್ರಹಿಕೆ ವಿಶಾಲವಾದುದು. ಇಲ್ಲಿ ಕಾವ್ಯದ ಸಾಲುಗಳು ಮುಖ್ಯವೇ ಹೊರತು ಅದು ಅನುವಾದವೇ ಅಥವಾ ಕುವೆಂಪು, ಬೇಂದ್ರೆ, ಸಿದ್ಧಲಿಂಗಯ್ಯನವರದೇ ಅನ್ನುವುದು ಮುಖ್ಯವಾಗುವುದಿಲ್ಲ.

ಎಸ್. ದಿವಾಕರ್ ಚಿತ್ರ: ರಘು ಅಪಾರ

ದಿವಾಕರ್ ತಮ್ಮ ಕಥೆಗಳಲ್ಲಿ ಮಾಡಿದ ಪ್ರಯೋಗಗಳಿಗೆ ಎಣೆಯಿಲ್ಲ. ಹೊಸದನ್ನು ಹೇಳಲು ಹೊಸ ಕಥಾಸ್ವರೂಪ ಬೇಕು ಎನ್ನುವ ನಿಲುವು ಅವರದು. ಪ್ರಕಟವಾದ ಕಾಲಕ್ಕೆ ಬಹುಚರ್ಚೆಗೆ ಒಳಗಾದ ಅವರ 'ಕ್ರೌರ್ಯ' ಕತೆಯಲ್ಲಿ ಸಂಪ್ರದಾಯವಾದಿ ಕುಟುಂಬದೊಳಗಿನ ತಣ್ಣನೆಯ ಕ್ರೌರ್ಯವನ್ನು ಹೊರಜಗತ್ತಿನ ಭೌತಿಕ ಹಿಂಸೆಯೊಡನೆ ಇಟ್ಟು ಶೋಧಿಸಿದ ಪರಿ ಅನನ್ಯವಾದುದು. ಇಬ್ಬಗೆಯ ಜಗತ್ತಿನಲ್ಲಿ ಸಿಲುಕಿದವರ ದುರಂತವು ಅವರ ಕತೆಗಳಲ್ಲಿ ಮರುಕಳಿಸುತ್ತದೆ.

ತಮ್ಮ ಲೇಖನಗಳಲ್ಲಿ ದಿವಾಕರ್ ಸಂಗೀತ–ಸಾಹಿತ್ಯ ಮೂಲವಾದ ಸಂವೇದನೆಯ ಮುಖೇನ ಜಗತ್ತನ್ನು ಒಂದಕ್ಕೊಂದು ಸಂಬಂಧಪಟ್ಟ ಸಾಂಸ್ಕೃತಿಕ ಸಂಗತಿಗಳ ವಿಸ್ತೃತ ಜಾಲವನ್ನಾಗಿ ಕಾಣುತ್ತಾರೆ. ಇದು, ವಿಭಿನ್ನ ಗ್ರಹಿಕೆಗಳನ್ನು ಒಟ್ಟುಗೂಡಿಸುವ ಮೂಲಕ ಜಗತ್ತನ್ನು ಎಂದೂ ನೋಡಿರದ ರೀತಿಯಲ್ಲಿ ಕಾಣಿಸುವ ಪ್ರತಿಭೆ. ಹೀಗೆ ಕಂಡಾಗ ಬೇಂದ್ರೆ, ಕೆಎಸ್‌ನ ಮತ್ತು ಉಂಬೆರ್ತೊ ಎಕೊ ಒಟ್ಟಿಗೇ ಇರುತ್ತಾರೆ. ಬಾಲಮುರಳಿ, ಶೆಮ್ಮಂಗುಡಿ ಮತ್ತು ಭೀಮಸೇನ ಜೋಶಿಯವರ ಜೊತೆ ಲೇಖಕ ಸಿಂಗರ್ ಕೂಡ ಇದ್ದಾನೆ. ಇಂಥ ಕಥನವನ್ನು ನೇಯುವ ಶಕ್ತಿಯೇ ಅವರ ಬರವಣಿಗೆಯ ವಿಶೇಷ.

ಕನ್ನಡ ಸಾಹಿತ್ಯಕ್ಕೆ ದಿವಾಕರರ ಕೊಡುಗೆಯನ್ನು ಗಣಿಸುವಾಗ ಲೇಖನಗಳನ್ನು, ಸೃಜನಾತ್ಮಕ ಬರಹಗಳನ್ನು ಮಾತ್ರವಲ್ಲದೇ, ಸಂಪಾದಕರಾಗಿ ಅವರು ರೂಪಿಸಿದ ಸಾಹಿತ್ಯಿಕ ವಾತಾವರಣ, ವಿಶ್ವಸಾಹಿತ್ಯದ ಮುಖ್ಯ ಕೃತಿಗಳನ್ನು ಅನುವಾದಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ಹೊಸ ಕಥನಕ್ರಮಗಳು, ಸಂದರ್ಭಾನುಸಾರ ಮುನ್ನೆಲೆಗೆ ತಂದ ಹಲವು ಸಾಂಸ್ಕೃತಿಕ ಸ್ಮೃತಿಗಳು, ಪುಸ್ತಕ ವಿಮರ್ಶೆಗಳು, ಸಾಹಿತ್ಯ ಸಲಹೆಗಾರರಾಗಿ ಪ್ರಕಾಶನ ಸಂಸ್ಥೆಗಳ ಮೂಲಕ ಹೊರತಂದ ಪುಸ್ತಕಮಾಲೆಗಳು ಹಾಗೂ ಹೊಸ ಬರಹಗಾರರಿಗೆ ಅವರಿಂದಾಗಿ ಒದಗಿ ಬಂದ ಓದಿನ ಸಂಸ್ಕಾರ ಇವೆಲ್ಲವನ್ನೂ ಗ್ರಹಿಸಬೇಕಾಗುತ್ತದೆ.

ಹಲವು ದಶಕಗಳ ಅವರ ಸ್ನೇಹಮಯ ಒಡನಾಟದಲ್ಲಿ ನನಗೆ ದೊರೆತ ವೈಚಾರಿಕ, ಸೃಜನಶೀಲ ಪ್ರಚೋದನೆಯನ್ನು ನೆನೆಸಿಕೊಂಡರೆ ನಾನು ಭಾಗ್ಯಶಾಲಿಯೆನಿಸುತ್ತದೆ. ನನ್ನಂಥ ಅನೇಕರು ಜೊತೆಗೂಡಿ ಈ ಅಪೂರ್ವ ಸಾಹಿತ್ಯೋತ್ಸಾಹಿಯ ಎಂಬತ್ತರ ಹುಟ್ಟುಹಬ್ಬಕ್ಕೆ ಇಂದು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

### 'ನಮ್ಮ ದಿವಾಕರ್' ಕಾರ್ಯಕ್ರಮ

ಕತೆಗಾರ ಎಸ್. ದಿವಾಕರ್ ಅವರು ಎಂಬತ್ತನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ. ಈ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಲು ನವೆಂಬರ್ 26ರ ಭಾನುವಾರ ಬೆಳಿಗ್ಗೆ 10.15ಕ್ಕೆ ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್' ಸಭಾಂಗಣದಲ್ಲಿ 'ನಮ್ಮ ದಿವಾಕರ್' ಕಾರ್ಯಕ್ರಮ ನಡೆಯಲಿದೆ. 'ಪರಿಮಳದ ಪಡಸಾಲೆ' ಎಂಬ ದಿವಾಕರ್ ಅವರನ್ನು ಕುರಿತ ವಿಶೇಷ ಸಂಚಿಕೆ ಈ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿದೆ. ಪಂಡಿತ್ ಪರಮೇಶ್ವರ ಹೆಗಡೆ ಅವರು ಸ್ವರ ಸಂಯೋಜಿಸಿರುವ, ದಿವಾಕರ್ ಅವರದ್ದೇ ರಚನೆಯ ಗೀತೆಗಳ ಗಾಯನ ಕಾರ್ಯಕ್ರಮವೂ ಇದೆ.

# ರಾಜಕೀಯ ಬೆಳವಣಿಗೆಗೂ ಕನ್ನಡಿ ಹಿಡಿವ ಆತ್ಮಕಥನ

ರಾಹುಲ ಬೆಳಗಲಿ

ಒಳನೋಟ

ಕನ್ನಡದಲ್ಲಿ ಈವರೆಗೆ ಬಂದಿರುವ ಆತ್ಮಕಥನಗಳ ಸಾಲಿನಲ್ಲಿ ಬಹುಶಃ 'ಕಲ್ಯಾಣ ಕೆಡುವ ಹಾದಿ' ಹತ್ತರಲ್ಲಿ ಹನ್ನೊಂದು ಆಗುತ್ತಿತ್ತು. ಆದರೆ, ಅದಕ್ಕೆ ಆಸ್ಪದ ನೀಡದ ರೆಬೆಲ್ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಬೇರೆಯದ್ದೇ ಕಥನ ತೆರೆದಿಡುತ್ತಾರೆ. ತಮ್ಮ ಬದುಕಿನ ಚಿತ್ರಣಕ್ಕೆ ಸೀಮಿತಗೊಳ್ಳದೇ ಆಯಾ ಕಾಲಘಟ್ಟದ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾರೆ.

'ರಾಜಿಯಾಗದೇ ಅನ್ಯಮಾರ್ಗವಿಲ್ಲ' ಎಂಬ ಅಸಹಾಯಕ ಸ್ಥಿತಿ ಎದುರಾದರೂ ವ್ಯವಸ್ಥೆಯೊಂದಿಗೆ 'ನಾ ಮಣಿಯೇ' ಎಂಬುದನ್ನು ಸ್ಪಷ್ಟವಾಗಿ ಹೇಳುವ ಬಾಲಸುಬ್ರಮಣಿಯನ್ 46 ವರ್ಷಗಳ ವೃತ್ತಿಜೀವನದಲ್ಲಿ ಅರಾಜಕತ್ವ ಸಿದ್ಧಾಂತ ಅನುಸರಿಸಿದವರು. ಮಾರ್ಕ್ಸಿಸ್ಟ್ ವಿಚಾರಧಾರೆಯು ಅವರ ಬದುಕು ಮತ್ತು ವೃತ್ತಿಯ ಮೇಲೆ ಪ್ರಭಾವ ಬೀರಿದೆ.

ಸರ್ಕಾರಿ ಅಧಿಕಾರಿಗಳು ವೃತ್ತಿಯಲ್ಲಿದ್ದಾಗ ಅಷ್ಟೇ ಅಲ್ಲ, ನಿವೃತ್ತಿ ಬಳಿಕವೂ ಸರ್ಕಾರಿ ವ್ಯವಸ್ಥೆಯಲ್ಲಿ ಆಗು–ಹೋಗುಗಳು, 'ಆನ್' ಮತ್ತು 'ಆಫ್ ದಿ ರಿಕಾರ್ಡ್' ಮಾತನಾಡಲು ಬಯಸುವುದಿಲ್ಲ. ರಾಜಕಾರಣಿ ಬಯಸಿದಂತೆ 'ಸೇವೆ' ಸಲ್ಲಿಸಿ, ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದರೆ, ಅಲ್ಲಿಗೆ ಆ ದಿನದ ಕೆಲಸ ಮುಗೀತು ಎಂಬ ಮನೋಭಾವ ಕೆಲ ಅಧಿಕಾರಿಗಳದ್ದಾಗಿರುತ್ತದೆ. ಆದರೆ, ಅಂಥವರೊಂದಿಗೆ ಗುರುತಿಸಿಕೊಳ್ಳಲು ಬಯಸದೇ ಮತ್ತು ಕಾನೂನಿನ ಚೌಕಟ್ಟನ್ನೂ ಮೀರದೇ ಜನರ ಪರ ಕೆಲಸ ಮಾಡುವ ಮನಃಸ್ಥಿತಿ ವಿ.ಬಾಲಸುಬ್ರಮಣಿಯವರದ್ದು. ಮುಖ್ಯಮಂತ್ರಿ, ಸಚಿವರು, ಅಧಿಕಾರಿಗಳು, ಸಹೋದ್ಯೋಗಿಗಳ ಜೊತೆ ಹೇಗೆಲ್ಲ ಕೆಲಸ ಮಾಡಿ, ಸವಾಲುಗಳನ್ನು ಎದುರಿಸಬೇಕಾಯಿತು ಎಂಬುದನ್ನು ಅವರು ಯಾವುದೇ ಮುಚ್ಚುಮರೆಯಿಲ್ಲದೆ ಮತ್ತು ವೈಭವೀಕರಿಸದೇ ವಿವರಿಸಿದ್ದಾರೆ.

ಪರಿಚಯ ಮತ್ತು ಪೀಠಿಕೆಯ ಕೆಲ ಪುಟಗಳನ್ನು ಓದುತ್ತ ಸಾಗಿದಂತೆ ಬೇರೆಯದ್ದೇ ಅನುಭೂತಿ ನೀಡುತ್ತದೆ. ಕೃತಿಯುದ್ದಕ್ಕೂ ಅಲ್ಲಲ್ಲಿ ಬರುವ ದಾರ್ಶನಿಕರ ಅಭಿಮತ, ಸಿದ್ಧಾಂತ, ವೈಚಾರಿಕತೆ ಮತ್ತು ಅದಕ್ಕೆ ಪೂರಕವಾದ ಪ್ರಸಂಗಗಳು ಆಸಕ್ತಿ ಮೂಡಿಸುತ್ತವೆ. ಗ್ರಾಮೀಣ ಪ್ರದೇಶದಿಂದ ವಿದೇಶದವರೆಗಿನ ಪ್ರಯಾಣ ಎಲ್ಲವನ್ನೂ ಕಟ್ಟಿಕೊಡುತ್ತದೆ. ಹಳೆಯ ಘಟನೆಗಳ ಮೆಲುಕು ಮತ್ತು ಆಯಾ ಪ್ರದೇಶದ ಚಿತ್ರಣ ಕಟ್ಟಿಕೊಡುವ ಈ ಕೃತಿಯು ಭಾರತೀಯ ರಾಜಕೀಯ ವ್ಯವಸ್ಥೆ ಮತ್ತು ಅಧಿಕಾರಿಗಳ ಕಾರ್ಯನಿರ್ವಹಣೆ ಹೇಗಿರುತ್ತದೆ ಎಂಬುದನ್ನು ತಿಳಿಸುತ್ತದೆ. ಬೇರೆ ಬೇರೆ ಕಾರಣಗಳಿಂದ ಈವರೆಗೆ ಎಲ್ಲಿಯೂ ದಾಖಲಾಗದ ಹಲವು ಸಂಗತಿಗಳು ಇದರಲ್ಲಿ ಅನಾವರಣಗೊಂಡಿವೆ.

ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲ, ದೇವರಾಜ ಅರಸು, ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್.ಬಂಗಾರಪ್ಪ, ಜೆ.ಎಚ್. ಪಟೇಲ್ ಮತ್ತು ಎಸ್.ಎಂ.ಕೃಷ್ಣ ಅವರ ಕಾರ್ಯದರ್ಶಿ ಮತ್ತು ಕೈಕೆಳಗಿನ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ದಿನಗಳನ್ನು ಅವರು ನೆನಪಿಸಿಕೊಂಡಿದ್ದಾರೆ. ಹಲವು ವಿಷಯಗಳನ್ನು ಮುಕ್ತವಾಗಿ ಹಂಚಿಕೊಂಡಿದ್ದಾರೆ.

ವಿ.ಬಾಲಸುಬ್ರಮಣಿಯನ್ ಅವರ 'Fall from Grace' ಇಂಗ್ಲಿಷ್ ಕೃತಿಯನ್ನು ಸಾಹಿತಿ ಎನ್.ಸಂಧ್ಯಾರಾಣಿ ಅವರು ಕನ್ನಡಕ್ಕೆ ತಂದಿದ್ದಾರೆ. ಮೂಲಕೃತಿಯ ಆಶಯಕ್ಕೆ ಧಕ್ಕೆಯಾಗದ ಮತ್ತು ಓದುಗರಿಗೂ ಕಠಿಣವಾಗದ ರೀತಿಯಲ್ಲಿ ಸೊಗಸಾಗಿ ಕನ್ನಡೀಕರಿಸಿದ್ದಾರೆ.




ಪು: 450 ₹600

**ಕಲ್ಯಾಣ ಕೆಡುವ ಹಾದಿ**
ಇಂಗ್ಲಿಷ್: ವಿ.ಬಾಲಸುಬ್ರಮಣಿಯನ್
ಕನ್ನಡಕ್ಕೆ: ಎನ್.ಸಂಧ್ಯಾರಾಣಿ
ಪ್ರ: ಲಡಾಯಿ ಪ್ರಕಾಶನ
ಸಂ: 9480286844

## ಮೊದಲ ಓದು

# ತುಳುನಾಡಿನ ಸಂಸ್ಕೃತಿಯ ದರ್ಶನ

**ಕರ್ನಾಟಕ** ಇತಿಹಾಸ ಅಕಾಡೆಮಿಯಲ್ಲಿ ಸಕ್ರಿಯವಾಗಿದ್ದಾಗ ಕ್ಷೇತ್ರ ಕಾರ್ಯ ಮಾಡಿ 'ಬಂಟರು-ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ' ಎಂಬ ಗ್ರಂಥವನ್ನು ಇಂದಿರಾ ಹೆಗ್ಗಡೆಯವರು ಬರೆದಿದ್ದರು. ಆ ಶೋಧಕಾರ್ಯದ ಸಂದರ್ಭದಲ್ಲಿ ಲಭ್ಯವಾಗಿ ಉಳಿದ ಹಾಗೂ ಮುಂದೆ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಬರೆದಿದ್ದ ಬಿಡಿ ಲೇಖನಗಳ ಸಂಗ್ರಹವೇ 'ತುಳುನಾಡು ಸಂಸ್ಕೃತಿ ಸಮೀಕ್ಷೆ' ಗ್ರಂಥ.

ಧರ್ಮದ ಚಿಂತನೆ, ತುಳುನಾಡಿನ ಭೂತಾರಾಧನೆ ಮತ್ತು ಮಾನವ ಧರ್ಮದ ಸಂಬಂಧ, ಮಾತೃ ಸಂಸ್ಕೃತಿ, ತುಳುನಾಡನ್ನಾಳಿದ ಮಹಿಳೆಯರು, ದ್ವಿಲಿಂಗಿ ಶಕ್ತಿಗಳಾಗಿರುವ ಭೂತಗಳು, ಕೊರಗರ ಕುರಿತ ಅಧ್ಯಯನ ಬರೆಹ, ಗರಡಿ ವಿದ್ಯೆ, ವಿವಾಹ ಸಂಸ್ಕೃತಿ, ಧರ್ಮಸ್ಥಳದ ಮಹಾ ನಡಾವಳಿ, ಆಳುಪರ ಬಗ್ಗೆ- ಅರಸರ ಹೆಸರುಗಳ ಕುರಿತಾದ ಮಾಹಿತಿ, ಕೋಳಿ ಅಂಕವೇ ಮೊದಲಾದ, ತುಳುನಾಡಿನ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಆಪ್ತವಾದ ಲೇಖನಗಳು ಇಲ್ಲಿವೆ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರ ಕುರಿತ ನೆನಪಿನ ಬರೆಹವೊಂದು ಗಡಿನಾಡಿನ ಕನ್ನಡಿಗರ ತುಮುಲಕ್ಕೆ ಕನ್ನಡಿ ಹಿಡಿದು ಗಮನ ಸೆಳೆಯುತ್ತದೆ. ಲೇಖಕಿ ಆಯಾ ಪ್ರದೇಶಗಳಿಗೆ ಭೇಟಿ ನೀಡಿದಾಗಿನ ಅನುಭವಜನ್ಯ ಮಾತುಗಳು ಇಲ್ಲಿರುವುದರಿಂದ ಓದಿಸಿಕೊಂಡು ಹೋಗುತ್ತದೆ. ಈ ಲೇಖನಗಳಲ್ಲಿ ಚರಿತ್ರೆಯ ಅಧ್ಯಯನದ ಆಳವು ಬಿಂಬಿತವಾಗುತ್ತದೆ. ಹೀಗಾಗಿ ಇಲ್ಲಿನ ಬರೆಹಗಳು ಅಧಿಕೃತ ಮಾಹಿತಿಕೋಶದಂತೆಯೂ ಕಾಣಿಸುತ್ತವೆ.

ಕನ್ನಡ ಕರಾವಳಿಯ ಮನೆಗಳಲ್ಲಿನ ಸಮೃದ್ಧ ಭೌತಿಕ ಸಂಸ್ಕೃತಿ ಎಂಬ ಲೇಖನದಲ್ಲಿ ಅರಮನೆ, ಅರಂತಡೆ, ಮಾಗಂದಡಿ, ಬಾವ, ಬೂಡು, ಗುತ್ತು, ದೇವಸ್ಯ, ಭಂಡಾರ ಮನೆ, ಬಂಡಸಾಲೆ, ಗರಡಿ ಮನೆ, ಬರ್ಕೆ, ಪಟ್ಲ ಮುಂತಾಗಿ ಹಿಂದಿನ ತುಳುನಾಡಿನ ಮನೆಗಳನ್ನು ಕರೆಯುತ್ತಿದ್ದ ರೂಢಿಯ ಮೇಲೆ ಬೆಳಕು ಚೆಲ್ಲಲಾಗಿದೆ.




ಪು: 300 ₹268

**ತುಳುನಾಡು ಸಂಸ್ಕೃತಿ ಸಮೀಕ್ಷೆ**
ಲೇ: ಇಂದಿರಾ ಹೆಗ್ಗಡೆ
ಪ್ರ: ಮಯೂರ ಪ್ರಕಾಶನ
ಸಂ: 7795351673

# ಹಂಸಲೇಖ ಗೀತೆಗಳ ಅವಲೋಕನ

**ಕನ್ನಡ** ಚಿತ್ರರಂಗದಲ್ಲಿ ಚಿತ್ರಸಾಹಿತಿಯಾಗಿ, ಸಂಗೀತ ನಿರ್ದೇಶಕರಾಗಿ ತಮ್ಮದೇ ಛಾಪು ಮೂಡಿಸಿದವರು ಹಂಸಲೇಖ. ರವಿಚಂದ್ರನ್–ಹಂಸಲೇಖ ಜೋಡಿಯ ಅನೇಕ ಸಿನಿಮಾ ಹಾಡುಗಳು ಅಂದಿಗೂ, ಇಂದಿಗೂ ಸೂಪರ್ ಹಿಟ್. ಹಂಸಲೇಖರ ಇಂತಹ ಒಂದಷ್ಟು ಚಿತ್ರಗೀತೆಗಳನ್ನು ಅವಲೋಕಿಸುವ ಕೃತಿ 'ಹಂಸಾಕ್ಷರ'.

ಕೃತಿಯ ಲೇಖಕರಾದ ಜಯರಾಮಾಚಾರಿ ಪ್ರಾರಂಭದಲ್ಲಿಯೇ ಹಂಸಲೇಖ ಹಾಡುಗಳ ಕುರಿತಾಗಿ ತಮಗಂಟಿದ ಗೀಳಿನ ಕುರಿತು ಹೇಳುತ್ತ, 'ಈ ನಿಂಬೆ ಹಣ್ಣಿನಂತಾ ಹುಡುಗಿ ಬಂದ್ಳು...', 'ಬಂತು ಬಂತು ಬಂತು ಕರೆಂಟು ಬಂತು...' ಮೊದಲಾದ ಗೀತೆಗಳನ್ನು ನೆನಪಿಸುತ್ತ ಹೋಗುತ್ತಾರೆ. ಕೃತಿಯಲ್ಲಿ ಹದಿನೈದು ಲೇಖನಗಳಿದ್ದು, ಹಂಸಲೇಖ ಸಾಹಿತ್ಯಕ್ಕಿರುವ ಶಕ್ತಿಯನ್ನು, ಅನೇಕ ಪದಗಳ ಒಳಾರ್ಥವನ್ನು ಕಟ್ಟಿಕೊಡುವ ಪ್ರಯತ್ನವಿದೆ.

''ಒಂದು ನೆಲ್ಲು ಚೆಲ್ಲಿದರೆ ರಾಶಿ ಮಾಡುವ ಇವಳದೇನೂ ಕರುಣೆ ಪ್ರೀತಿಯೋ' ಅಂತ ಬರೆದ ಹಂಸಲೇಖ ಅವರ ಕವಿತ್ವ, ಆಳವಾದ ದೇಸಿಪ್ರಜ್ಞೆ, ರಸಿಕಪ್ರಜ್ಞೆ, ನಾಡು, ನುಡಿಯ ಆಳ ಸತ್ವವನ್ನು ಅರಿಯಲು ಈ ಕೃತಿ ಕಿಟಕಿ'' ಎಂದು ಕೃತಿಯ ಬೆನ್ನುಡಿಯಲ್ಲಿ ವಿಕಾಸ್ ನೇಗಿಲೋಣಿ ಬರೆದಿದ್ದಾರೆ.




ಪು: 140 ₹160

**ಹಂಸಾಕ್ಷರ**
ಲೇ: ಜಯರಾಮಾಚಾರಿ
ಪ್ರ: ವೀರಲೋಕ
ಸಂ: 7022122121

## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

### ತಪೋತರು

ಕುವೆಂಪು ಅವರು ಅನಂತಶಕ್ತನ ಭಕ್ತಿಯಲ್ಲಿ ಮಿಂದು ಶುದ್ಧ ಭಾವದ ಜೀವನ ನಡೆಯಲ್ಲಿ ಧ್ಯಾನಶೀಲವಾಗುವುದರ ಸಂಕೇತವಾಗಿ 'ತಪೋತರು' ಪದ ಸೃಷ್ಟಿಸಿದ್ದಾರೆ. ತಪೋಧರನು ಭಗವಂತನ ಚರಣತಲದಲ್ಲಿ ಅಚಂಚಲ ಭಕ್ತಿ ಬಲದಿಂದ 'ತಪೋತರು'ವಿನಂತಿರಬೇಕು. ಬಹಿರ್ಭಾಗದಲ್ಲಿ ಎಲ್ಲರಿಗೆ ನೆರಳು ಆಸರೆಯಾಗಿ, ಹಸಿರಾಗಿ ತಂಪು, ಮಧುರ ಫಲ ನೀಡುತ್ತ ಆನಂದದಿಂದಿರಬೇಕು. ಅಂತರ್ಭಾಗದಲ್ಲಿ ಸುನಿಶ್ಚಯ, ಸುಚಂಚಲ ಬೇರಿನಿಂದ ಜಲದ ಸ್ಪರ್ಶಕ್ಕೆ ಒಳಗಾಗಿ ಶಾಂತವಾಗಿ ಜೀವ ದ್ರವ್ಯ ಹೀರಿಕೊಳ್ಳುತ್ತ ಇಡೀ ಮರಕ್ಕೆ ಪೋಷಕವಾಗಬೇಕು. ಆಗ ಆ 'ತಪೋತರು'ವಿನಿಂದ ಶ್ರೇಷ್ಠ ಫಲ ಮೂಡುವುದು.

'ಎಲ್ಲ ಸುಚಂಚಲ! ಒಂದೆ ಅಚಂಚಲ;
ನಿನ್ನ ಚರಣತಲ ಭಕ್ತಿಬಲ!
ಎಲ್ಲ ಬಲಗಳಿಗೆ ತಾ ಮೂಲದ ಬಲ,
ಸಕಲ ತಪೋತರು ಪರಮಫಲ !
(ಅನಿಶ್ಚಯ-ಸುನಿಶ್ಚಯ-ಅಗ್ನಿಹಂಸ)

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಪ್ರಜಾವಾಣಿ ದೀಪಾವಳಿ ಸ್ಪರ್ಧೆ 2023ರಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ, ಕವನ.

ಕಥೆ
ಅರ್ಪಣ ಎಚ್ ಎಸ್ ಅವರ
ಚಾವಡಿ ಮತ್ತು ನಡುಮನೆಯ ಮಧ್ಯದಲ್ಲೊಂದು ಆಳ ಕಣಿವೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಶ್ರುತಿ ಬಿ ಆರ್ ಅವರ
ತಾಯಿಯಾಗಿದ್ದೇನೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

# ವೈವಿಧ್ಯ, ಹೊಸತನದ ದರ್ಶನ




ದೀಪಾವಳಿ ವಿಶೇಷಾಂಕ–2023 ಪ್ರತಿಕ್ರಿಯೆಗಳು

**ಈ ಹಿಂದೆ** ಕತೆ, ಕವನ, ಚುಟುಕುಗಳಿಂದ ಇಡುಕಿರಿದಿರುತ್ತಿದ್ದ ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ಇತ್ತೀಚೆಗೆ ಕಥನೇತರ ಪ್ರಕಾರಕ್ಕೆ ಹೆಚ್ಚು ತೆರೆದುಕೊಂಡಿರುವುದು ಕಾಣುತ್ತದೆ. ಹೊಸ ಹುಡುಗರ ಕತೆ-ಕವನಗಳ ಜೊತೆಗೆ, ಹಿರಿಯರ ಮುಖ್ಯ ಲೇಖನಗಳನ್ನು ಓದುವುದು ಹೊಸ ಅನುಭವವನ್ನು ಕೊಡುತ್ತಿದೆ. 'ನುಡಿಕಂದೀಲು' ಲೇಖನಗಳು ಮಹತ್ವದ್ದಾಗಿವೆ. ಕೆ.ವಿ. ನಾರಾಯಣ ಅವರ 'ಕನ್ನಡದ ಹೊರಚಾಚುಗಳು' ತನ್ನ ಸಮಗ್ರ ದೃಷ್ಟಿಕೋನದಿಂದಾಗಿ, ಸೂಕ್ಷ್ಮ ಒಳನೋಟಗಳಿಂದಾಗಿ, ತೆರೆದ ಮನಸ್ಸಿನಿಂದ ಭಾಷೆಯ ಬದಲಾವಣೆಗಳನ್ನು ಗಮನಿಸುವ ಕ್ರಮದಿಂದಾಗಿ ಕನ್ನಡದ ಸದ್ಯದ ಬಹುಮುಖ್ಯ ಲೇಖನವೆನ್ನಿಸಿತು. ಭಾಷೆಯ ಬದಲಾವಣೆಯ ಕುರಿತ ಸಿಂಹಾವಲೋಕನ ಇದ್ದರೂ, ಈ ಲೇಖನದಲ್ಲಿ ಅಂಕಿ-ಸಂಖ್ಯೆ ಕಡಿಮೆ ಇದ್ದವು. ಯಾವುದೇ ವಾದವನ್ನು ಮಂಡಿಸುವಾಗಲೂ, ಅದೂ ಭಾಷೆಯ ಕುರಿತು, ಸಮೀಕ್ಷೆ ನಡೆಸಿ ಖಚಿತ ಪ್ರಮಾಣಗಳನ್ನು ಬಳಸುವುದು ಉಚಿತ.

ವಿಕ್ರಮ ವಿಸಾಜಿ ಅವರ ವಾರಾಣಸಿ ಕುರಿತ ಲೇಖನ ತನ್ನ ಮಾಹಿತಿಬಾಹುಳ್ಯದಿಂದಾಗಿ ಇಷ್ಟವಾಯ್ತು. ಲೇಖನದ ಆರಂಭದ ಒಂದೆರಡು ಪ್ಯಾರಾಗಳಲ್ಲಿ ಇಡೀ ವಾರಾಣಸಿಯ ರೂಪುರೇಷೆಯನ್ನು ಲೇಖಕರು ರೂಪಕಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ವಾರಾಣಸಿ ಹಿನ್ನೆಲೆಯಲ್ಲಿ ಅದೆಷ್ಟು ಮಹತ್ವದ ವ್ಯಕ್ತಿಗಳು ಒಡಮೂಡಿದ್ದಾರೆ!

ಈ ಸಲದ ಪ್ರಥಮ ಬಹುಮಾನಿತ ಕತೆ ಹಲವು ಕಾರಣಕ್ಕೆ ರೂಢಿ ಮುರಿದ ಆಯ್ಕೆ. 'ಸಾಮಾಜಿಕ ಕಾಳಜಿ'ಯನ್ನು ಸೀಮಿತ ದೃಷ್ಟಿಕೋನದಿಂದ ನೋಡಿ, ಕಥಾವಸ್ತುವಿಗೆ ಪ್ರಾಮುಖ್ಯ ಕೊಟ್ಟು, ಕಥಾಕೌಶಲ ಗೌಣವಾದ ಕತೆಗಳೇ ಹೆಚ್ಚಾಗಿ ಆಯ್ಕೆಯಾಗುತ್ತಿದ್ದವು. ಈ ಸಲದ ಆಯ್ಕೆಯಲ್ಲಿ ವಸ್ತುವಿನ ಹೊಸತನ, ಸೂಕ್ಷ್ಮಭಾಷೆ, ನೋಟಗಳಿಗೆ ಪ್ರಾಮುಖ್ಯ ದೊರಕಿದೆ. ಅದಕ್ಕಾಗಿ ನಿರ್ಣಾಯಕರಿಬ್ಬರನ್ನೂ ಅಭಿನಂದಿಸುತ್ತೇನೆ. ಎರಡನೆಯ ಬಹುಮಾನವೂ ಕ್ಲೀಷೆಮುಕ್ತವಾಗಿ, ಹೊಸ ಆಯಾಮವೊಂದನ್ನು ನಮಗೆ ಪರಿಚಯಿಸಿತು.

ಧನಾತ್ಮಕ ಬದಲಾವಣೆ 'ಪ್ರಜಾವಾಣಿ'ಯ ಯಾವತ್ತಿನ ನಿಲುವು. ಅದಕ್ಕೆ ಪುರಾವೆಯಂತೆ ಈ ವಿಶೇಷಾಂಕ ವೈವಿಧ್ಯ, ಹೊಸತನದಿಂದ ತುಂಬಿತ್ತು.

**ವಸುಧೇಂದ್ರ**

### ಇಷ್ಟವಾದ open-ness

ಸಮಾಜದ ಬೇರೆ ಬೇರೆ ವಲಯಗಳಲ್ಲಿ ಆಗಿರುವ ಹೊಸ ಧನಾತ್ಮಕ ಬೆಳವಣಿಗೆಯ ವಿಶ್ಲೇಷಣೆ ಸಂಚಿಕೆಯ ಉದ್ದೇಶವಾಗಿರುವುದು ಸಂಕಲನಕ್ಕೆ ಒಂದು ಒಟ್ಟಂದವನ್ನು ಕಲ್ಪಿಸಿದೆ. ಹೊಸ Trends ಗುರುತಿಸುವಾಗ ಗಮನಿಸಲೇಬೇಕಾದ್ದು open-ness. ಇದು ತುಂಬ ಇಷ್ಟವಾಯಿತು. ಸಂಪಾದಕ ಮಂಡಲಿಗೆ ಹೃತ್ಪೂರ್ವಕ ಅಭಿನಂದನೆಗಳು. ಹೀಗೆ theme ಇಟ್ಟುಕೊಂಡು ಕೆಲಸ ಮಾಡುವ ಪ್ರವೃತ್ತಿಯೇ ಈಚಿನ ದಿನಗಳಲ್ಲಿ ಅಪರೂಪವಾಗುತ್ತಿದೆ. ಹಾಗಾಗಿ ತುಂಬ ಸಂತೋಷವಾಯ್ತು.

**ಎಚ್.ಎಸ್. ವೆಂಕಟೇಶಮೂರ್ತಿ,**

### ಸಾಂಸ್ಕೃತಿಕ ಸದಭಿರುಚಿ ಪೊರೆಯುವ ಬರಹಗಳು

